ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ



ನೆರೆ ಪರಿಹಾರದ ಬದಲು ಪ್ರೊಟೊಕೊಲ್ ಆಕ್ರೋಶ ಮೆರೆದ ರಕ್ಷಣಾ ಸಚಿವೆ

ನಿರ್ಮಲಾ ಸೀತಾರಾಮನ್

ಸಂಪುಟ 12 | ಸಂಚಿಕೆ 36 | ಸೆಪ್ಟೆಂಬರ್ 3–9, 2018 | ಪುಟ 16 | ರೂ. 10/-

web: www.janashakthi.co.in e-mail : js_weekly@yahoo.com

ಅಘೋಷಿತ ತುರ್ತು ಪರಿಸ್ಥಿತಿ: ಲಿಂಚಿಂಗ್+ಅರೆಸ್ಟ್





ಎಲ್ಲರ ನಡೆ ದಿಲ್ಲಿಯ ಕಡೆ

ರೈತ-ಕಾರ್ಮಿಕ-ಕೂಲಿಕಾರರ

ಪಾರ್ಲಿಮೆಂಟ್ ಚಲೋ

5 ಸೆಪ್ಟೆಂಬರ್ 2018, ನವದೆಹಲಿ


CITU - AIKS - AIAWU



ಸಮ್ಮಿಶ್ರ ಸರ್ಕಾರದ ನೂರು ದಿನಗಳು



ಗ್ರಾಮ ಪಂಚಾಯತ್ ನೌಕರರ ವಿಜಯ



ರಾಜ್ಯವ್ಯಾಪಿ 'ಸಂವಿಧಾನ ಓದು' ಅಭಿಯಾನ ಆರಂಭ



ಚುನಾವಣಾ ಸುಧಾರಣೆಗಳ ಸಮಯ ಬಂದಿದೆ

ಪ್ರಜಾಪ್ರಭುತ್ವ ಹಕ್ಕುಗಳು ಮತ್ತು ನಾಗರಿಕ ಸ್ವಾತಂತ್ರ್ಯಗಳ ಮೇಲೆ ನಗ್ನ ದಾಳಿ
–ಸಿಪಿಐ(ಎಂ) ಪೊಲಿಟ್‌ಬ್ಯುರೊ ಖಂಡನೆ

ಮಾನವ ಹಕ್ಕುಗಳು ಹಾಗೂ ನಾಗರಿಕ ಹಕ್ಕುಗಳ ಕಾರ್ಯಕರ್ತರು ಮತ್ತು ಎಡಪಂಥೀಯ ಬುದ್ದಿಜೀವಿಗಳ ಮನೆಗಳ ಮೇಲೆ ಆಗಸ್ಟ್ 28ರಂದು ದೇಶದಾದ್ಯಂತ ಪೋಲೀಸರು ದಾಳಿ ನಡೆಸಿರುವುದನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಲವಾಗಿ ಖಂಡಿಸಿದೆ.

ಮುಂಬೈ, ದೆಹಲಿ, ರಾಂಚಿ, ಗೋವಾ, ಹೈದರಾಬಾದ್‌ಗಳಲ್ಲಿ ನಡೆಸಿದ ಈ ದಾಳಿಗಳಿಂದಾಗಿ 'ಸುಧಾ ಭಾರಧ್ವಾಜ್, ವರವರರಾವ್, ಗೌತಮ್ ನವ್ಲೆಖ ಮುಂತಾದವರನ್ನು ಬಂಧಿಸಲಾಗಿದೆ. ಪೋಲೀಸರು ಅವರ ಮನೆಗಳಿಂದ ಲ್ಯಾಪ್‌ಟ್ಯಾಪ್, ಮೊಬೈಲ್, ವೈಯಕ್ತಿಕ ದಾಖಲೆಗಳು ಮುಂತಾದ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ.

ಭೀಮಾ ಕೊರೆಗಾಂವ್‌ನಲ್ಲಿ ನಡೆದ ದಲಿತರ ಮೇಲಿನ ದೌರ್ಜನ್ಯದ ನಂತರ ಮಹಾರಾಷ್ಟ್ರದ ಪೋಲೀಸರು ಕೇಂದ್ರದ ಏಜೆನ್ಸಿಗಳೊಂದಿಗೆ ದಲಿತ ಹಕ್ಕುಗಳ ಕಾರ್ಯಕರ್ತರು ಮತ್ತು ಅವರ ಕೇಸುಗಳನ್ನು ಕೈಗೆತ್ತಿಕೊಳ್ಳುತ್ತಿರುವ ವಕೀಲರುಗಳ ಮೇಲೆ ಗುರಿಯಿಟ್ಟಿದ್ದಾರೆ. ಸುಳ್ಳು ಆರೋಪಗಳನ್ನು ಹೊರಿಸಲಾಗಿದೆ ಮತ್ತು ಕರಾಳ ಯುಎಪಿಎ (ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆ) ಯನ್ನು ಬಳಸಲಾಗಿದೆ.

ಇವೆಲ್ಲವು ಪ್ರಜಾಪ್ರಭುತ್ವ ಹಕ್ಕುಗಳು ಮತ್ತು ನಾಗರಿಕ ಸ್ವಾತಂತ್ರ್ಯಗಳ ಮೇಲಿನ ನಗ್ನ ದಾಳಿಗಳಾಗಿವೆ.ಈ ಕೇಸುಗಳನ್ನು ಹಿಂತೆಗೆದುಕೊಳ್ಳಬೇಕು ಮತ್ತು ಎಲ್ಲ ಬಂಧಿತ ಕಾರ್ಯಕರ್ತರನ್ನು ಬಿಡುಗಡೆ ಮಾಡಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹಿಸಿದೆ.

ಭುಗಿಲೇಳುತ್ತಿರುವ ಪ್ರತಿಭಟನೆಯ ದನಿಗಳನ್ನು ಅಡಗಿಸುವ ಪ್ರಯತ್ನ–ಸಿಐಟಿಯು ಖಂಡನೆ

ದೇಶದ ಪ್ರಮುಖ ಕಾರ್ಮಿಕ ಸಂಘಟನೆ ಸಿಐಟಿಯು ಕೂಡ ಮಹಾರಾಷ್ಟ್ರ ಸರಕಾರ ಮತ್ತು ಕೇಂದ್ರೀಯ ಏಜೆನ್ಸಿಗಳಿಂದ ದಲಿತ ಹಕ್ಕುಗಳು ಮತ್ತು ಮಾನವ ಹಕ್ಕುಗಳ ಹೋರಾಟಗಾರರ ಮನೆ ಮೆಲೆ ದಾಳಿಗಳು ಮತ್ತು ಬಂಧನಗಳನ್ನು ಬಲವಾಗಿ ಖಂಡಿಸಿದೆ.

ಇದು ಭಿನ್ನಾಭಿಪ್ರಾಯಗಳ ದನಿಯಡಗಿಸುವ ನಗ್ನ ಪ್ರಯತ್ನ ಎಂದು ಅದು ವರ್ಣಿಸಿದೆ. ಭಿನ್ನಾಭಿಪ್ರಾಯ ವ್ಯಕ್ತಪಡಿಸುವುದು ಯಾವುದೇ ಪ್ರಜಾಪ್ರಭುತ್ವ ವ್ಯವಸ್ಥೆಯ ಅಭಿನ್ನ ಅಂಗ. ಸರಕಾರದ ದುಡಿಯುವ ಜನ–ವಿರೋಧಿ ಮತ್ತು ರಾಷ್ಟ್ರ–ವಿರೋಧಿ ಧೋರಣೆಗಳ ವಿರುದ್ಧ ಭುಗಿಲೇಳುತ್ತಿರುವ ಪ್ರತಿಭಟನೆಯ ಮಹಾಪೂರಗಳನ್ನು ಹತ್ತಿಕ್ಕಲು ಕರಾಳ ಕಾನೂನುಗಳನ್ನೂ ಬಳಸುತ್ತಿದೆ ಎಂದಿರುವ ಸಿಐಟಿಯು ಎಲ್ಲ ಪ್ರಜಾಪ್ರಭುತ್ವ–ಮನೋಭಾವದ ವ್ಯಕ್ತಿಗಳು ಮತ್ತು ಸಂಘಟನೆಗಳು ಇದನ್ನು ಖಂಡಿಸಲು ಮುಂದೆ ಬರಬೇಕು ಮತ್ತು ಇಂತಹ ಸರ್ವಾಧಿಕಾರಶಾಹಿ ಪ್ರಹಾರಗಳನ್ನು ಪ್ರತಿರೋಧಿಸಬೇಕು ಎಂದು ಕರೆ ನೀಡಿದೆ.

ಪ್ರತಿಭಟನೆಗಳನ್ನು ಹತ್ತಿಕ್ಕುವ ಕೇಸರಿ ರಾಜಕೀಯದ ಭಾಗ
–ಜನವಾದಿ ಮಹಿಳಾ ಸಂಘಟನೆ ಖಂಡನೆ

ಇದೊಂದು ದಮನಕಾರಿ ಮತ್ತು ಸ್ವೇಚ್ಛಾಚಾರೀ ಕ್ರಮ ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘ(ಎಐಡಿಡಬ್ಲ್ಯುಎ) ಖಂಡಿಸಿದೆ. ಇದು ಸಂಘ ಪರಿವಾರ ಮತ್ತು ಅದರ ಕಾವಲುಕೋರ ಪಡೆಗಳ ಭಯೋತ್ಪಾದನಾ ಕಾರ್ಯತಂತ್ರಗಳ ವಿರುದ್ಧ ದನಿ ಎತ್ತಿದ್ದಕ್ಕಾಗಿ, ಜನಗಳನ್ನು ಇದರ ವಿರುದ್ಧ ಸಂಘಟಿಸುತ್ತಿರುವುದಕ್ಕಾಗಿ ಅವರ ದನಿ ಅಡಗಿಸುವ ಕೇಸರಿ ರಾಜಕೀಯದ ಭಾಗವಾಗಿದೆ ಎಂದು ಅದು ಅಭಿಪ್ರಾಯ ಪಟ್ಟಿದೆ.

ಇದು ಗೌರಿ ಲಂಕೇಶ್ ಅವರ ಕೊಲೆಯ ಮತ್ತು ಈದ್ ಮತ್ತು ಗಣೇಶ ಚತುರ್ಥಿ ವೇಳೆಯಲ್ಲಿ ಸರಣಿ ಬಾಂಬ್ ಸ್ಫೋಟಗಳಿ ಸಂಚು ಹೂಡಿರುವ ಆಪಾದನೆ ಇರುವ ಸನಾತನ ಸಂಸ್ಥಾದಂತಹ ಕೇಸರಿ ಭಯೋತ್ಪಾದಕ ಸಂಘಟನೆಗಳ ಮೇಲೆ ಕ್ರಮಕೈಗೊಳ್ಳದಿರುವುದನ್ನು ಮರೆಮಾಚುವ, ಸಾರ್ವಜನಿಕರನ್ನು ಮರುಳು ಮಾಡುವ ತಂತ್ರಗಳ ಭಾಗವಾಗಿಯೂ ಕಾಣ ಬರುತ್ತದೆ ಎಂದು ಎಐಡಿಡಬ್ಲ್ಯುಎ ಹೇಳಿದೆ.

ಈ ಕರಾಳ ಸರಕಾರದ ವಿರುದ್ಧ ಎಲ್ಲ ಪ್ರಜಾಪ್ರಭುತ್ವವಾದಿ ಜನವಿಭಾಗಗಳು ಸಂಘಟಿತರಾಗಬೇಕು, ಜನಗಳನ್ನು ಅಣಿನೆರೆಸಬೇಕು ಎಂದು ಎಐಡಿಡಬ್ಲ್ಯುಎ ಕರೆ ನೀಡಿದೆ.

ಈ ಗೌರವಾನ್ವಿತ ವ್ಯಕ್ತಿಗಳನ್ನು ಬಂಧಿಸಲು ಆಧಾರಗಳೇ ಇಲ್ಲ –ಅಖಿಲ ಭಾರತ ವಕೀಲರ ಸಂಘ

ಸುಪ್ರಿಂ ಕೋರ್ಟಿನಲ್ಲಿ ಪ್ರಾಥಮಿಕ ವಿಚಾರಣೆಯ ವೇಳೆಯಲ್ಲಿ ಬಂಧಿತರ ರಿಮಾಂಡ್ ಕೋರುತ್ತ ಮಹಾರಾಷ್ಟ್ರ ಪೋಲೀಸರು ಪ್ರಸ್ತುತ ಪಡಿಸಿರುವ ಸಾಮಗ್ರಿಗಳು ಮತ್ತು ತರ್ಕಗಳನ್ನು ನೋಡಿದರೆ ಈ ಗೌರವಾನ್ವಿತ ವ್ಯಕ್ತಿಗಳ ಬಂಧನಕ್ಕೆ ಯಾವುದೇ ಆಧಾರಗಳಿಲ್ಲ ಎಂಬುದು ಸುಸ್ಪಷ್ಟ ಎಂದು ಅಖಿಲ ಭಾರತ ವಕೀಲರ ಸಂಘ(ಎಐಎಲ್‌ಯು) ಹೇಳಿದೆ.

ಬಿಜೆಪಿ–ಆರೆಸ್ಸೆಸ್ ಗುರಿಯಾಗಿಟ್ಟುಕೊಂಡಿರುವ ದಲಿತರು ಮತ್ತು ಅಲ್ಪಸಂಖ್ಯಾತರನ್ನು ಜನಗಳು ಬೆಂಬಲಿಸದಂತೆ ಮಾಡಲಿಕ್ಕೆ ಮತ್ತು ಸರಕಾರದ ಅಭಿಪ್ರಾಯಗಳನ್ನು ಒಪ್ಪದವರ ಬಾಯಿ ಮುಚ್ಚಿಸಲಿಕ್ಕೆ ಈ ಬಂಧನಗಳನ್ನು ನಡೆಸಿರುವಂತೆ ಕಾಣುತ್ತದೆ. ಅಲ್ಲದೆ, ಸರಕಾರ ನೀಡಿದ ಆಶ್ವಾಸನೆಗಳನ್ನು ಈಡೇರಿಸುವಲ್ಲಿನ ವಿಫಲತೆಗಳನ್ನು ಮತ್ತು ಇತ್ತೀಚೆಗೆ ಬೆಳಕಿಗೆ ಬಂದಿರುವ ಸನಾತನ ಸಂಸ್ಥಾ ಮುಂತಾದ ಕೃಪಾಪೋಷಿತ ಕೋಮುವಾದಿ ಶಕ್ತಿಗಳ ಭಯೋತ್ಪಾದಕ ಪಿತೂರಿಗಳನ್ನು ಮರೆಮಾಚಲು ಪ್ರಧಾನ ಮಂತ್ರಿಗಳ ವಿರುದ್ಧ ಸಂಚು ನಡೆದಿದೆ ಎಂದು ದೊಡ್ಡ ಸುದ್ದಿ ಮಾಡುವ ಪ್ರಯತ್ನವಾಗಿಯೂ ಇದು ಕಾಣುತ್ತದೆ ಎಂದು ಎಐಎಲ್‌ಯು ಹೇಳಿದೆ.

ಹಿಂದುತ್ವ ಭಯೋತ್ಪಾದನೆಯಿಂದ ಗಮನ ಬೇರೆಡೆಗೆ ಸೆಳೆಯಲು ಸರಕಾರೀ ಭಯೋತ್ಪಾದನೆ–ಜೆಇಜೆಎಎ ಖಂಡನೆ

ಸುಪರಿಚಿತ ಪ್ರಾಧ್ಯಾಪಕರು, ವಕೀಲರು, ಲೇಖಕರು, ಕವಿಗಳು ಮತ್ತು ಪತ್ರಕರ್ತರ ಮನೆಗಳ ಮೇಲೆ ಪೋಲೀಸ್ ದಾಳಿಗಳು ಮತ್ತು ಬಂಧನಗಳು ಮುಯ್ಯಿ ತೀರಿಸಿಕೊಳ್ಳಲು ಹೊರಟಿರುವ ಸರಕಾರೀ ಭಯೋತ್ಪಾದನೆ ಎಂದು ದುಡಿಯುವ ಜನವಿಭಾಗಗಳು ಮತ್ತು ಪ್ರಜಾಪ್ರಭುತ್ವವಾದಿ ಸಂಘಟನೆಗಳ ಐಕ್ಯ ಆಂದೋಲನವಾಗಿರುವ 'ಜನ ಏಕತಾ ಜನ ಅಧಿಕಾರ ಆಂದೋಲನ'(ಜೆಇಜೆಎಎ) ಖಂಡಿಸಿದೆ.

ಸಂಘ ಪರಿವಾರ ಮತ್ತು ಅವರ ಕಾವಲುಕೋರ ಗುಂಪುಗಳ ರಾಜಕೀಯದ ವಿರುದ್ಧ 'ದನಿಯೆತ್ತುತ್ತಿರುವುದಕ್ಕೆ, ಜನಗಳನ್ನು ಸಂಘಟಿಸುತ್ತಿರುವುದಕ್ಕೆ ಮುಯ್ಯಿ ತೀರಿಸುಕೊಳ್ಳುವ ಕ್ರಮಗಳಿವು. 'ಸನಾತನ ಸಂಸ್ಥಾ'ದಂತಹ ಹಿಂದುತ್ವ ಸಂಘಟನೆಗಳ ಮೇಲೆ ವಿಚಾರವಾದಿಗಳ, ಲೇಖಕರ ಕೊಲೆಗಳ ಸಂಚು ನಡೆಸಿರುವ ಮತ್ತು ಸರಣಿ ಸ್ಫೋಟದ ಸಂಚು ಹೂಡಿರುವ ಗಂಭೀರ ಆರೋಪದಿಂದ ಜನಗಳ ಗಮನವನ್ನು ಬೇರೆಡೆಗೆ ಸೆಳೆಯುವ ಹುನ್ನಾರ ಕೂಡ ಇದರ ಹಿಂದಿದೆ ಎಂದಿರುವ ಜೆಇಜೆಎಎ ತಕ್ಷಣವೇ ಈ ಬಂಧಿತ ಬುದ್ಧಿಜೀವಿಗಳನ್ನು ಬಿಡುಗಡೆ ಮಾಡಬೇಕು, ಅವರ ಮೇಲಿನ ಸುಳ್ಳು ಕೇಸುಗಳನ್ನು ಹಿಂದಕ್ಕೆ ತಗೊಳ್ಳಬೇಕು ಎಂದು ಆಗ್ರಹಿಸಿದೆ.

ಮಾನವ ಹಕ್ಕುಗಳ ಹೋರಾಟಗಾರರನ್ನು 'ನಗರಪ್ರದೇಶದ ನಕ್ಸಲೀಯರು' ಎಂದು ಹಣೆ ಪಟ್ಟಿ ಹಚ್ಚುವುದು, ಸುಳ್ಳು ಆರೋಪಗಳನ್ನು ಹೊರಿಸಿ ಅವರ ಬೇಟೆಯಾಡುವುದು ಸ್ವೇಚ್ಛಾಚಾರೀ ವರ್ತನೆ, ಅಧಿಕಾರದ ದುರುಪಯೋಗವಾಗುತ್ತದೆ ಎಂದು ಜೆಇಜೆಎಎ ಕೇಂದ್ರದ ಮತ್ತು ಝಾರ್ಖಂಡ್ ಮತ್ತು ಗೋವಾ ರಾಜ್ಯಗಳ ಬಿಜೆಪಿ ಸರಕಾರಗಳನ್ನು ಎಚ್ಚರಿಸಿದೆ.

ಅಗಸ್ಟ್ 30ರಂದು ದಿಲ್ಲಿಯ ಜಂತರ್ ಮಂತರ್‌ನಲ್ಲಿ ಜೆಇಜೆಎಎ ನೇತೃತ್ವದಲ್ಲಿ ಪ್ರತಿಭಟನೆ





ನಿಜವಾದ ಕ್ರಿಮಿನಲ್ ಪಿತೂರಿಯತ್ತ ಗಮನ ತಪ್ಪಿಸಲು ಸುಳ್ಳು ಪಿತೂರಿಯ ಸೃಷ್ಟಿ–ಭಾರತೀಯ ಸಾಂಸ್ಕೃತಿಕ ವೇದಿಕೆ ಖಂಡನೆ

ಇದೊಂದು ಭಾರತೀಯ ಪ್ರಜಾಪ್ರಭುತ್ವಕ್ಕೆ ಅಪಾಯಕಾರಿ ಕ್ರಮ ಎಂದು ಇಂಡಿಯನ್ ಕಲ್ಚರಲ್ ಫೋರಂ(ಐಸಿಎಫ್–ಭಾರತೀಯ ಸಾಂಸ್ಕೃತಿಕ ವೇದಿಕೆ) ಈ ಬಂಧನಗಳನ್ನು ಖಂಡಿಸುತ್ತ ಹೇಳಿದೆ.

ದಕ್ಷಿಣಾಯನ ಕರ್ನಾಟಕದ ಗಣೇಶ ದೇವಿ ಮತ್ತಿತರ ಲೇಖಕರು, ಕಲಾವಿದರು, ರೊಮಿಲಾ ಥಾಪರ್, ನಯನತಾರಾ ಸೆಹಗಲ್, ಅರುಂಧತಿ ರಾಯ್, ಸಚ್ಚಿದಾನಂದನ್, ಟಿ ಎಂಕೃಷ್ಣ ಸೇರಿದಂತೆ ದೇಶದ ಹತ್ತಾರು ಪ್ರಸಿದ್ಧ ಲೇಖಕರು, ಕಲಾವಿದರು ಐಸಿಎಫ್‌ನ ಈ ಹೇಳಿಕೆಗೆ ಸಹಿ ಹಾಕಿರುವ ಈ ಹೇಳಿಕೆ **ಗೌರಿ ಲಂಕೇಶ್, ಎಂ ಎಂ ಕಲ್ಬುರ್ಗಿ, ಗೋವಿಂದ ಪನ್ಸರೆ ಮತ್ತು ನರೇಂದ್ರ ದಭೋಲ್ಕರ್ ಹತ್ಯೆಗಳ ತನಿಖೆಗಳು ಬಾಂಬುಗಳು, ಗನ್‌ಗಳು, ಶಸ್ತ್ರ ತರಬೇತಿಗೆ ಕ್ಯಾಂಪುಗಳು, ಹಿಟ್‌ಲಿಸ್ಟ್‌ಗಳು ಮತ್ತು ಯೋಜನೆಗಳನ್ನು ಬಯಲಿಗೆ ತರುತ್ತಿರುವ ಸಂದರ್ಭದಲ್ಲಿ ಈ ಸರಣಿ ಬಂಧನಗಳು ಆಗುತ್ತಿವೆ** ಎಂಬ ಸಂಗತಿಯತ್ತ ಗಮನ ಸೆಳೆದಿದೆ. ಕೊಲ್ಲುವ, ವೈವಿಧ್ಯತೆ ಮತ್ತು ಭಿನ್ನಾಭಿಪ್ರಾಯವನ್ನು ಹತ್ತಿಕ್ಕುವ, ಸಂವಿಧಾನವನ್ನು ಹಾಗೂ ಅದು ನಮಗೆ ಆಶ್ವಾಸನೆ ನೀಡಿದ ಭಾರತವನ್ನು ಕಳಚಿ ಹಾಕುವ ಕ್ರಿಮಿನಲ್ ಪಿತೂರಿ. ಇದರಿಂದ ಸಾರ್ವಜನಿಕರ ಗಮನವನ್ನು ಬೇರೆಡೆಗೆ ತಿರುಗಿಸಲು ಒಂದು ಸುಳ್ಳು ಪಿತೂರಿಯನ್ನು ಸೃಷ್ಟಿಸಲಾಗಿದೆ ಎಂದು ಈ ಹೇಳಿಕೆ ಅಭಿಪ್ರಾಯ ಪಟ್ಟಿದೆ.

ಸಾಯ ಬಡಿವ ಹಿಂಡುಗಳ ನಂತರ ಈಗ ಸರಕಾರೀ ಬಂಧನಗಳ ಸರಣಿ– ಪ್ರತಿಷ್ಠಿತ ವ್ಯಕ್ತಿಗಳ ಖಂಡನೆ

ದೇಶದ ವಿವಿಧೆಡೆಗಳಲ್ಲಿ ಏಕಕಾಲದಲ್ಲಿ ಹಲವು ಪ್ರತಿಷ್ಠಿತ ನಾಗರಿಕ ಹಕ್ಕುಗಳ ಹೋರಾಟಗಾರರ ಬಂಧನ ಮತ್ತು ಅವರ ಮನೆಗಳ ಮೇಲೆ ದಾಳಿಗಳು ಅತ್ಯಂತ ಆಘಾತಕಾರಿ ಮತ್ತು ದಿಗಿಲುಗೊಳಿಸುವ ಸುದ್ದಿ ಎಂದು ದೇಶದ 92 ಪ್ರತಿಷ್ಠಿತ ವ್ಯಕ್ತಿಗಳು ನೀಡಿರುವ ಒಂದು ಜಂಟಿ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಹಿರಿಯ ಇತಿಹಾಸಜ್ಞ ಪ್ರೊ.ಇರ್ಫಾನ್ ಹಬಿಬ್, ಆರ್ಥಶಾಸ್ತ್ರಜ್ಞರಾದ ಪ್ರೊ. ಪ್ರಭಾತ್ ಪಟ್ನಾಯಕ್, ಪ್ರೊ.ಎ.ಕೆ.ಬಾಗ್ಚಿ, ಪ್ರೊ. ಜಯತಿ ಘೋಷ್, ಪ್ರೊ. ಸಿ.ಪಿ.ಚಂದ್ರಶೇಖರ್, ಪ್ರಸಿದ್ಧ ಕಲಾವಿದರಾದ ವಿವಾನ್ ಸುಂದರಂ, ಎಂ.ಕೆ.ರೈನ, ಸೈಯದ್ ಮಿರ್ಝಾ ಮುಂತಾದವರು ಈ ಜಂಟಿ ಹೇಳಿಕೆಗೆ ಸಹಿ ಹಾಕಿದ್ದಾರೆ.

ಈ ವ್ಯಕ್ತಿಗಳನ್ನು ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆ(ಯುಎಪಿಎ) ಅಡಿಯಲ್ಲಿ ಬಂಧಿಸಿದ್ದರೂ ಅವರು ನಡೆಸಿರುವ ಕಾನೂನುಬಾಹಿರ ಚಟುವಟಿಕೆಗಳೇನು ಎಂಬುದು ಸ್ಪಷ್ಟವಾಗಿಲ್ಲ. ಬಹಳಷ್ಟು ಬಂಧಿತರ ಕುಟುಂಬಗಳವರಿಗೂ ಅವರನ್ನು ಏಕೆ ಬಂಧಿಸಲಾಗಿದೆ ಎಂಬುದನ್ನು ತಿಳಿಸಿಲ್ಲ. ಕೆಲವೆಡೆಗಳಲ್ಲಿ ವರದಿಯಾಗಿರುವ ಆರೋಪಗಳು ವಿಲಕ್ಷಣ ಹಾಗೂ ವಿಚಿತ್ರವಾಗಿವೆ, ಪುರಾವೆಯಾಗಿ ತೋರಿಸುತ್ತಿದ್ದಾರೆ ಎನ್ನಲಾದ ದಾಖಲೆಗಳ ಋಜುತ್ವ ಅತ್ಯಂತ ಪ್ರಶ್ನಾರ್ಹವಾಗಿವೆ. ಇವರೆಲ್ಲರೂ ಒಂದೇ ಗುಂಪಿಗೆ ಸೇರಿದವರೆಂದೂ ಹೇಳಲು ಸಾಧ್ಯವಿಲ್ಲ. ಇವರೆಲ್ಲರಿಗೂ ಸಮಾನವಾದ ಒಂದು ಅಂಶವೆಂದರೆ ಅವರೆಲ್ಲರೂ ಸಮಾಜದಲ್ಲಿ ದಮನಕ್ಕೊಳಗಾಗಿರುವ, ಮತ್ತು ಅಂಚಿಗೆ ತಳ್ಳಲ್ಪಟ್ಟಿರುವ ವಿಭಾಗಗಳ ಪ್ರಜಾಪ್ರಭುತ್ವ ಹಕ್ಕುಗಳನ್ನು ಎತ್ತಿ ಹಿಡಿಯುವವರು .

ಆದ್ದರಿಂದ ಇದು ದಮನಕ್ಕೊಳಗಾದವರ ಪರವಾಗಿ ದನಿ ಎತ್ತುವ ಮತ್ತು ಸರಕಾರ ಅವರ ಹಕ್ಕುಗಳನ್ನು ದಮನ ಮಾಡುತ್ತಿದೆ ಎಂದು ಟೀಕಿಸುವ ಧೈರ್ಯ ತೋರಿಸಿದವರನ್ನು ಬೇಟೆಯಾಡುವ ಕ್ರಮ ಎಂಬ ತೀರ್ಮಾನಕ್ಕೆ ಬರಲೇಬೇಕಾಗುತ್ತದೆ ಎಂದು ದೇಶದ ಈ ವಿವಿಧ ಕ್ಷೇತ್ರಗಳ ಪ್ರತಿಷ್ಠಿತಿ ವ್ಯಕ್ತಿಗಳು ಎಂದು ಹೇಳಿದ್ದಾರೆ.

ಇದುವರೆಗೆ ಅಲ್ಪಸಂಖ್ಯಾತರು ಮತ್ತು ಭಿನಾಭಿಪ್ರಾಯ ಹೊಂದಿರುವ ಚಿಂತಕರನ್ನು ಬೆನ್ನಟ್ಟಿ ಸಾಯಬಡಿವ ಹಿಂಡುಗಳ ಬಗ್ಗೆ ಪರೋಕ್ಷ ಬೆಂಬಲ ನೀಡುತ್ತಿದ್ದ ದೇಶದಲ್ಲಿ ಈಗ ಅಧಿಕಾರ ನಡೆಸುತ್ತಿರುವ ಬಿಜೆಪಿ ಸರಕಾರ ಇದುವರೆಗೆ ತಾನೇ ಬೆನ್ನಟ್ಟುತ್ತಿರಲಿಲ್ಲ. ಈಗ ಅಂತಹ ಸ್ಥಿಮಿತವನ್ನೂ ಕೈಬಿಟ್ಟಿರುವಂತೆ ಕಾಣುತ್ತದೆ ಎಂದು ಖೇದ ವ್ಯಕ್ತಪಡಿಸಿರುವ ಈ ಪ್ರತಿಷ್ಠಿತ ವ್ಯಕ್ತಿಗಳು ನಮ್ಮ ಪ್ರಜಾಪ್ರಭುತ್ವಕ್ಕೆ ಇದು ಒಡ್ಡಿರುವ ಅಪಾಯ ಸ್ಪಷ್ಟವಾಗಿ ಗೋಚರವಾಗುತ್ತಿದೆ ಎನ್ನುತ್ತ ಈ ಬಂಧನಗಳನ್ನು ನಿಸ್ಸಂದಿಗ್ಧವಾಗಿ ಬಲವಾಗಿ ಖಂಡಿಸುತ್ತೇವೆ ಮತ್ತು ಬಂಧಿತ ನಾಗರಿಕ ಹಕ್ಕುಗಳ ಹೋರಾಟಗಾರರನ್ನು ಬಿಡುಗಡೆ ಮಾಡಬೇಕು ಎಂದು ಆಗ್ರಹಿಸುತ್ತೇವೆ ಎಂದಿದ್ದಾರೆ.

ಸಂಪಾದಕೀಯ

ಸಮ್ಮಿಶ್ರ ಸರಕಾರದ ನೂರು ದಿನಗಳು

ಅಂತೂ ಇಂತೂ ಕಾಂಗ್ರೆಸ್–ಜೆಡಿ(ಎಸ್) ಸಮ್ಮಿಶ್ರ ಸರಕಾರ ನೂರು ದಿನಗಳನ್ನು ಪೂರೈಸಿದೆ. ನೂರು ದಿನಗಳ ಕಾಲ ಒಂದು ರಾಜ್ಯ ಸರಕಾರದ ಆಯುಷ್ಯದಲ್ಲಿ ಸಣ್ಣದಾದರೂ, ಅದರ ಮುಂದಿನ ಸಾಧನೆಗಳ ಸಣ್ಣ ಸೂಚನೆಯನ್ನಾದರೂ ಕೊಡುತ್ತದೆ. ರಾಜ್ಯದ ಹೆಚ್ಚಿನ ಮಾಧ್ಯಮಗಳು ಮತ್ತು ರಾಜಕೀಯ ವೀಕ್ಷಕರು ಸರಕಾರದ ಭದ್ರತೆ ಅಥವಾ ಅಭದ್ರತೆ ಬಗ್ಗೆ ಹೆಚ್ಚು ಒತ್ತು ಕೊಟ್ಟಿದ್ದಾರೆ. ಆದರೆ ಸರ್ವಾಧಿಕಾರಶಾಹಿ ತಾಂಡವವಾಡುತ್ತಿರುವ ಇಂದಿನ ಕರಾಳ ರಾಜಕೀಯ ಪರಿಸ್ಥಿತಿಯಲ್ಲಿ, ಬಿಜೆಪಿಯನ್ನು ಒಂದು ರಾಜ್ಯದಲ್ಲಾದರೂ ಸರಕಾರದಿಂದ ಹೊರಗಿಟ್ಟಿದ್ದು ಒಂದು ಪ್ರಮುಖ ಸಾಧನೆಯೆಂದೇ ಹೇಳಬೇಕು. ಹಾಗೆನೇ ಗೌರಿ ಕೊಲೆಗಡುಕರ ಗ್ಯಾಂಗಿನ ಸರಣಿ ಬಂಧನ ಮತ್ತು ಅದು ಇತರ 3 ಚಿಂತಕರ ಕೊಲೆಯ ಹಿಂದಿರುವ ವ್ಯಾಪಕ ಹಿಂದುತ್ವ ಭಯೋತ್ಪಾದಕ ಜಾಲವನ್ನು ಬೇಧಿಸುವ ಲಕ್ಷಣ ಕಂಡು ಬರುತ್ತಿರುವುದು ಸಹ ಒಂದು ಸಾಧನೆಯೇ. ಈ ಸಾಧನೆಯ ಕ್ರೆಡಿಟ್ ನ ದೊಡ್ಡ ಭಾಗ ಹಿಂದಿನ ಸಿದ್ಧರಾಮಯ್ಯ ಸರಕಾರಕ್ಕೆ ಸಲ್ಲಬೇಕಾದ್ದು. ಆದರೂ ಈ ಸಮ್ಮಿಶ್ರ ಸರಕಾರದಡಿಯಲ್ಲಿ, ಬಿಜೆಪಿ–ಸಂಘ ಪರಿವಾರ ಹಾಗೂ ಕೋಮುವಾದದ ಬಗ್ಗೆ ಹೆಚ್ಚಿನ ಸಾಫ್ಟ್ ಕಾರ್ನರ್ ಇರುವ ಜೆಡಿ–ಎಸ್ ಇರುವುದರಿಂದಾಗಿ ತನಿಖೆ ಇನ್ನಷ್ಟು ಮಂದಗತಿಯಿಂದ ಸಾಗಬಹುದು ಎಂಬ ಆತಂಕ ನಿಜವಾಗದಿರುವುದು ಸಮಾಧಾನಕರ. ಈ ಸಾಧನೆಯನ್ನು ಹೆಚ್ಚಿನ ಮಾಧ್ಯಮಗಳು ಮತ್ತು ರಾಜಕೀಯ ವೀಕ್ಷಕರು ನಿರ್ಲಕ್ಷಿಸಿರುವುದು ಇಂದಿನ ಸಂದರ್ಭದಲ್ಲಿ ಅನಿರೀಕ್ಷಿತವೇನೂ ಅಲ್ಲ. ಆದರೆ ಸಮ್ಮಿಶ್ರ ಸರಕಾರವಾಗಲಿ, ಎರಡೂ ಆಳುವ ರಾಜಕೀಯ ಪಕ್ಷಗಳಾಗಲಿ ಈ ಸಾಧನೆ ಬಗ್ಗೆ ಡಂಗುರ ಹೊಡೆಯದೆ ಮೌನವಾಗಿರುವುದು ಚೋದ್ಯದ ಹಾಗೂ ಸ್ವಲ್ಪ ಮಟ್ಟಿಗೆ ಆತಂಕದ ಸಂಗತಿಯೂ ಆಗಿದೆ.



ಆದರೆ ನಿಜವಾಗಿಯೂ ಬಿಜೆಪಿಯನ್ನು ರಾಜಕೀಯವಾಗಿ ಮೂಲೆಗುಂಪು ಮಾಡುವ ಬದಲಿ ಸೆಕ್ಯುಲರ್ ಜನಪರ ಆರ್ಥಿಕ ನೀತಿಗಳ ಹಾದಿಯನ್ನು ರೂಪಿಸುವ, ಆ ನಿಟ್ಟಿನಲ್ಲಿ ಆಡಳಿತ ಕೊಡುವುದಕ್ಕೆ ಪ್ರಯತ್ನದ ದೃಷ್ಟಿಯಿಂದ ಸಮ್ಮಿಶ್ರ ಸರಕಾರದ ನೂರು ದಿನಗಳ ಆಡಳಿತವನ್ನು ವಿಶ್ಲೇಷಿಸುವುದು ಅಗತ್ಯ. ಸಮ್ಮಿಶ್ರ ಸರಕಾರದ ಆಡಳಿತವನ್ನು ಈ ದೃಷ್ಟಿಯಿಂದ ನೋಡಿದರೆ ನಿರಾಸೆ ಕಾದಿದೆ. ಇದು ಈ ಸರಕಾರದ ಮೊದಲ ಕಾರ್ಯಾಚರಣೆಯಾದ ಬಜೆಟ್ ಹಿಡಿದ ಹಾದಿಯಿಂದಲೇ ಸ್ಪಷ್ಟವಾಗಿತ್ತು. ಬಜೆಟಿನಲ್ಲಿ ಘೋಷಿಸಲಾದ ಸಹಕಾರಿ ಮತ್ತು ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ರೈತರ ಸಾಲ ಮನ್ನಾ ಒಂದೇ ಈ ಸರಕಾರ ಕೈಗೊಂಡ ನಿರ್ದಿಷ್ಟ ಕ್ರಮ. ರೈತರ ಆತ್ಮಹತ್ಯೆ (ಇದಕ್ಕೆ ಬಲಿಯಾಗುವವರು ಬಡ ಮತ್ತು ಮಧ್ಯಮ ರೈತರು ಎಂದು ಗಮನದಲ್ಲಿಟ್ಟುಕೊಂಡು) ತಡೆಯಲು ಮತ್ತು ವ್ಯಾಪಕ ಕೃಷಿ ಬಿಕ್ಕಟ್ಟು, ಗ್ರಾಮೀಣ ಸಂಕಷ್ಟಗಳನ್ನು ಪರಿಹರಿಸುವಲ್ಲಿ ಈ ಕ್ರಮದ ಪರಿಣಾಮಕಾರಿತನದ ಅಭಾವದ ಬಗ್ಗೆ ಈ ಕಾಲಮಿನಲ್ಲಿ ಹಿಂದೆನೇ ವಿಶ್ಲೇಷಿಸಲಾಗಿದೆ. ಮಾತ್ರವಲ್ಲ ಅದಕ್ಕಾಗಿ ಸಂಪನ್ಮೂಲ ಸಂಗ್ರಹಿಸಲು ಬಡವರ ಮೇಲೆ ಹೊರೆಯನ್ನು ಹೊರಿಸಿದ್ದು ಸಹ ಆತಂಕಕಾರಿಯೇ.

ಬಜೆಟ್ ನಂತರದ ಅವಧಿಯಲ್ಲಿ ಅದನ್ನು ಜಾರಿ ಮಾಡುವಲ್ಲಿ ಹೆಚ್ಚೇನೂ ಪ್ರಗತಿಯಾಗಿಲ್ಲ. ಆದರೆ ಸರಕಾರ ಮತ್ತು ಪ್ರಮುಖವಾಗಿ ಜೆಡಿ–ಎಸ್ ಮಂತ್ರಿಗಳು ನಾಯಕರು ಬಜೆಟಿನಲ್ಲಿ ಘೋಷಿಸಲಾದ ಸಾಲಮನ್ನಾ ಕೃಷಿ ಕ್ಷೇತ್ರದ, ಗ್ರಾಮೀಣ ಭಾಗದ ಮತ್ತು ರಾಜ್ಯದ ಎಲ್ಲಾ ಸಮಸ್ಯೆಗಳಿಗೆ ರಾಮಬಾಣ ಎನ್ನುವಂತೆ ವರ್ತಿಸುತ್ತಿರುವುದು ಆತಂಕಕಾರಿ. ರೈತರ ಸಾಲಮನ್ನಾ ನಿರ್ಣಯದಿಂದಾಗಿ ವಿದ್ಯಾರ್ಥಿಗಳ ಉಚಿತ ಬಸ್ ಪಾಸ್ ನಿಂದ ಹಿಡಿದು ಬರ ಪರಿಹಾರ, ನೀರಾವರಿಗಳವರೆಗೆ ಯಾವುದಕ್ಕೂ ಹಣವಿಲ್ಲವೆಂಬಂತೆ ವರ್ತಿಸುತ್ತಿದ್ದಾರೆ. ಸಣ್ಣ ಸಣ್ಣ ಕಾರ್ಯಕ್ರಮಗಳ ಯೋಜನೆಗಳ ಬಗ್ಗೆ ಮಂತ್ರಿಯಿಂದ ಹಿಡಿದು ಕೆಳ ಅಧಿಕಾರಿಯನ್ನು ಭೇಟಿ ಮಾಡುತ್ತಿರುವ ನಾಗರಿಕರು, ಜನನಾಯಕರು, ಸಾಮಾಜಿಕ ಕಾರ್ಯಕರ್ತರು, ರಾಜಕೀಯ ನಾಯಕರಿಗೆ ಅಂತಹ ಭಾವನೆ ಕೊಡಲಾಗುತ್ತಿದೆ. ಸಾಲಮನ್ನಾದ ದೊಡ್ಡ ಆರ್ಥಿಕ ಜವಾಬ್ದಾರಿಯಿಂದ ಎಲ್ಲಾ ಫೈಲು ಮುಖ್ಯಮಂತ್ರಿಗಳ ವರೆಗೆ ಹೋಗಬೇಕು (ಅದು ನಿಜವೋ ಅಲ್ಲವೋ) ಎಂದು ಹೇಳಲಾಗುತ್ತಿದೆಯಂತೆ. ಇನ್ನು ಇತೀಚೆಗೆ ಘೋಷಿಸಲಾದ ಕೈ ಸಾಲ ಮತ್ತು ಲೇವಾದೇವಿಗಾರರ ಸಾಲಮನ್ನಾದ ವಿವರಗಳು ಇನ್ನೂ ಲಭ್ಯವಿಲ್ಲ. ಅದನ್ನು ದೇವರಾಜ ಅರಸು ಸರಕಾರದ ಋಣಮುಕ್ತ ಕಾಯಿದೆಯ ಮಾದರಿಯಲ್ಲಿ ಜಾರಿ ಮಾಡಲಾಗುವುದು ಎನ್ನಲಾಗಿದೆಯಷ್ಟೇ. ವಿದ್ಯಾರ್ಥಿಗಳ ಉಚಿತ ಬಸ್ ಪಾಸ್ ನಂತಹ (ಅದು ಹಿಂದಿನ ಕಾಂಗ್ರೆಸ್ ಸರಕಾರದ ಯೋಜನೆಯೆಂಬ ಕಾರಣಕ್ಕಿರಲಿ ಅಥವಾ ಇಲ್ಲದಿರಲಿ) ಕ್ರಮಗಳ ಬಗ್ಗೆ ನಿರ್ಲಕ್ಷ ಮತ್ತು ವಿಳಂಬ ತೋರಿಸುತ್ತಿರುವುದು ಗಂಭಿರ ಸಮಸ್ಯೆಯ ಪ್ರತೀಕ.

ಇದರರ್ಥ ಸಮ್ಮಿಶ್ರ ಸರಕಾರದ ಭದ್ರತೆಗೆ ತೀವ್ರ ಸವಾಲುಗಳು ಇಲ್ಲ ಅಥವಾ ಅದು ಸರಕಾರದ ನೂರು ದಿನಗಳ ಸಾಧನೆ ಅಳೆಯುವಲ್ಲಿ ಅಮುಖ್ಯ ಎಂಬುದು ಖಂಡಿತ ಅಲ್ಲ. ಎರಡು ಪಕ್ಷಗಳ ನಡುವೆ ಪೂರ್ಣ ಪ್ರಮಾಣದ ಸಾಮರಸ್ಯದ ಅಭಾವದಿಂದಾಗಿ ಮಂತ್ರಿಮಂಡಲದ ರಚನೆ ಇನ್ನೂ ಪೂರ್ಣ ಆಗದಿರುವುದು ಮತ್ತು ಹಲವಾರು ಮಂಡಳಿ ನಿಗಮಗಳ ಮುಖ್ಯಸ್ಥರ ನೇಮಕವಾಗದಿರುವುದು ಸರಕಾರದ ಕೆಲಸದ ಮೇಲೆ ನೇರವಾಗಿ ಪರಿಣಾಮ ಬೀರುವಂಥದ್ದು. ಮೊದಲು ಬಜೆಟಿನ ನಂತರ, ಆ ಮೇಲೆ ಹಲವು ಗಡುವುಗಳ ನಂತರ ಈಗ ಮುನಿಸಿಪಲ್ ಚುನಾವಣೆಗಳ ನಂತರ ಅದನ್ನು ಪೂರ್ಣಗೊಳಿಸಲಾಗುವುದು ಎಂಬುದಾಗಿ ಹೇಳಲಾಗುತ್ತಿದೆ. ಆದರೆ ಸಿದ್ಧರಾಮಯ್ಯ ಸೇರಿದಂತೆ ಹಲವು ಹಿರಿಯ ಕಾಂಗ್ರೆಸ್ ನಾಯಕರು ಸೆಪ್ಟೆಂಬರಿನಲ್ಲಿ ವಿದೇಶ ಪ್ರವಾಸದಲ್ಲಿದ್ದಾರಂತೆ. ಆದ್ದರಿಂದ ಸೆಪ್ಟೆಂಬರ್ ಕೊನೆಯವರೆಗೆ ಅದು ಮುಂದೂಡಲ್ಪಡುತ್ತಿದೆ ಎಂದಾಗಿದೆ. ಸಮ್ಮಿಶ್ರ ಸರಕಾರ ನಡೆಸುತ್ತಿರುವ ಎರಡು ಪಕ್ಷಗಳ ಐಕ್ಯರಂಗದ ಒಡಕು ಅಥವಾ ಐಕ್ಯತೆಯ ಅಭಾವಕ್ಕೆ ಸಿದ್ಧರಾಮಯ್ಯನವರನ್ನು ದೂಷಿಸಲಾಗುತ್ತಿದೆ. ಅದಕ್ಕೆ 'ಮುಂದಿನ ಮುಖ್ಯಮಂತ್ರಿ ನಾನೇ' ಎಂದು ಹೇಳಿದ್ದನ್ನು ಕಾರಣವಾಗಿಸುತ್ತಿಲ್ಲ. ಸಮನ್ವಯ ಸಮಿತಿಯ ಅಧ್ಯಕ್ಷ ಮತ್ತು ಹಿರಿಯ ನಾಯಕರಾಗಿ ಸಿದ್ಧರಾಮಯ್ಯ ಅವರು ತಮ್ಮ ಹೆಚ್ಚಿನ ಜವಾಬ್ದಾರಿ ನಿಭಾಯಿಸುವ ಬದಲು ಬಂಡಾಯ ಶಾಸಕರ ನಾಯಕನಂತೆ ವರ್ತಿಸುತ್ತಿದ್ದಾರೆಂದು ಹೇಳಲಾಗಿದೆ. ಅದು ಬಹಳ ಮಟ್ಟಿಗೆ ನಿಜ.

ಆದರೆ ನಿಜವಾಗಿಯೂ ಎರಡೂ ಪಕ್ಷಗಳು 'ಐಕ್ಯರಂಗದ–ಧರ್ಮ'ವನ್ನು ನಿಭಾಯಿಸುತ್ತಿಲ್ಲ. ಬರಿಯ ಒಂದು ಪಕ್ಷ ಕೆಲವು ವ್ಯಕ್ತಿಗಳಿಗೆ ಇದು ಸೀಮಿತವಾಗಿಲ್ಲ. ಜೆಡಿ–ಎಸ್ ಪಕ್ಷದ ಅಧ್ಯಕ್ಷರು ಸೇರಿದಂತೆ ನಾಯಕರು, ಮುಖ್ಯಮಂತ್ರಿ ಸೇರಿದಂತೆ ಜೆಡಿ–ಎಸ್ ಸಚಿವರು ಸಿದ್ಧರಾಮಯ್ಯ, ಕಾಂಗ್ರೆಸ್ ಪಕ್ಷ ಮತ್ತು ಅದರ ಹಿಂದಿನ ಸರಕಾರವನ್ನು ಹೀಯಾಳಿಸಲು ಅವರ ಯೋಜನೆಗಳನ್ನು ನಿರ್ಲಕ್ಷ ಮಾಡಲು ಸತತವಾಗಿ ಪ್ರಯತ್ನಿಸುತ್ತಿದ್ದಾರೆ. ಕಾಂಗ್ರೆಸ್ ನಾಯಕರನ್ನು ಪ್ರಚೋದಿಸುತ್ತಿದ್ದಾರೆ. ಅಧಿಕಾರ ಮತ್ತು ಹಣಬಲದ ರಾಜಕಾರಣ ಬಿಟ್ಟರೆ ಇನ್ನೇನೂ ಗೊತ್ತಿರದ, ಅವರು ಬಯಸಿದ ಅಧಿಕಾರ ಸಿಗದ ಅತೃಪ್ತ ಕಾಂಗ್ರೆಸ್ ಶಾಸಕರು ನಾಯಕರು ಅದಕ್ಕೆ ಪ್ರತಿಕ್ರಿಯಿಸುತ್ತಿದ್ದಾರೆ. ಜೆಡಿ–ಎಸ್ ನಾಯಕರ ಬೇಜವಾಬ್ದಾರಿ ಪ್ರಾದೇಶಿಕ ಜಾತಿ ರಾಜಕಾರಣದ ಹೇಳಿಕೆಗಳೂ ಕಿಚ್ಚು ಹಚ್ಚುತ್ತಿವೆ. ಇವಲ್ಲದೆ ಕುಮಾರಸ್ವಾಮಿಯವರ ದೇವಾಲಯ ಭೇಟಿಗಳು, ರೇವಣ್ಣನವರ ಮೂಢನಂಬಿಕೆಗಳು, ಇಬ್ಬರ ಕುಟುಂಬ–ಕೇಂದ್ರಿತ ಮತ್ತು ಇತರ ಬೇಜವಾಬ್ದಾರಿ ಹೇಳಿಕೆಗಳು ವರ್ತನೆಗಳು ಸರಕಾರಕ್ಕೆ ಒಳ್ಳೆಯ ಹೆಸರನ್ನೇನೂ ತಂದಿಲ್ಲ.

ಎರಡೂ ಪಕ್ಷಗಳಿಗೂ ಈ ಸರಕಾರ ಉಳಿಸುವುದು ಉತ್ತಮ ಆಡಳಿತ ಕೊಡುವುದು ಅಗತ್ಯ ಎಂಬುದು ಅರ್ಥವಾಗುತ್ತಿಲ್ಲ. ಅದರಿಂದಾಗಿ ಎರಡೂ ಪಕ್ಷಗಳ ಒಂದು ವಿಭಾಗ 'ಇದೊಂದೇ ನಮಗೆ ಆಯ್ಕೆಯಲ್ಲ, ಬಿಜೆಪಿ ನಮ್ಮ ಜತೆ ಸಂಪರ್ಕದಲ್ಲಿದೆ' ಎಂದು ಬೆದರಿಸುವ ಪರಿಸ್ಥಿತಿ ಬಂದಿದೆ. ಇಂತಹ ಅಭದ್ರ ಸಮ್ಮಿಶ್ರ ಸರಕಾರವಿರುವುದು ತಮಗೆ ರಾಜಕೀಯವಾಗಿ ಒಳ್ಳೆಯದು ಎಂದು ಬಿಜೆಪಿ ಕೇಂದ್ರೀಯ ನಾಯಕತ್ವದ ನಿರ್ಣಯದಿಂದ ಮತ್ತು ಬಿಜೆಪಿಯನ್ನು ಹಣಿಯಬೇಕಾದರೆ ಎರಡೂ ಪಕ್ಷಗಳ ಮೈತ್ರಿ ಸಹಕಾರಿ ಎಂಬ ಪ್ರಾಥಮಿಕ ಪ್ರಜ್ಞೆಯಿಂದಷ್ಟೇ ಸಮ್ಮಿಶ್ರ ಸರಕಾರ ಬದುಕಿರುವ ಹಾಗೆ ಕಾಣುತ್ತದೆ. ಎರಡೂ ಪಕ್ಷಗಳೂ ಅದರ ನಾಯಕರು ಈ ಪರಿಸ್ಥಿತಿಯಿಂದ ಹೊರಬಂದು ದೀರ್ಘಕಾಲೀನ ರಾಜಕೀಯ ಪ್ರಜ್ಞೆ ತೋರಿಸುವರು ಎಂದು ಆಶಿಸಬೇಕಾಗಿದೆ. ●

ನಿರ್ಮಲಾ ಅವರ ಖಂಡನೀಯ 'ಪ್ರೋಟೊಕಾಲ್ ಆಕ್ರೋಶ'

ಕೇಂದ್ರ ರಕ್ಷಣಾ ಮಂತ್ರಿ ನಿರ್ಮಲಾ ಸೀತಾರಾಮನ್ ಅವರು ನೆರೆ ಪ್ರಕೋಪದ ಅಧ್ಯಯನಕ್ಕೆ ಕೊಡಗಿಗೆ ಭೇಟಿ ನಿಡಿದಾಗ ನೆರೆ ಸಂತ್ರಸ್ತರಿಗೆ ಸಾಂತ್ವನ ಹೇಳಿ ತಕ್ಷಣ ಕೇಂದ್ರ ಸರಕಾರದ ನೆರವು ಘೋಷಿಸುತ್ತಾರೆ ಎಂದು ನಿರೀಕ್ಷಿಸಲಾಗಿತ್ತು. ಇಂತಹ ಪ್ರಕೋಪಗಳ ಸಮಯದಲ್ಲಾದರೂ ಪಕ್ಷ ರಾಜಕಾರಣ ಮರೆತು ತಮ್ಮ ಸಾಂವಿಧಾನಿಕ ಜವಾಬ್ದಾರಿ ನಿರ್ವಹಿಸುತ್ತಾರೆಂಬ ನಿರೀಕ್ಷೆ ಹುಸಿಯಾಗಿದೆ. ರಾಜ್ಯ ಸರಕಾರದ ಪರವಾಗಿ ಜಿಲ್ಲಾ ಉಸ್ತುವಾರಿ ಸಚಿವ ಸಾ.ರಾ. ಮಹೇಶ್ ಅವರು ಸಿದ್ದ ಪಡಿಸಿದ ಕೊಡಗಿನ ನೆರೆ ಪೀಡಿತ ಪ್ರದೇಶಗಳ ಪರಿಹಾರ ಕ್ಯಾಂಪುಗಳ ಭೇಟಿಯ ಕಾರ್ಯಸೂಚಿಯನ್ನು ಅವರು ಪಾಲಿಸಲಿಲ್ಲ. ಬದಲಾಗಿ ಸಂಘ ಪರಿವಾರದ ಸೇವಾ ಭಾರತಿಯ ಕ್ಯಾಂಪು ಮತ್ತು ನಿವೃತ್ತ ರಕ್ಷಣಾ ಸಿಬ್ಬಂದಿಯ ಜತೆ ಭೇಟಿಯಲ್ಲಿ ತೊಡಗಿದಾಗ ಸಚಿವರು ಕಾರ್ಯಸೂಚಿಯ ಬಗೆಗೆ ನೆನಪಿಸಿದಾಗ 'ಕೇಂದ್ರ ಮಂತ್ರಿ ಮೇಲಾ ರಾಜ್ಯ ಮಂತ್ರಿ ಮೇಲಾ' ಎಂಬ 'ಪ್ರೋಟೊಕಾಲ್ ಆಕ್ರೋಶ' ಹರಿಯ ಬಿಟ್ಟರು. ಆಗ ಇಬ್ಬರ ನಡುವೆ ಮಾತಿನ ಚಕಮಕಿ ನಡೆಯಿತು. ಅದರ ವಿಡಿಯೊ ವೈರಲ್ ಆಯಿತು. ಇದು ಮಾಧ್ಯಮದವರ ಸಮ್ಮುಖದಲ್ಲೇ ನಡೆಯಿತು. ಅಲ್ಲಿದ್ದವರ ಹೇಳಿಕೆ, ವಿಡಿಯೋಗಳನ್ನು ನೋಡಿದರೆ ರಕ್ಷಣಾ ಮಂತ್ರಿಗಳ ಆಕ್ರೋಶಕ್ಕೆ ಕೇಂದ್ರ ಮಂತ್ರಿಯ ದರ್ಪ ಬಿಟ್ಟರೆ ಬೇರೆ ಕಾರಣಗಳು ಕಾಣಲಿಲ್ಲ. ಸಾಲದೆಂಬಂತೆ ಕೇವಲ 7 ಕೋಟಿ ನೆರವಿನ ಘೋಷಣೆ ಮಾಡಿ ಅವರು ತೆರಳಿದ್ದು ರಾಜ್ಯದಲ್ಲಿ ಸಹಜವಾಗಿಯೇ ಆಕ್ರೋಶಕ್ಕೆ ಕಾರಣವಾಗಿದೆ. ರಾಜ್ಯದ ಜನತೆಯಿಂದ ಚುನಾಯಿತರಾದ ಮತ್ತು ರಾಜ್ಯ ಸರಕಾರದ ಪ್ರತಿನಿಧಿಯಾದ ಮಂತ್ರಿಯೊಬ್ಬರನ್ನು ಅವಮಾನಿಸಿದ್ದು ಖಂಡನೀಯ ಬೇಜವಾಬ್ದಾರಿಯ ವರ್ತನೆ ಎಂದು ಸಾರ್ವಜನಿಕರಿಂದಲೂ ರಾಜ್ಯ ಸರಕಾರದ ನಾಯಕರಿಂದಲೂ ತೀವ್ರ ಖಂಡನೆಗೆ ಒಳಗಾಗಿದೆ. ಕೇಂದ್ರ ಸಚಿವರು ಕರ್ನಾಟಕದಿಂದ ರಾಜ್ಯಸಭೆಗೆ ಆಯ್ಕೆಯಾಗಿರುವುದು ಇನ್ನಷ್ಟು ಆಕ್ರೋಶಕ್ಕೆ ಕಾರಣವಾಗಿದೆ. ನೆರೆ ಪ್ರಕೊಪದಂತಹ ಸ್ಥಿತಿಯಲ್ಲಿ ಇಂತಹ ಕ್ಷುಲ್ಲಕ 'ಪ್ರೋಟೊಕಾಲ್ ಆಕ್ರೋಶ' ಬೇಜವಾಬ್ದಾರಿ ಮಾತ್ರವಲ್ಲ, ಅಮಾನವೀಯವೂ ಆಗಿದೆ. 'ರಾಜ್ಯ ಸಚಿವರು ರಾಜ್ಯಸಭೆಗೆ ಅವಮಾನಿಸಿದರು. ಆದ್ದರಿಂದ ಆಕ್ರೋಶಗೊಂಡೆ' ಎಂಬ ಆ ಮೇಲಿನ ಅವರ ಸ್ಪಷ್ಟೀಕರಣ ಯಾರಿಗೂ ಸ್ವೀಕಾರಾರ್ಹವಾಗಿಲ್ಲ. ●



'ಕುಲದೀಪ್ ನಯ್ಯರ್ ಔಷಧಿಪ್ರಾಯವಾಗಿದ್ದು ಎಕ್ಸ್ ಪೈರಿ ಡೇಟ್ ತಲುಪಿದೆಯೇ?'

ವಾಸುದೇವ್ ಉಚ್ಚಿಲ್

ದೇಶದ ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯಾನಂತರದ ಮಹತ್ವದ ಘಟನೆಗಳಿಗೆ ಸಾಕ್ಷಿಯಾಗಿದ್ದ ಹಿರಿಯ ಪತ್ರಕರ್ತ ಕುಲದೀಪ್ ನಯ್ಯರ್ ಅವರು ಭಾರತವನ್ನು ಎಚ್ಚರಿಸುವ ದನಿಯಾಗಿದ್ದರು. ಅವರ ಬದುಕು, ಬರವಣಿಗೆ ಅತ್ಯುತ್ತಮವಾಗಿದ್ದು, ಅವರು ಇಡೀ ಭಾರತ ದೇಶಕ್ಕೆ ಆದರ್ಶಪ್ರಾಯವಾಗಿದ್ದರು. ಅವರ ಬದುಕು, ಬರವಣಿಗೆ ಔಷಧಪ್ರಾಯವಾಗಿದ್ದು, ಆದರೆ ಇಂದಿನ ಸಂದರ್ಭದಲ್ಲಿ ಅದಕ್ಕೆ ಎಕ್ಸ್‌ಪೈರಿ ದಿನಾಂಕ ತಲುಪಿದೆಯೋ ಎಂಬ ಆತಂಕ ನಮ್ಮ ಎದುರಿಗಿದೆ ಎಂಬುದಾಗಿ ಹಿರಿಯ ಚಿಂತಕ ಹಾಗೂ ಲೇಖಕ ಜಿ.ರಾಜಶೇಖರ್ ಹೇಳಿದರು.

ಮಂಗಳೂರು ನಗರದಲ್ಲಿ ಆಗಸ್ಟ್ 30 ರಂದು ಸಮಾನ ಮನಸ್ಕ ಸಂಘಟನೆಗಳ ನೆಲೆಯಲ್ಲಿ ಡಿವೈಎಫ್ಐ, ಸಮುದಾಯ, ದ.ಕ.ವಿಚಾರವಾದಿ ಸಂಘ, ದಸಂಸ (ಪ್ರೊ.ಬಿ.ಕೃಷ್ಣಪ್ಪ ಸ್ಥಾಪಿತ), ಎಐವೈಎಫ್ಐ ಅಭಿಮತ ಮತ್ತು ಎಸ್ಎಫ್ಐ ಸಂಯುಕ್ತವಾಗಿ ಏರ್ಪಡಿಸಿದ ನುಡಿನಮನ ಕಾರ್ಯಕ್ರಮದಲ್ಲಿ ಅವರು ಮಾತನಾಡುತ್ತಿದ್ದರು.

'ಕುಲದೀಪ್ ನಯ್ಯರ್ ನಿಧನದೊಂದಿಗೆ ಭಾರತದ ಒಂದು ಯುಗದ ತಿಳಿವಳಿಕೆ ಅಂತ್ಯವಾಗಿದೆ. ಮತೀಯವಾದಿ ಧೋರಣೆಗಳ ಫಲವಾಗಿ ದೇಶವು ಆತ್ಮಹತ್ಯೆಯ ದಾರಿಯಲ್ಲಿದೆ ಎಂದು ಅವರು ಬಹಳ ಹಿಂದೆಯೇ ಎಚ್ಚರಿಸಿದ್ದರು. ಈಗ ಆಹಾರಪದ್ಧತಿ, ಧಾರ್ಮಿಕ ಪ್ರತಿರೋಧ, ವೈಚಾರಿಕತೆ ಮತ್ತಿತರೆ ಕಾರಣಗಳಿಗಾಗಿ ದೇಶದಲ್ಲಿ ನಡೆಯುವ ಹಲ್ಲೆ, ಕೊಲೆ ಪ್ರಕರಣಗಳು ಅವರ ಊಹೆಯನ್ನು ನಿಜವಾಗಿಸಿದೆ.

'ದೇಶದ ಅನೇಕ ಸಮಸ್ಯೆಗಳಿಗೆ ಪರಿಹಾರ ಹುಡುಕುವ ವೈದ್ಯನಂತೆ ಅವರು ಇದ್ದರು. ಭಾರತವು ಯಾವತ್ತಿಗೂ ಪಾಕಿಸ್ತಾನದ ಬಗ್ಗೆ ಜಗಳ ಆಡಬಾರದು ಎಂಬ ಚಿಕಿತ್ಸಕ ದೃಷ್ಟಿ ಅವರದಾಗಿತ್ತು. ಪಾಕಿಸ್ತಾನದ ಜೊತೆ ನಮಗೆ ಇರಬೇಕಾದುದು ದಾಯಾದಿ ಸಂಬಂಧ ಹಾಗೂ ಜಗಳವೇ ಹೊರತು ವೈರ ಅಲ್ಲ. ಎರಡೂ ದೇಶಗಳಿಗೆ ಶಸ್ತ್ರಾಸ್ತ್ರಗಳನ್ನು ಪೂರೈಸಿ ಅಮೆರಿಕಾ ಮತ್ತು ಪಶ್ಚಿಮ ಯೂರೋಪಿನ ರಾಷ್ಟ್ರಗಳು ಲಾಭ ಮಾಡಿಕೊಳ್ಳುತ್ತಿವೆ. ಸದ್ಯ ಯುದ್ಧ ಒಂದು ಲಾಭದಾಯಕ ಉದ್ಯಮವಾಗಿ ಬದಲಾಗಿದೆ. ಯುದ್ಧಕ್ಕೂ ದೇಶಭಕ್ತಿಗೂ ಸಂಬಂಧವಿಲ್ಲ ಎಂದು ನಯ್ಯರ್ ಹೇಳುತ್ತಿದ್ದರು.

'ಪತ್ರಿಕೋದ್ಯಮದ ಒಳಗೇ ಮೃದು ಹಿಂದುತ್ವ ಬಲಗೊಳ್ಳುತ್ತಿರುವುದನ್ನು ಕುಲದೀಪ್ ನಯ್ಯರ್ ಬಹಳ ಹಿಂದೆಯೇ ಗುರುತಿಸಿದ್ದರು. ಅವರು ನಿಜವಾದ ಅರ್ಥದಲ್ಲಿ ಭಾರತದ ಆತ್ಮಸಾಕ್ಷಿಯಂತೆ ಇದ್ದರು. ಇಂದು ಪ್ರಶ್ನೆ ಮಾಡುವ ವಿಚಾರವಾದಿಗಳನ್ನು ಗುಂಡಿಟ್ಟು ಕೊಲ್ಲಲಾಗುತ್ತಿದೆ. ದೇಶದಲ್ಲಿ ಇಂತಹ ಏಕಾಏಕಿ ಘಟನೆಗಳು ನಡೆಯುತ್ತಿವೆ. ಕೆಲವು ಘಟನೆಗಳಲ್ಲಿ ಪೋಲೀಸರೂ ಶಾಮೀಲಾಗಿ ಅಮಾಯಕರನ್ನು ಥಳಿಸುವಂತಹ ಉದಾಹರಣೆಗಳು ಹೆಚ್ಚುತ್ತಿವೆ. ಈಗಿನ ಬಲಪಂಥೀಯ ರಾಷ್ಟ್ರಪ್ರೇಮವು ನರಹತ್ಯೆಯನ್ನು ನೇರವಾಗಿ ಬೆಂಬಲಿಸುತ್ತಿದೆ.

'ರಾಜ್ಯದಲ್ಲಿ ಬಿಜೆಪಿಯೇತರ ಸರಕಾರಗಳು ಇರುವುದರಿಂದಲೇ ಹಲವು ಕೊಲೆ, ಹತ್ಯಾ ಪ್ರಕರಣಗಳ ಸತ್ಯಾಸತ್ಯತೆ ಹೊರಬರುತ್ತಿದೆ. ಇಲ್ಲದಿದ್ದರೆ ಪ್ರಕರಣದ ಒಂದಂಶವೂ ಬೆಳಕಿಗೆ ಬರುತ್ತಿರಲಿಲ್ಲ. ಮಹಾರಾಷ್ಟ್ರದಲ್ಲಿ ವಿಚಾರವಾದಿಗಳ ಕೊಲೆಯಾಗಿದೆ, ಬಿಜೆಪಿ ಆಡಳಿತದ ಇತರ ರಾಜ್ಯಗಳಲ್ಲೂ ಲಿಂಚಿಂಗ್ ಇತ್ಯಾದಿ ಘಟನೆಗಳು ನಡೆಯುತ್ತಿವೆ. ಆದರೆ ಆ ರಾಜ್ಯಗಳಲ್ಲಿ ಪ್ರಕರಣಗಳ ತನಿಖೆ ನಡೆಯುವ ನಾಟಕ ನಡೆಯುತ್ತಿವೆ. ನ್ಯಾಯಾಲಯದಲ್ಲೂ ಪ್ರಜಾಪ್ರಭುತ್ವವನ್ನು ಬಲಪಡಿಸುವುದಕ್ಕಾಗಿ ಹೋರಾಟ ನಡೆಸುವವರಿಗೆ ನ್ಯಾಯ ದೊರಕುವುದು ಅನುಮಾನಾಸ್ಪದವಾಗಿ ಕಾಣುತ್ತಿದೆ. ಗೌರಿ ಹತ್ಯೆ ಆರೋಪಿ ವಾಘ್ಮೋರೆಗೆ ಸಿಂದಗಿಯಲ್ಲಿ ಪಾಕಿಸ್ಥಾನ ಧ್ವಜ ಹಾರಿಸಿ ಕೋಮು ಗಲಭೆ ಮಾಡಿಸಿದ ಕೃತ್ಯದಲ್ಲಿ ಈಚೆಗಷ್ಟೇ ತಾಂತ್ರಿಕ ಕಾರಣಗಳಿಗಾಗಿ ಬಿಡುಗಡೆ ದೊರೆತಿದೆ. ನಾಲ್ವರು ವಿಚಾರವಾದಿಗಳ ಹತ್ಯೆ ಪ್ರಕರಣವೂ ಇದೇ ರೀತಿ ನ್ಯಾಯಾಲಯದಲ್ಲಿ ಅಂತ್ಯ ಕಂಡರೆ ಆಶ್ಚರ್ಯವಿಲ್ಲ' ಎಂಬುದಾಗಿ ಬಿ.ರಾಜಶೇಖರ್ ಆತಂಕ ವ್ಯಕ್ತಪಡಿಸಿದರು.

'ಕುಲದೀಪ್ ನಯ್ಯರ್ ಸ್ಕೂಪ್ ವರದಿಗಳನ್ನು ಮಾಡುವಲ್ಲಿ ಯಶಸ್ವಿ ಪತ್ರಕರ್ತರಾಗಿದ್ದರು. ಇಂದಿನ ಯಾವುದೇ ದಿನಪತ್ರಿಕೆಗಳಲ್ಲಿ ಸ್ಕೂಪ್ ವರದಿಗಳು ಬರುವುದಿಲ್ಲ. ಸ್ಕೂಪ್ ಪದದ ಅರ್ಥವೇ ಗೊತ್ತಿಲ್ಲದ ಪತ್ರಕರ್ತರಿದ್ದಾರೆ. ಕುಲದೀಪ್ ನಯ್ಯರ್ ಅಂದಿನ ತುರ್ತು ಪರಿಸ್ಥಿತಿಯ ದಿನಗಳ ವಿರೋಧಿಯಾಗಿದ್ದರು. ಅಂದಿನ ಸರಕಾರ ಬಗ್ಗಲು ಹೇಳಿದ್ದರೆ, ಪತ್ರಿಕೆಗಳು ತೆವಳಿಕೊಂಡು ಸಾಗುತ್ತಿದ್ದವು ಎನ್ನುವುದು ಕುಲದೀಪ್ ನಯ್ಯರ್ ಬರಹಗಳಿಂದ ತಿಳಿದು ಬರುತ್ತದೆ. ಇಂದಿರಾ ಗಾಂಧಿಯವರು ಹೇರಿದ ಘೋಷಿತ ತುರ್ತುಪರಿಸ್ಥಿತಿ ವಿರುದ್ಧ ಹೋರಾಡಿದವರೇ ಈಗ ಅಘೋಷಿತ ತುರ್ತು ಪರಿಸ್ಥಿತಿಯನ್ನು ಹೇರುವ ಮೂಲಕ ಪ್ರಜಾಪ್ರಭುತ್ವದ ಧ್ವನಿಯನ್ನು ಅಡಗಿಸಲು ಯತ್ನಿಸುತ್ತಿದ್ದಾರೆ. ಎರಡೂ ಘಟನೆಗಳಿಗೆ ಕುಲದೀಪ್ ನಯ್ಯರ್ ಸಾಕ್ಷಿಯಾಗಿದ್ದರು' ಎಂದು ಜಿ.ರಾಜಶೇಖರ್ ಹೇಳಿದರು.

ಮಣಿಪಾಲದ ಮಾಹೆ ಗಾಂಧಿ ಮತ್ತು ಶಾಂತಿ ಅಧ್ಯಯನ ಕೇಂದ್ರದ ನಿರ್ದೇಶಕ ಪ್ರೊ.ವರದೇಶ ಹಿರೇಗಂಗೆ ಮತ್ತು ಸಭೆಯ ಅಧ್ಯಕ್ಷತೆ ವಹಿಸಿದ್ದ ಹಿರಿಯ ಪತ್ರಕರ್ತ ಚಿದಂಬರ ಬೈಕಂಪಾಡಿ ಕೂಡಾ ಕುಲದೀಪ್ ನಯ್ಯರ್ ಅವರ ವ್ಯಕ್ತಿತ್ವ ಹಾಗೂ ಬರವಣಿಗೆ ಬಗ್ಗೆ ಬೆಳಕು ಚೆಲ್ಲಿ ಮಾತನಾಡಿದರು.

ಮೂರು ದಿನಗಳ ಹಿಂದೆ ರಾಷ್ಟ್ರದ ಪ್ರಖ್ಯಾತ ಮಾನವ ಹಕ್ಕು ಹೋರಾಟಗಾರರನ್ನು ಸುಳ್ಳು ಆರೋಪದ ಮೇಲೆ ಬಂಧಿಸಿದ ಮಹಾರಾಷ್ಟ್ರ ಸರಕಾರ ಹಾಗೂ ಅದಕ್ಕೆ ಮೂಕಸಮ್ಮತಿ ನೀಡುತ್ತಿರುವ ಕೇಂದ್ರ ಸರಕಾರದ ಕ್ರಮವನ್ನು ತೋಳಿಗೆ ಕಪ್ಪುಪಟ್ಟಿ ಧರಿಸುವ ಮೂಲಕ ಭಾಗವಹಿಸಿದ ಸಭಿಕರು ಖಂಡಿಸಿದರು. ಅಲ್ಲದೆ ಬಂಧನವನ್ನು ಖಂಡಿಸಿ ಸಭೆಯು ಖಂಡನಾ ನಿರ್ಣಯವನ್ನೂ ಕೈಗೊಂಡಿರುತ್ತದೆ.

ಸಭೆಯ ಆರಂಭದಲ್ಲಿ ನಿಧನರಾದ ಕುಲದೀಪ್ ನಯ್ಯರ್ ಅವರಿಗೆ ಒಂದು ನಿಮಿಷದ ಮೌನಾಚರಣೆಯ ಮೂಲಕ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಡಿವೈಎಫ್ಐ ಸಂಘಟನೆಯ ರಾಜ್ಯಾಧ್ಯಕ್ಷ ಮುನೀರ್ ಕಾಟಿಪಳ್ಳ ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿದರು. ಸಮುದಾಯ ಸಂಘಟನೆಯ ವಾಸುದೇವ ಉಚ್ಚಿಲ ಖಂಡನಾ ನಿರ್ಣಯವನ್ನು ಮಂಡಿಸಿದರು. ವೇದಿಕೆಯಲ್ಲಿ ಮಂಗಳೂರು ಸಮುದಾಯದ ಅಧ್ಯಕ್ಷ ಡಾ.ರಾಜೇಂದ್ರ ಉಡುಪ, ವಿಚಾರವಾದಿ ಸಂಘದ ಜಿಲ್ಲಾ ಉಪಾಧ್ಯಕ್ಷ ಡಾ.ಕೃಷ್ಣಪ್ಪ ಕೊಂಚಾಡಿ, ದಸಂಸ ರಾಜ್ಯ ಸಂಘಟನಾ ಸಂಚಾಲಕ ಎಂ.ದೇವದಾಸ್, ಎಐವೈಎಫ್‌ನ ಕರುಣಾಕರ ಉಪಸ್ಥಿತರಿದ್ದರು. ಮಂಗಳೂರು ಪರಿಸರದ ಮಾನವಹಕ್ಕು ಕಾರ್ಯಕರ್ತರು, ಪತ್ರಿಕೋದ್ಯಮ ವಿದ್ಯಾರ್ಥಿಗಳು, ಅಧ್ಯಾಪಕರು ಈ ಸಭೆಯಲ್ಲಿ ಹೆಚ್ಚಿಗೆ ಭಾಗವಹಿಸಿದ್ದರು. ●



ಶಿರೂರು ಸ್ವಾಮೀಜಿ ಸಾವಿನ ಕುರಿತು SIT ತನಿಖೆಗೆ ಸಿಪಿಐ(ಎಂ) ಆಗ್ರಹ

ಶಿರೂರು ಶ್ರೀ ಲಕ್ಷ್ಮೀವರತೀರ್ಥ ಸ್ವಾಮೀಜಿಯವರ ಸಾವಿನ ಕುರಿತು ಬಂದಿರುವ ಎಫ್.ಎಸ್.ಎಲ್. ವರದಿ ಹಾಗೂ ಕೆ.ಎಂ.ಸಿ. ಆಸ್ಪತ್ರೆಯವರು ನೀಡಿದ ಪ್ರಾಥಮಿಕ ವರದಿಯಲ್ಲಿ ಬಂದಿರುವ ಅಂಶಗಳು ತೀರಾ ಭಿನ್ನವಾಗಿರುವುದರಿಂದ ಸಾರ್ವಜನಿಕರಲ್ಲಿ ಗೊಂದಲ, ಸಂಶಯಗಳು ಬಂದಿದ್ದು, ಸಾವಿನ ಕುರಿತು ವಿಶೇಷ ತನಿಖಾದಳ (SIT) ರಚಿಸಬೇಕೆಂದು ಭಾರತ ಕಮ್ಯೂನಿಷ್ಟ್ ಪಕ್ಷ (ಮಾರ್ಕ್ಸ್‌ವಾದಿ) ಉಡುಪಿ ಜಿಲ್ಲಾ ಸಮಿತಿ ರಾಜ್ಯ ಸರಕಾರವನ್ನು ಆಗ್ರಹಿಸಿದೆ.

ಮರಣಾ ನಂತರದಲ್ಲಿ ಪೇಜಾವರ ಶ್ರೀಗಳು ನೀಡಿದ ಹೇಳಿಕೆ, ಪಟ್ಟದ ದೇವರು ಕುರಿತಾಗಿ ಮಠದೊಳಗಿನ ಭಿನ್ನಾಭಿಪ್ರಾಯ, ಮಹಿಳೆಯೊಬ್ಬರು ಶಿರೂರು ಮೂಲಮಠದಲ್ಲಿ ಆಗಾಗ ಕಾಣಿಸಿಕೊಳ್ಳುತ್ತಿದ್ದುದು, ವಾಣಿಜ್ಯ ಸಂಕೀರ್ಣದ ಕುರಿತು ವ್ಯವಹಾರ–ಹೀಗೆ ಹತ್ತು–ಹಲವು ಅಂಶಗಳು ಭಕ್ತಾದಿಗಳಲ್ಲಿ ಗೊಂದಲ ಮೂಡಿಸಿದೆ. ಮಾಧ್ಯಮಗಳಲ್ಲಿ ಬಂದ ವರದಿ ಪ್ರಕಾರ ನದಿಯಲ್ಲಿ ಎಸೆಯಲಾಗಿದ್ದ ಡಿವಿಆರ್‌ನ ದೃಶ್ಯಗಳೂ ಪೊಲೀಸರ ಕೈ ಸೇರಿಲ್ಲ. ಇದಲ್ಲದೆ ಶಿರೂರು ಶ್ರೀಗಳು ನ್ಯಾಯಾಲಯದ ಮೆಟ್ಟಿಲೇರಲೂ ತಯಾರಿ ನಡೆಸಿದ್ದರು ಎಂಬ ಅಂಶ ಬೆಳಕಿಗೆ ಬಂದಿದೆ.

ಈ ಮೇಲಿನ ಸಂಶಯಗಳನ್ನು ಹೋಗಲಾಡಿಸಲು ರಾಜ್ಯ ಸರಕಾರ ನೇಮಿಸುವ ವಿಶೇಷ ತನಿಖಾದಳ (SIT) ಮಾತ್ರವೇ ಸರಿಯಾದ ಉತ್ತರ ನೀಡಬಲ್ಲುದು ಎಂದು ಸಿಪಿಐ(ಎಂ) ಅಭಿಪ್ರಾಯ ಪಡುತ್ತದೆ. ಕೂಡಲೇ ವಿಶೇಷ ತನಿಖಾದಳ ರಚಿಸಿ ಸಮಗ್ರ ತನಿಖೆ ನಡೆಸಬೇಕೆಂದು ಸಿಪಿಐ (ಎಂ) ಒತ್ತಾಯಿಸುತ್ತದೆ. ●

ವಿಜಯಪುರವನ್ನು ಬರಪೀಡಿತ ಜಿಲ್ಲೆಯೆಂದು ಘೋಷಿಸಲು ಒತ್ತಾಯ

ಕಳೆದ ಅನೇಕ ವರ್ಷಗಳಿಂದ ಬಯಲು ಸೀಮೆಯ ನಾಡು ವಿಜಯಪುರ ಜಿಲ್ಲೆಯನ್ನು ಬಾಧಿಸುತ್ತಿರುವ ಬರದ ಛಾಯೆ ಈ ಬಾರಿಯೂ ಮುಂದುವರಿದಿದ್ದು, ಈಗಾಗಲೇ ಜಿಲ್ಲೆಯಲ್ಲಿ ಲಕ್ಷಾಂತರ ಹೇಕ್ಟೆರ ಪ್ರದೇಶದಲ್ಲಿ ರೈತರು ಸಾಲ ಸೂಲ ಮಾಡಿ ಬಿತ್ತನೆ ಮಾಡಿದ್ದಾರೆ. ಆದರೆ ಬರದ ಕರಿ ನೆರಳು ಈ ಬಾರಿಯು ಮುಂದುವರೆದಿರುವರಿಂದಾಗಿ ರೈತಾಪಿ ವರ್ಗದಲ್ಲಿ ಆತಂಕ ಮನೆ ಮಾಡಿದೆ.

ಕೇಂದ್ರ ಹಾಗೂ ರಾಜ್ಯ ಸರಕಾರದ ಈ ಕೂಡಲೆ ವಿಜಯಪುರ ಜಿಲ್ಲೆಯನ್ನು ಬರ ಪೀಡಿತ ಜಿಲ್ಲೆಯೆಂದು ಘೋಷಿಸಿ ರೈತರ ನೇರವಿಗೆ ಧಾವಿಸಬೇಕು ಇಲ್ಲದಿದ್ದಲ್ಲಿ ಜಿಲ್ಲೆಯಲ್ಲಿ ಈ ಹಿಂದಿನಂತೆ ರೈತರು ನೇಣಿನ ಕುಣಿಕೆಗೆ ಕೊರಳೊಡ್ಡುವದು ತಪ್ಪಲ್ಲ.

ಆದ ಕಾರಣ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಶ್ರೀಘ್ರವಾಗಿ ಜಿಲ್ಲೆಗೆ ತಜ್ಞರ ಸಮಿತಿಯೊಂದನ್ನು ಕಳುಹಿಸಿ ಸಮಗ್ರ ತನಿಖೆಯನ್ನು ಕೈಗೊಂಡು ವರದಿ ತಯಾರಿಸುವಂತೆ ಆದೇಶಿಸಬೇಕು. ಅಲ್ಲದೆ ಬರ ಪರಿಹಾರವನ್ನು ನೇರವಾಗಿ ರೈತರ ಖಾತೆಗೆ ಜಮಾ ಮಾಡಬೇಕು. ಮತ್ತು ಒಣ ಬೇಸಾಯ ಒಂದು ಎಕರೆಗೆ 25000 ರೂ. ಹಾಗೂ ತೋಟಗಾರಿಕೆ (ನೀರಾವರಿ) ಬೆಳೆಗಳಿಗೆ ಒಂದು ಎಕರೆಗೆ 50000 ರೂ. ನಂತೆ ಘೋಷಣೆ ಮಾಡಬೇಕು.

ರೈತರು ಬ್ಯಾಂಕುಗಳಿಂದ ಪಡೆದುಕೊಂಡಿರುವ ಅಲ್ಪಾವದಿ ಬೆಳೆ ಸಾಲವನ್ನು ವಸೂಲಾತಿ ಮಾಡದಂತೆ ಆದೇಶಿಸಬೇಕು. ಮೇಲಾಗಿ ಈಗಾಗಲೇ ರಾಜ್ಯ ಸರಕಾರ ಘೋಷಿಸಿರುವಂತೆ ರೈತರ ರಾಷ್ಟ್ರಿಕೃತ ಹಾಗೂ ಸೊಸಾಯಿಟಿಗಳ ವಿಳಂಬ ಮಾಡದೆ ಮನ್ನಾ ಮಾಡಬೇಕು

ರಾಜ್ಯ ಸರಕಾರ ಕೂಡಲೆ ವಿಜಯಪುರ ಜಿಲ್ಲೆಯನ್ನು ಬರ ಎಂದು ಘೋಷಣೆಗೆ ಕಣ್ಣು ಒರೆಸುವ ಪ್ರಯತ್ನ ಮಾಡಿದರೆ ವಿಜಯಪುರ ಜಿಲ್ಲೆಯ ಹೋರಾಟದ ದಾರಿ ತುಳಿಯಲು ಜಿಲ್ಲೆಯ ಪ್ರಗತಿಪರ ಸಂಘಟನೆಗಳು ಸಿದ್ದವಾಗಿವೆ, ಎಂದು ಆ ಸಂಘಟನೆಗಳ ಪರವಾಗಿ ನಿಂಗರಾಜ ಅತನೂರ ಸಂಧಿಪ್ ಚೌರ್ ಮಲ್ಲು ಸಾವಳಸಂಘ ಜಿಲ್ಲಾಡಳಿತವನ್ನು ಒತ್ತಾಯಿಸಿದ್ದಾರೆ. ●

ನಾಳಿನ ಕಾರ್ಯಕ್ರಮಗಳು

ಮಜದೂರ್ ಕಿಸಾನ್ ಸಂಘರ್ಷ ರ್‍ಯಾಲಿ ಸೆಪ್ಟೆಂಬರ್ 5
ನವದೆಹಲಿಗೆ ಪಾರ್ಲಿಮೆಂಟ್ ಚಲೋ, ಕಾರ್ಮಿಕ ರೈತ ಕೃಷಿಕೂಲಿ ಸಂಘಟನೆಗಳಿಂದ ಜಂಟಿ ಕರೆ

ಪಂಚಾಯತ್ ನೌಕರರ ಬೃಹತ್ ಧರಣಿ, ವಿಜಯ



ಗ್ರಾಮ ಪಂಚಾಯತ್‌ಗಳಲ್ಲಿ ಕೆಲಸ ಮಾಡುತ್ತಿರುವ ನೌಕರರಿಗೆ ಕನಿಷ್ಠ ವೇತನ ನೀಡಬೇಕು, ಬಾಕಿಯಿರುವ ವೇತನವನ್ನು ಬಿಡುಗಡೆ ಮಾಡಬೇಕು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಆಗ್ರಹಿಸಿ ಗ್ರಾಮ ಪಂಚಾಯತ್ ನೌಕರರ ಸಂಘದ ನೇತೃತ್ವದಲ್ಲಿ ಅಗಸ್ಟ್ 28ರಂದು ಅನಿರ್ದಿಷ್ಟಾವಧಿ ಧರಣಿ ಆರಂಭಿಸಿದರು

ಅಗಸ್ಟ್ 28ರಂದು ಬೆಂಗಳೂರಿನ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಿಂದ ಸ್ವಾತಂತ್ರ್ಯ ಉದ್ಯಾನವನದವರೆಗೂ ಬೃಹತ್ ಪ್ರತಿಭಟನಾ ರ‍್ಯಾಲಿ ನಡೆಸಿದ ಪ್ರತಿಭಟನಾಕಾರರು, ಕೂಡಲೇ ವೇತನ ಬಿಡುಗಡೆ ಮಾಡಬೇಕು ಎಂದು ಸರ್ಕಾರವನ್ನು ಒತ್ತಾಯಿಸಿದರು. ರಾಜ್ಯದ ಹಲವು ಜಿಲ್ಲೆಗಳಿಂದ ಬಂದ ಸಾವಿರಾರು ಪಂಚಾಯತ್ ಕಾರ್ಮಿಕರು ರ‍್ಯಾಲಿ ಮತ್ತು ಧರಣಿಯಲ್ಲಿ ಭಾಗವಹಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ಮಾರುತಿ ಮಾನ್ಪಡೆ, ರಾಜ್ಯದ ಆರು ಸಾವಿರಕ್ಕೂ ಅಧಿಕ ಗ್ರಾಮ ಪಂಚಾಯತ್‌ಗಳಲ್ಲಿ ಸುಮಾರು 60 ಸಾವಿರಕ್ಕೂ ಅಧಿಕ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಇಷ್ಟು ನೌಕರರಿಗೆ ಕನಿಷ್ಠ ವೇತನ ನೀಡಲಾಗುವುದು ಎಂದು ಹಿಂದಿನ ಸರ್ಕಾರ ಭರವಸೆ ನೀಡಿದ್ದರೂ, ಅದನ್ನು ಜಾರಿ ಮಾಡಿಲ್ಲ. ಅಲ್ಲದೆ, ನೌಕರರಿಗೆ ಕಳೆದ ಒಂದು ವರ್ಷದಿಂದ ವೇತನ ಸಿಗದೇ ಅತಂತ್ರ ಸ್ಥಿತಿಯಲ್ಲಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಗ್ರಾಮ ಪಂಚಾಯತ್ ನೌಕರರು ದೇಶದ ನಿರ್ಮಾಣದಲ್ಲಿ ಅಪಾರವಾದ ಶ್ರಮ ವಹಿಸುತ್ತಿದ್ದಾರೆ. ಆದರೆ, ಅವರಿಗೆ ಇಂದು ಸೇವಾ ಭದ್ರತೆಯಿಲ್ಲದಂತಾಗಿದೆ. ಸ್ಥಳೀಯ ಚುನಾಯಿತ ಜನಪ್ರತಿನಿಧಿಗಳ ಕೈ ಕೆಳಗೆ ಕೆಲಸ ಮಾಡುವಂತಾಗಿದೆ. ಆದುದರಿಂದಾಗಿ ಸರ್ಕಾರಿ ನೌಕರರ ರೀತಿಯಲ್ಲಿ ನಿರ್ದಿಷ್ಟವಾದ ಉದ್ಯೋಗ ಭದ್ರತೆ ಕಲ್ಪಿಸಬೇಕು ಎಂದು ಅವರು ಆಗ್ರಹಿಸಿದರು.

ಧರಣಿಯಲ್ಲಿ ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಮೀನಾಕ್ಷಿ ಸುಂದರಂ ಹಾಗೂ ಉಪಾಧ್ಯಕ್ಷ ವಿ.ಜೆ.ಕೆ. ನಾಯರ್, ಸಂಘದ ಪ್ರಧಾನ ಕಾರ್ಯದರ್ಶಿ ಎಂ.ಬಿ. ನಾಡಗೌಡ, ಉಪಾಧ್ಯಕ್ಷ ವಿ.ಪಿ. ಕುಲಕರ್ಣಿ, ಗೋಪಾಲಕೃಷ್ಣ ಅರಳಹಳ್ಳಿ, ಖಜಾಂಚಿ ಆರ್.ಎಸ್. ಬಸವರಾಜ ಸೇರಿದಂತೆ ಪ್ರಮುಖ ಮುಖಂಡರು ಉಪಸ್ಥಿತರಿದ್ದರು.

ಸಂಜೆಯ ಹೊತ್ತಿಗೆ ಪಂಚಾಯತ್ ಇಲಾಖೆಯ ಸಚಿವ ಕೃಷ್ಣಭೈರೇಗೌಡ, ಅಧೀನ ಕಾರ್ಯದರ್ಶಿ, ಡೈರೆಕ್ಟರ್ ಮತ್ತಿತರ ಅಧಿಕಾರಗಳೊಂದಿಗೆ ಯೂನಿಯನ್ ಪರವಾಗಿ ಐದು ನಾಯಕರ ತಂಡ ಮಾತುಕತೆ ನಡೆಸಿತು. ತಂಡದಲ್ಲಿ ಮಾರುತಿ ಮಾನ್ಪಡೆ, ವಿ.ಪಿ. ಕುಲಕರ್ಣಿ, ಮಂಟನಗೌಡ, ಆರ್.ಎಸ್.ಬಸವರಾಜ್, ಗೋಪಾಲಕೃಷ್ಣ ಅವರಿದ್ದರು. ನೌಕರರ ಪ್ರಮುಖ ಹಕ್ಕೊತ್ತಾಯಗಳನ್ನು ಒಪ್ಪಿ ಅದನ್ನು ಶೀಘ್ರವೇ ಜಾರಿ ಮಾಡುವ ಭರವಸೆ ನೀಡಿದ ನಂತರ ಧರಣಿಯನ್ನು ವಾಪಸು ತೆಗೆದುಕೊಳ್ಳಲಾಯಿತು.

ಪ್ರಮುಖ ಹಕ್ಕೊತ್ತಾಯಗಳು

- ರಾಜ್ಯ ಸರ್ಕಾರದ ಆದೇಶದಂತೆ 2017 ಡಿ.31 ರವರೆಗೆ ನೇಮಕವಾಗಿರುವ ನೌಕರರಿಗೆ ಇ.ಎಫ್. ಎಂಎಸ್ ಮೂಲಕ ವೇತನ ಸಿಗುವಂತೆ ಕ್ರಮ ಕೈಗೊಳ್ಳಬೇಕು.
- 2018 ಜೂ. 5 ರಂದು ನಡೆಸಿದ ವೀಡಿಯೊ ಕಾನ್ಫರೆನ್ಸ್‌ನ ನಿರ್ದೇಶನದಲ್ಲಿ ಗೊಂದಲವುಂಟಾಗಿದ್ದು, ಸ್ವಚ್ಛತಾಗಾರರಿಗೆ, 2ನೇ ಬಿಲ್ ಕಲೆಕ್ಟರ್, ಕ್ಲರ್ಕ್, ಕ್ಲರ್ಕ್ ಕಂ ಡಾಟಾ ಎಂಟ್ರಿ ಆಪರೇಟರ್‌ಗಳಿಗೆ ಆಗಿರುವ ತೊಂದರೆಯನ್ನು ನಿವಾರಿಸಬೇಕು.
- ಎಸೆಸೆಲ್ಸಿ ಉತ್ತೀರ್ಣರಾದ 10 ವರ್ಷ ಸೇವೆ ಸಲ್ಲಿಸಿದ ಬಿಲ್ ಕಲೆಕ್ಟರ್‌ಗಳಿಗೆ ಭಡ್ತಿಯನ್ನು ಪುನಃ ಸಿಗುತ್ತಿದ್ದ ಗ್ರೇಡ್–2 ಕಾರ್ಯದರ್ಶಿ ಭಡ್ತಿಯನ್ನು ಪುನಃ ಸಿಗುವಂತೆ ಆದೇಶ ಹೊರಡಿಸಬೇಕು.
- ಗ್ರಾಮ ಪಂಚಾಯತ್ ನೌಕರರಿಗೆ ಪೆನ್ಷನ್, ವೈದ್ಯಕೀಯ ವೆಚ್ಚ, ಗ್ರಾಚ್ಯುಟಿಗಳು ಸಿಗುವಂತೆ ಕ್ರಮ ಕೈಗೊಳ್ಳಬೇಕು ಹಾಗೂ ಸೂಕ್ತ ಆದೇಶ ಹೊರಡಿಸಬೇಕು.
- ನಗರಾಭಿವೃದ್ಧಿ ಇಲಾಖೆಯಲ್ಲಿರುವಂತೆ ಗ್ರಾಮ ಪಂಚಾಯತ್ ನೌಕರರಿಗೆ ಸೇವಾ ನಿಯಮಾವಳಿ ರಚಿಸುವುದು ಪ್ರಗತಿಯಲ್ಲಿದ್ದು, ಅದಕ್ಕೆ ಸೂಕ್ತ ಆದೇಶ ಹೊರಡಿಸಬೇಕು.
- 2011 ರ ಜನಗಣತಿ ಆಧಾರದಲ್ಲಿ ಮೇಲೆ ಗ್ರಾಮ ಪಂಚಾಯತ್‌ಗಳನ್ನು ಗ್ರೇಡ್–2 ನಿಂದ ಗ್ರೇಡ್ – 1 ಗೆ ಮೇಲ್ದರ್ಜೆಗೇರಿಸಬೇಕು.
- ಅಪರ ಕಾರ್ಯದರ್ಶಿಗಳಾಗಿದ್ದ ಎಂ.ಎಸ್. ಸ್ವಾಮಿ ವರದಿ ಶಿಫಾರಸ್ಸಿನಂತೆ ಜನಸಂಖ್ಯೆಗೆ ಅನುಗುಣವಾಗಿ ಗ್ರಾಮ ಪಂಚಾಯತ್‌ಗಳ ಅವಶ್ಯಕತೆಗಳಿಗನುಣವಾಗಿ ವಿವಿಧ ಹುದ್ದೆಗಳನ್ನು ಸೃಷ್ಟಿಸಬೇಕು



'ಆರು ತಿಂಗಳಿನಿಂದ ವೇತನ ಸಿಕ್ಕಿಲ್ಲ'

"ಕಳೆದ ಆರು ತಿಂಗಳಿನಿಂದ ನಮಗೆ ವೇತನ ಸಿಕ್ಕಿಲ್ಲ. ಪಂಚಾಯತ್‌ಗಳಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿ(ಪಿಡಿಒ)ಗಳನ್ನು ವೇತನ ನೀಡುವಂತೆ ಕೇಳಿದರೆ ಹಿಂದಿನ ವೇತನ ನೀಡುತ್ತೇವೆ. ಸರ್ಕಾರದಿಂದ ಕನಿಷ್ಠ ವೇತನಕ್ಕೆ ಸಂಬಂಧಿಸಿದಂತೆ ಇದುವರೆಗೂ ಯಾವುದೇ ಆದೇಶ ಬಂದಿಲ್ಲ ಎನ್ನುತ್ತಿದ್ದಾರೆ. ಇದರಿಂದಾಗಿ ನಾವಿ ಜೀವನ ನಡೆಸುವುದು ಕಷ್ಟವಾಗುತ್ತಿದೆ."

–ಕೆಂಪೇಗೌಡ, ಚೀಲೂರು ಗ್ರಾಪಂ ನೌಕರ, ರಾಮನಗರ ಜಿಲ್ಲೆ.

"ಹಿಂದಿನ ಸಿದ್ದರಾಮಯ್ಯ ಸರ್ಕಾರದಲ್ಲಿ ವಾಟರ್‌ಮ್ಯಾನ್‌ಗೆ 11,353 ರೂ. ಕನಿಷ್ಠ ವೇತನ ಘೋಷಿಸಿದ್ದರು. ಆದರೆ, ಈಗ ನಮಗೆ ಆರು ತಿಂಗಳಿಂದ ಕನಿಷ್ಠ ವೇತನ ನೀಡಿಲ್ಲ. ಮೊದಲಿನಂತೆ 2 ಸಾವಿರ ರೂ. ಮಾತ್ರ ಕೊಡುತ್ತೇವೆ.. ಕನಿಷ್ಠ ಸಂಬಳ ನೀಡಲು ಸರ್ಕಾರದಿಂದ ಮಾಹಿತಿ ಸಿಕ್ಕಿಲ್ಲ ಎಂದು ಅಧಿಕಾರಿಗಳು ಹೇಳುತ್ತಿದ್ದಾರೆ.

–ಹೊನ್ನಪ್ಪ, ವಾಟರ್‌ಮ್ಯಾನ್



"ಕಾರ್ಪೊರೇಟ್ ಗುಲಾಮರು ಚುನಾವಣಾ ಸುಧಾರಣೆ ಮಾಡಲು ಸಾಧ್ಯವಿಲ್ಲ'



ಕಾರ್ಪೊರೇಟ್ ಕಂಪೆನಿಗಳ ಗುಲಾಮವಾಗಿರುವ ಬಿಜೆಪಿಯಿಂದ ಚುನಾವಣಾ ಸುಧಾರಣೆಯನ್ನು ಜನಪರವಾಗಿ ಮಾಡಲು ಸಾಧ್ಯವಿಲ್ಲವೆಂದು ಸಿಪಿಐಎಂ ರಾಜ್ಯ ಕಾರ್ಯದರ್ಶಿ ಜಿ.ವಿ.ಶ್ರೀರಾಮರೆಡ್ಡಿ ಅಭಿಪ್ರಾಯ ಪಟ್ಟರು. ಅಗಸ್ಟ್ 30ರಂದು ಬೆಂಗಳೂರಿನ ಶಾಸಕರ ಭವನದಲ್ಲಿ ಸಿಪಿಐಎಂ, ಕಾಂಗ್ರೆಸ್, ಜೆಡಿಯು, ಇತರ ಎಡಪಕ್ಷಗಳು ಸೇರಿದಂತೆ ರಾಜಕೀಯ ಪಕ್ಷಗಳು ಆಯೋಜಿಸಿದ್ದ 'ಭಾರತದಲ್ಲಿ ಚುನಾವಣಾ ಸುಧಾರಣೆಗಳು' ಒಂದು ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು.

ದೇಶದ ಚುನಾವಣಾ ವ್ಯವಸ್ಥೆಯನ್ನು ನಿಯಂತ್ರಿಸುತ್ತಿರುವುದು ಕಾರ್ಪೊರೇಟ್ ಶಕ್ತಿಗಳು. ಚುನಾವಣೆಯಲ್ಲಿ ತಮಗೆ ಬೇಕಾದ ಅಭ್ಯರ್ಥಿಗಳನ್ನು ಗೆಲ್ಲಿಸುವುದಕಾಗಿಯೇ ಕೋಟ್ಯಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿವೆ. ಈ ಕಾರ್ಪೊರೇಟ್ ಶಕ್ತಿಗಳಿಗೆ ಆರೆಸ್ಸೆಸ್ ಹಾಗೂ ಬಿಜೆಪಿ ಬೆನ್ನೆಲುಬಾಗಿದೆ ಎಂದು ಆರೋಪಿಸಿದರು. ಬಿಜೆಪಿಯ ಮೂಲ ಸಿದ್ದಾಂತವೆ ಒಂದು ದೇಶ, ಒಂದು ಧರ್ಮ, ಒಂದು ಭಾಷೆ ಜಾರಿ ಮಾಡುವುದಾಗಿದೆ. ಇದರ ಮುಂದುವರೆದ ಭಾಗವಾಗಿ ಒಂದು ಚುನಾವಣೆ ನಡೆಸಲು ಉದ್ದೇಶಿಸಿದೆ. ಬಿಜೆಪಿ ಈ ಸಿದ್ಧಾಂತವು ಒಕ್ಕೂಟ ವ್ಯವಸ್ಥೆಯನ್ನು ನಿರ್ನಾಮ ಮಾಡುವಂತದ್ದೆಂದು ತಿಳಿಸಿದರು.

ಚುನಾವಣಾ ಸುಧಾರಣೆಗೆ ಸಂಬಂಧಪಟ್ಟಂತೆ ನೀತಿ ಆಯೋಗವು ಕೇಂದ್ರ ಸರಕಾರಕ್ಕೆ ಕೆಲವೊಂದು ಸಲಹೆಗಳನ್ನು ನೀಡಿದೆ. ಯಾವುದೇ ರಾಜ್ಯ ಸರಕಾರ ಅವಧಿಗೆ ಮುನ್ನವೆ ಪತನಗೊಂಡರೆ, ಉಳಿದ ಕಾಲಾವಧಿಗಷ್ಟೆ ಚುನಾವಣೆ ನಡೆಸಬೇಕು. ಇಲ್ಲವೆ ರಾಷ್ಟ್ರಪತಿ ಆಡಳಿತ ತರಬೇಕೆಂದು ತಿಳಿಸಿದೆ. ಇದು ಆಯಾ ರಾಜ್ಯ ಸಾರ್ವಭೌಮತೆಗೆ ಧಕ್ಕೆ ತರುವಂತಹದಾಗಿದೆ ಎಂದರು. ಸಿಪಿಐ ಪರವಾಗಿ ಡಾ. ಸಿದ್ದಗೌಡನ ಪಾಟೀಲ, ವಿಶ್ವನಾಥ ನಾಯಕ್, ಜೆಡಿಯು ಪರವಾಗಿ ಡಾ ನಾಡಗೌಡ ಪಾಟೀಲ್, ಎಸ್.ಯು.ಸಿ.ಐ(ಸಿ) ಪರವಾಗಿ ಶ್ರೀರಾಮ್, ಸಿಪಿಐ(ಎಂ.ಎಲ್. – ಲಿಬರೇಶನ್) ಪರವಾಗಿ ಮಟ್ಟಗೌಡ, ಸಿಪಿಐ(ಎಂ) ಪರವಾಗಿ ವಿಜೆಕೆ ನಾಯರ್ ಅವರು ಮಾತನಾಡಿದರು. ಕಾಂಗ್ರೆಸಿನ ವಿ.ಆರ್. ಸುದರ್ಶನ್ ಅವರು ಅಧ್ಯಕ್ಷತೆ ವಹಿಸಿದ್ದರು. ಏಕ ಚುನಾವಣೆ ಒಕ್ಕೂಟ ತತ್ವಕ್ಕೆ ವಿರುದ್ಧವಾಗಿದ್ದು ಅದು ಬೇಡ ಮತ್ತು ಭಾಗಶಃ ಪ್ರಮಾಣಾತ್ಮಕ ಪ್ರಾತಿನಿಧ್ಯ ವ್ಯವಸ್ಥೆ ಬಗ್ಗೆ ಒಮ್ಮತ ಮೂಡಿತು. ನಿಧಿ ನಿಯೋಜನೆ(ಫಂಡಿಂಗ್), ಚುನಾವಣಾ ಆಯೋಗದ ಪಾತ್ರ, ಪಕ್ಷಗಳ ಆಂತರಿಕ ಪ್ರಜಾಪ್ರಭುತ್ವ, ಮಾಧ್ಯಮಗಳ ಪಾತ್ರ, ಇವಿಎಂ ಇತ್ಯಾದಿಗಳ ಬಗೆಗೂ ಸಂವಾದ ನಡೆಯಿತು.



ಮುನಿಸಿಪಲ್ ಚುನಾವಣೆಗಳಲ್ಲಿ ಬಿರುಸಿನ ಪ್ರಚಾರ

ಸಿಪಿಐ(ಎಂ) ಚುನಾವಣೆ ಸ್ಪರ್ಧಿಸಿದ ಕುಂದಾಪುರ, ಉಳ್ಳಾಲ, ಗಜೇಂದ್ರಗಡ, ತುಮಕೂರು, ಚಿಂಚೋಳಿ, ದಾಂಡೇಲಿ, ರಾಯಚೂರಿನ ಕ್ಷೇತ್ರಗಳಿಂದ ಬಿರುಸಿನ ಪ್ರಚಾರ ನಡೆಸಿದ ವರದಿಗಳು ಬಂದಿವೆ. ಅದರ ಕೆಲವು ಚಿತ್ರಗಳು.





ಕೇರಳವು ಬಲಿಪಶುವಾದ ಜನರ ಗುಂಪಿನಂತೆ ನಡೆದುಕೊಳ್ಳಲಿಲ್ಲ. ಅದು ಕರ್ತೃತ್ವಕ್ಕೆ ಒತ್ತು ನೀಡಿತು ಮತ್ತು ಪೌರಕರ್ತವ್ಯಕ್ಕೆ ಒಂದು ಆವರಣವನ್ನು ನಿರ್ಮಿಸಿಕೊಟ್ಟಿತು. ರಾಜ್ಯದಿಂದಾಚೆ ನೆಲೆಸಿರುವ ಕೇರಳಿಗರು ತಕ್ಷಣವೇ ಸ್ಪಂದಿಸಿದರು. ಸರ್ಕಾರದ ಆಡಳಿತದ ವಿಧಾನ ಮತ್ತು ಸ್ವಯಂಸಹಾಯದ ಉತ್ಸಾಹಗಳ ನಡುವೆ ಕೇರಳ ತುಂಬಾ ವಿಶಿಷ್ಟವಾದ ಸಾಮಾಜಿಕ ಐಕ್ಯತೆಯನ್ನು ಸೃಷ್ಟಿಸಿತು. ಜನ ಪರಸ್ಪರ ತಮ್ಮ ತಪ್ಪನ್ನು ಒಪ್ಪಿಕೊಂಡರು. ಕಾರ್ಯಕ್ಷಮತೆ ಮತ್ತು ಸಹಾನುಭೂತಿಯ ಪ್ರಬಲ ಸಂವೇದನೆಯನ್ನು ಸ್ವಯಂಸಹಾಯ ತತ್ವವು ಮತ್ತಷ್ಟು ಹೆಚ್ಚಿಸಿತು. ಇಂತಹ ಆದರ್ಶಪ್ರಾಯವಾದ ಪೌರಪ್ರಜ್ಞೆಯ ಕಲ್ಪನೆ ಚರ್ಚೆಯು ಯಾವ ಹಾದಿಯಲ್ಲಿ ಸಾಗಬೇಕೆಂಬುದನ್ನು ನಿರ್ಧರಿಸಿತು. ಪ್ರವಾಹದಿಂದ ಪಾರಾದವರು ಮತ್ತು ಸಂತ್ರಸ್ತರು ಇಬ್ಬರೂ ತಾವು ನಾಗರಿಕರು ಎಂಬುದನ್ನು ಒತ್ತಿ ಹೇಳಿದರು ಮತ್ತು ಇಂತಹ ವಿಕೋಪದ ಪರಿಸ್ಥಿತಿಯಲ್ಲಿ ನಾಗರಿಕ ಕರ್ತವ್ಯಗಳ ವಿಸ್ತೃತವಾದ ವಿವರಣೆಯು ಕೇರಳವನ್ನು ಪ್ರಜಾಸತ್ತಾತ್ಮಕ ಕಲ್ಪನೆಯ ಮಾದರಿಯನ್ನಾಗಿ ಮಾಡಿದೆ.

ಕೇರಳದ ವಿಕೋಪ ಹೊಸ ಚಿಂತನೆಗೆ ಅವಕಾಶ ಮಾಡಿಕೊಡಲಿ – ಶಿವ್ ವಿಶ್ವನಾಥನ್

ಅನುವಾದ: ಶೈಲಜಾ, ಟಿ ಎಸ್ ವೇಣುಗೋಪಾಲ್

ವಿಶೇಷ ಲೇಖನ

ವಿಕೋಪಗಳು ಒಂದು ಕಥಾನಕವಾಗಿ ಸಾಮಾನ್ಯವಾಗಿ ಹಿಡಿಯುವ ಹಾದಿಯನ್ನು ಊಹಿಸಿಬಿಡಬಹುದು. ಅದು ಒಂದು ಹಗರಣವಾಗಿಯೋ ಅಥವಾ ಬಿಕ್ಕಟ್ಟಿನ ಕ್ಷಣವಾಗಿಯೋ ಪ್ರಾರಂಭವಾಗುತ್ತದೆ. ನಂತರ ಕೆಲ ಕಾಲ ಆ ಕುರಿತು ಜನ ಕಾರ್ಯಪ್ರವೃತ್ತರಾಗುತ್ತಾರೆ. ನಿಧಾನವಾಗಿ ಅದನ್ನು ಮರೆತು ನಿರ್ಲಿಪ್ತರಾಗಿಬಿಡುತ್ತಾರೆ. ಜನ ವಿಕೋಪಗಳನ್ನು ಅನುಭವಿಸಿ ದಣಿಯುತ್ತಾರೆ. ಜೀವನ ಹಾಗೇ ಸಾಗುತ್ತದೆ. ನೀತಿಗಳು ಮಾಮೂಲಿ ಕ್ಲೀಷೆಯನ್ನು ಧ್ವನಿಸುತ್ತಾ ಮರೆಯಾಗಿಬಿಡುತ್ತವೆ. ಅದಕ್ಕೆ ಬಲಿಯಾದವರು ಮಾತ್ರ ತಮ್ಮ ನಾಗರಿಕ ಪ್ರಜ್ಞೆಯನ್ನು ಮತ್ತೆ ಪಡೆದುಕೊಳ್ಳಲು ಹೋರಾಟವನ್ನು ಮುಂದುವರಿಸುತ್ತಾರೆ. ಆದರೆ ಕೇರಳದಲ್ಲಿ 2108ರ ನೆರೆ ಇಂತಹ ಒಂದು ಕ್ಲೀಷೆಯ ಕಥಾನಕ ಆಗಲಿಲ್ಲ.

ಮುಂಚೂಣಿಗೆ ಬಂದ ನಾಯಕತ್ವ

ಕೇರಳದಲ್ಲಿ ಈ ಬಾರಿ ಬಂದದ್ದು ಹಿಂದೆಂದೂ ಬಾರದಿದ್ದಂತಹ ಆಗಾಧವಾದ ಪ್ರವಾಹ. ಈ ಪ್ರಮಾಣದ ಪ್ರವಾಹವನ್ನು ಯೋಚಿಸಬೇಕಾದರೆ ನೀವು 1924ಕ್ಕೆ ಹೋಗಬೇಕು. ಆದರೂ ಈ ವಿಕೋಪ ಉತ್ಪ್ರೇಕ್ಷೆಯನ್ನು ತಪ್ಪಿಸಿಕೊಂಡಿತು. ಇದನ್ನು ಗಮನಿಸಿದ ಒಬ್ಬ ಸೂಕ್ಷ್ಮ ಪ್ರೇಕ್ಷಕ ಹೇಳುವಂತೆ ಇದೊಂದು ಭಾವೋದ್ವೇಗವನ್ನು ಮೀರಿಕೊಂಡ ಪ್ರವಾಹ. ಅದಕ್ಕೆ ಬಂದ ಪ್ರತಿಕ್ರಿಯೆ ವಾಸ್ತವಿಕವಾಗಿತ್ತು, ವ್ಯವಹಾರಿಕವೂ ಪ್ರಾಯೋಗಿಕವೂ ಆಗಿತ್ತು. ಜನ ತಕ್ಷಣ ಕಾರ್ಯಪ್ರವೃತ್ತರಾದರು. ಆದರೆ ದೊರಕಬಹುದಾಗಿದ್ದ ಸಹಾಯ ಹಾಗೂ ಪರಿಹಾರಗಳ ಮಿತಿಯ ಅರಿವು ಅವರಿಗಿತ್ತು. ಇದಕ್ಕೆ ಕೇರಳದ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರ ಕಾರ್ಯಶೈಲಿ ಹಾಗೂ ನಾಯಕತ್ವ ಬಹುಮಟ್ಟಿಗೆ ಕಾರಣ. ಅವರು ಅಲ್ಲೇ ನಿಂತು ಸ್ವತಃ ಎಲ್ಲವನ್ನು ನಿರ್ವಹಿಸಿದರು. ತಮ್ಮ ಹಿತವನ್ನೂ ಕಡೆಗಾಣಿಸದೆ, ಆದರೆ ಜನರ ಕಾಳಜಿಯನ್ನೇ ಮುಖ್ಯವಾಗಿ ಮಾಡಿಕೊಂಡು ಒಂದು ಕ್ರಮವನ್ನು ರೂಪಿಸಿದ್ದರು. ಸಮಸ್ಯೆಯ ಅಗಾಧತೆ ಹಾಗೂ ಅದನ್ನು ಸರಿಪಡಿಸುವುದಕ್ಕೆ ಬೇಕಾದ ಧೀರ್ಘಕಾಲೀನ ಪ್ರಯತ್ನವನ್ನು ಸ್ಪಷ್ಟವಾಗಿ ವಿವರಿಸುವುದಕ್ಕೆ ಅವರಿಗೆ ಸಾಧ್ಯವಾಗಿತ್ತು.

ಶ್ರೀ ವಿಜಯನ್ ಅವರಿಗೆ ಇನ್ನೊಬ್ಬರನ್ನು ದೂಷಿಸುವುದಕ್ಕೆ ಅಥವಾ ಚುನಾವಣಾ ರಾಜಕೀಯ ಮಾಡಲು ಸಮಯವಿರಲಿಲ್ಲ. ಅವರು ಸಮಚಿತ್ತದಿಂದ ಕೇಂದ್ರವನ್ನು ಹಾಗೂ ದಕ್ಷಿಣದ ರಾಜ್ಯಗಳನ್ನು ನಿರ್ವಹಿಸುತ್ತಿದ್ದ ರೀತಿ ಒಂದು ಮಾಗಿದ ನಾಯಕತ್ವವನ್ನು ತೋರಿಸುತ್ತಿತ್ತು. ಸಣ್ಣ ಸಣ್ಣದರಲ್ಲೂ ತಪ್ಪು ಕಂಡುಹಿಡಿಯುವ ಪ್ರವೃತ್ತಿಯನ್ನು ದೂರವಿಡುವುದರ ಮೂಲಕ ಪ್ರವಾಹವನ್ನು ಕುರಿತ ಚರ್ಚೆಗೆ ಅವರು ಒಂದು ಪಕ್ವತೆಯನ್ನು ತಂದುಕೊಟ್ಟಿದ್ದರು. ಎಲ್ಲೂ ದೂಷಣೆಯ ಆಟಕ್ಕೆ ಅವಕಾಶವಿರಲಿಲ್ಲ. ಆದರೆ ನಿರ್ವಹಿಸಬೇಕಾದ ಜವಾಬ್ದಾರಿಯ ಸರಮಾಲೆಯ ಬಗ್ಗೆ ಅವರಿಗೆ ಸ್ಪಷ್ಟತೆಯಿತ್ತು. ಜನರ ಕಾಳಜಿಯೇ ತನಗೆ ಮುಖ್ಯ, ಸಿದ್ಧಾಂತ ಹಾಗೂ ಧರ್ಮ ಅಲ್ಲ ಅನ್ನುವುದನ್ನು ಅವರು ಸ್ಪಷ್ಟಪಡಿಸಿದ್ದರು. ಪರಿಹಾರವು ಪಕ್ಷಪಾತರಹಿತವಾಗಿ ಇರುವಂತೆ ನೋಡಿಕೊಂಡರು. ಅದನ್ನು ಪಕ್ಷದ ದೃಷ್ಟಿಯಿಂದ ನೋಡುವುದಕ್ಕೂ ಅವಕಾಶ ಕೊಡಲಿಲ್ಲ. ಅವರು ಭಾರತೀಯ ಕಮ್ಯುನಿಸ್ಟ್ ಪಕ್ಷ (ಮಾರ್ಕಿಸ್ಟ್)ಕ್ಕೆ ಸೇರಿದ್ದಿರಬಹುದು. ಆದರೆ ಅವರು ಕೇರಳದ ಮುಖ್ಯಮಂತ್ರಿಯಾಗಿ ನಡೆದುಕೊಂಡರು. ಕ್ರೈಸ್ತರಿಗೆ ಸಹಾಯವಾಗುತ್ತದೆ, ಹಾಗಾಗಿ ಕೇರಳಕ್ಕೆ ನೆರವು ನೀಡಬೇಡಿ ಅನ್ನುವ ಬಲಪಂಥೀಯರು ಹರಡಿದ ಸುದ್ದಿಗಳಿಗೆ ಅವರು ಗಮನಕೊಡಲಿಲ್ಲ. ಅವರಿಗೆ ತಮ್ಮ ಉದ್ದೇಶ ಹಾಗೂ ಆದ್ಯತೆಗಳ ಕುರಿತು ಸ್ಪಷ್ಟತೆಯಿತ್ತು. ಇದು ಚುನಾವಣಾ ಅಥವಾ ಗುಂಪು ರಾಜಕೀಯಕ್ಕೆ ಸಮಯವಲ್ಲ ಎಂಬುದು ಅವರಿಗೆ ಸ್ಪಷ್ಟವಾಗಿತ್ತು.

ವಿಜಯನ್ ಅವರ ಇರುವಿಕೆಯ ಶೈಲಿಯೇ ಚರ್ಚೆಯನ್ನು ಸಾಧ್ಯವಾಗಿಸಿದೆ. ಚರ್ಚೆಯ ವಿಷಯ ತಕ್ಷಣದ ನೆರವಿನ ಕಥಾನಕವಲ್ಲ. ಕೇರಳದ ಬೆಳವಣಿಗೆಯ ದೃಷ್ಟಿಯಿಂದ ಪ್ರವಾಹವನ್ನು ಒಂದು ರೂಪಕವಾಗಿ ಚರ್ಚಿಸುವುದು ಅದರ ಮುಖ್ಯ ಕಾಳಜಿಯಾಗಿತ್ತು. ಜನ ಪರಸ್ಪರ ಕೇಳಿಸಿಕೊಳ್ಳುತ್ತಿದ್ದರು. ನಮ್ಮ ಪ್ರಮುಖ ಪರಿಸರ ತಜ್ಞರಾದ ಮಾಧವ ಗಾಡ್ಗೀಳ್ 'ಈಗ ಶೌರ್ಯಸಾಹಸಗಳು ಮಾತ್ರ ಸಾಕಾಗುವುದಿಲ್ಲ' ಎಂದು ಹೇಳುತ್ತಿದ್ದಾಗ ಜನರ ಕೇಳಿಸಿಕೊಳ್ಳುತ್ತಿದ್ದ ರೀತಿಯಲ್ಲಿ ಇದು ಸ್ಪಷ್ಟವಾಗಿ ಗೋಚರವಾಗುತ್ತಿತ್ತು. ಕೇರಳದ ಪ್ರವಾಹ ಅತಿಯಾದ ಮಳೆಯಿಂದಾಗಿ ಆಗಿದೆ ಅನ್ನುವುದನ್ನು ತಳ್ಳಿಹಾಕಲಾಗುವುದಿಲ್ಲ, ಆದರೆ ಜೊತೆಗೆ ಅದನ್ನು ಮನುಷ್ಯನಿರ್ಮಿತ ಪ್ರಕೋಪವಾಗಿಯೂ ನೋಡಬೇಕು ಎಂದೂ ಹೇಳಿದರು.

ಮಾಧವ ಗಾಡ್ಗೀಳ್ ಕೇರಳದ ಬೆಳವಣಿಗೆಯನ್ನು ಕುರಿತಂತೆ ಧೀರ್ಘಕಾಲೀನ ಪ್ರಶ್ನೆಗಳನ್ನು ಎತ್ತುತ್ತಿದ್ದಾರೆ ಎಂಬುದನ್ನು ಜನ ಅರ್ಥಮಾಡಿಕೊಂಡಿದ್ದರು. ಅದರಲ್ಲಿ ಕಾಂಗ್ರೆಸ್ ಹಾಗೂ ಕಮ್ಯುನಿಸ್ಟ ಪಕ್ಷ ಎರಡರ ಜವಾಬ್ದಾರಿಯೂ ಇದೆ. ಅದಕ್ಕೆ ಬಂದ ಪ್ರತಿಕ್ರಿಯೆ ಮುಕ್ತವಾಗಿತ್ತು. ಯಾಕೆಂದರೆ ಅವರು ತಮ್ಮ ವರದಿಯ ಪರವಾಗಿ ವಾದಿಸುತ್ತಿರಲಿಲ್ಲ ಎಂಬುದನ್ನು ಪ್ರೇಕ್ಷಕರು ಮನಗಂಡಿದ್ದರು. ಗಾಡ್ಗೀಳ್ ಭವಿಷ್ಯದಲ್ಲಿ ಜನರು ಅನುಭವಿಸಬಹುದಾದ ಯಾತನೆಯನ್ನು ತೊಡೆದುಹಾಕುವ ಬಗೆಯನ್ನು ಗಮನಿಸುತ್ತಿದ್ದರು. ಭವಿಷ್ಯವನ್ನು ಕುರಿತಂತೆ ರಾಜಕೀಯ ಹಾಗೂ ವಿಜ್ಞಾನ ಈ ಪರಸ್ಪರ ಹೊಣೆಗಾರಿಕೆಯನ್ನು ಸೃಷ್ಟಿಸಲು ಒಂದಾಗಿತ್ತು.

ಈ ಕಥಾನಕದ ಶಕ್ತಿ ಅಂದರೆ ಒಂದು ಕಾಲಸೂಚಿಯನ್ನು ರೂಪಿಸಿದ್ದು ಮತ್ತು ಅದರಲ್ಲಿ ಹೊಣೆಗಾರಿಕೆಯ ಸ್ವರೂಪವನ್ನು ಸ್ಪಷ್ಟವಾಗಿ ವಿವರಿಸಿದ್ದು. ಜನರ ಪ್ರತಿಕ್ರಿಯೆಯ ಧಾಟಿ ಮತ್ತು ನಡವಳಿಕೆ ಚರ್ಚೆಯ ಗುಣಮಟ್ಟವನ್ನು ಪ್ರಭಾವಿಸಿತ್ತು. ವಿಕೋಪಕ್ಕೆ ಕೇರಳ ಧೈರ್ಯ ಹಾಗೂ ಘನತೆಯಿಂದ ಪ್ರತಿಕ್ರಿಯಿಸಿತ್ತು. ಒಂದು ಮಿಲಿಯನ್‌ಗಿಂತ ಹೆಚ್ಚು ಮಂದಿ ತಮ್ಮ ಮನೆಗಳು ಹಾಳಾಗಿವೆ ಅಥವಾ ನಾಶಗೊಂಡಿವೆ ಅನ್ನುವುದನ್ನು ಅರ್ಥಮಾಡಿಕೊಂಡು ತಾತ್ಕಾಲಿಕ ಕ್ಯಾಂಪುಗಳಿಗೆ ಹೋಗಿದ್ದರು

ಸಾಮಾಜಿಕ ಐಕ್ಯತೆ

ಪ್ರತಿಕ್ರಿಯೆಗಳು ಅದರಲ್ಲೂ ವಿಶೇಷವಾಗಿ ವಯಸ್ಸಾದವರ ಪ್ರತಿಕ್ರಿಯೆಗಳು ಇಡೀ ಚರ್ಚೆಯ ಘನತೆಯನ್ನು ಮತ್ತಷ್ಟು ಹೆಚ್ಚಿಸಿತ್ತು. ಕೇರಳವು ಬಲಿಪಶುವಾದ ಜನರ ಗುಂಪಿನಂತೆ ನಡೆದುಕೊಳ್ಳಲಿಲ್ಲ. ಅದು ಕರ್ತೃತ್ವಕ್ಕೆ ಒತ್ತು ನೀಡಿತು ಮತ್ತು ಪೌರಕರ್ತವ್ಯಕ್ಕೆ ಒಂದು ಆವರಣವನ್ನು ನಿರ್ಮಿಸಿಕೊಟ್ಟಿತು. ರಾಜ್ಯದಿಂದಾಚೆ ನೆಲೆಸಿರುವ ಕೇರಳಿಗರು ತಕ್ಷಣವೇ ಸ್ಪಂದಿಸಿದರು. ಸರ್ಕಾರದ ಆಡಳಿತದ ವಿಧಾನ ಮತ್ತು ಸ್ವಯಂಸಹಾಯದ ಉತ್ಸಾಹಗಳ ನಡುವೆ ಕೇರಳ ತುಂಬಾ ವಿಶಿಷ್ಟವಾದ ಸಾಮಾಜಿಕ ಐಕ್ಯತೆಯನ್ನು ಸೃಷ್ಟಿಸಿತು. ಜನ ಪರಸ್ಪರ ತಮ್ಮ ತಪ್ಪನ್ನು ಒಪ್ಪಿಕೊಂಡರು. ಕಾರ್ಯಕ್ಷಮತೆ ಮತ್ತು ಸಹಾನುಭೂತಿಯ ಪ್ರಬಲ ಸಂವೇದನೆಯನ್ನು ಸ್ವಯಂಸಹಾಯತತ್ವವು ಮತ್ತಷ್ಟು ಹೆಚ್ಚಿಸಿತು. ಇಂತಹ ಆದರ್ಶಪ್ರಾಯವಾದ ಪೌರಪ್ರಜ್ಞೆಯ ಕಲ್ಪನೆ ಚರ್ಚೆಯು ಯಾವ ಹಾದಿಯಲ್ಲಿ ಸಾಗಬೇಕೆಂಬುದನ್ನು ನಿರ್ಧರಿಸಿತು. ಪ್ರವಾಹದಿಂದ ಪಾರಾದವರು ಮತ್ತು ಸಂತ್ರಸ್ತರು ಇಬ್ಬರೂ ತಾವು ನಾಗರಿಕರು ಎಂಬುದನ್ನು ಒತ್ತಿ ಹೇಳಿದರು ಮತ್ತು ಇಂತಹ ವಿಕೋಪದ ಪರಿಸ್ಥಿತಿಯಲ್ಲಿ ನಾಗರಿಕ ಕರ್ತವ್ಯಗಳ ವಿಸ್ತೃತವಾದ ವಿವರಣೆಯು ಕೇರಳವನ್ನು ಪ್ರಜಾಸತ್ತಾತ್ಮಕ ಕಲ್ಪನೆಯ ಮಾದರಿಯನ್ನಾಗಿ ಮಾಡಿದೆ. ರಾಜಕೀಯ ಅರ್ಥಶಾಸ್ತ್ರವನ್ನು ಮೀರಿಕೊಂಡ ಭಾಷೆಯೊಂದು ಯಾತನೆಗೆ ದೊರಕಿತು. ಆದರೆ ಪರಿಸರ ಮತ್ತು ಅಭಿವೃದ್ಧಿಯಲ್ಲಿ ಯಾತನೆಯು ಒಂದು ದೂರಗಾಮಿಯಾದ ಸ್ಥಾನವನ್ನು ಕಂಡುಕೊಂಡಿತು. ಪ್ರವಾಹ ಎನ್ನುವುದು ದೇವರು ಅಥವಾ ಪ್ರಕೃತಿಯ ಕೃತ್ಯವಾಗದೇ, ಸಮಾಜಶಾಸ್ತ್ರೀಯ ದೃಷ್ಟಿಯಿಂದ ವಿಶ್ಲೇಷಿಸಬೇಕಾದ ಒಂದು ಸಾಮಾಜಿಕ ಸಂಗತಿಯಾಯಿತು.

ಕೇಂದ್ರವು ಒಂದು ವೇಳೆ ತುಂಬಾ ಸಂಕುಚಿತವಾಗಿ ಮತ್ತು ಸ್ಥಳೀಯವಾಗಿ ಪ್ರತಿಕ್ರಿಯಿಸಿದರೂ ಕೂಡ, ಅಂತಿಮವಾಗಿ ಪ್ರವಾಹಗಳು ಪ್ರಜಾಸತ್ತಾತ್ಮಕ ಕಲ್ಪನೆಗೆ ಒಂದು ಸವಾಲಾಗುತ್ತವೆ. ಅಷ್ಟೇ ಅಲ್ಲ ಫೆಡರೇಷನ್ನಿನ ಪರಿಕಲ್ಪನೆಯ ಭವಿಷ್ಯವನ್ನು ಪುನರ್ ಪರಿಶೀಲಿಸುವಂತೆ ನಮ್ಮನ್ನು ಒತ್ತಾಯಿಸುತ್ತದೆ ಎನ್ನುವುದು ಕೇರಳ ಸರ್ಕಾರಕ್ಕೆ ಅರಿವಾಗಿತ್ತು. ಪಶ್ಚಿಮ ಏಷ್ಯಾ ದೊಡ್ಡ ಪ್ರಮಾಣದ ಅನುದಾನವನ್ನು ನೀಡುವ ಇಂಗಿತವನ್ನು ವ್ಯಕ್ತಪಡಿಸಿತು. ಈ ಪ್ರಮಾಣದ ನೆರವನ್ನು ಯಾರೂ ಊಹಿಸುವುದಕ್ಕೂ ಸಾಧ್ಯವಿರಲಿಲ್ಲ. ಆದರೆ ಕೇಂದ್ರದಲ್ಲಿ ಗದ್ದುಗೆ ಹಿಡಿದಿರುವ ಭಾರತೀಯ ಜನತಾ ಪಕ್ಷ ಅದನ್ನು ತಿರಸ್ಕರಿಸಿತು. ಈಗ ನಮ್ಮ ಮುಂದಿರುವ ಪ್ರಶ್ನೆ ಪ್ರಭುತ್ವದ ಸ್ವಾಯತ್ತತೆಯ ಹಿಂದಿನ ಕನಸುಗಳನ್ನು ಪ್ರಶ್ನಿಸಬಹುದೇ ಅಥವಾ ವಿದೇಶೀ ನೆರವನ್ನೂ ಇನ್ನೂ ಕಳಂಕದ ಕಣ್ಣಿನಿಂದಲೇ ನೋಡಬೇಕೆ ಎಂಬುದು. ನೋವಿನ ವಿಚಾರವೆಂದರೆ, ಸಿಲಿಕಾನ್ ಕಣಿವೆಯಲ್ಲಿ ಅನಿವಾಸಿಗಳ (ಎನ್‌ಆರ್‌ಐಗಳ) ಹೂಡಿಕೆಯ ಬಗ್ಗೆ ತುಂಬಾ ಉತ್ಸುಕವಾಗಿರುವ ಬಿಜೆಪಿಯು ಕೊಲ್ಲಿ ರಾಷ್ಟ್ರಗಳ ರಾಜಕೀಯ ಅರ್ಥಶಾಸ್ತ್ರದಲ್ಲಿ ತನ್ನ ಪಾತ್ರವನ್ನು ಸ್ವಲ್ಪವೂ ಅರ್ಥಮಾಡಿಕೊಂಡಿಲ್ಲ.

ಅಲ್ಲಿ ಮತ್ತೆ ನವೀಕರಣಗೊಂಡಿದ್ದು ಒಂದು ರಾಜ್ಯಕ್ಕಿಂತ ಹೆಚ್ಚಾಗಿ ಸಾಮಾಜಿಕ ಪ್ರಜ್ಞೆ. ಕೇರಳವನ್ನು ನೆರೆ ಸಂಪೂರ್ಣವಾಗಿ ಅಳಿಸಿಹಾಕಿದೆ ಎಂಬ ಒಂದು ಅರಿವು ಅಲ್ಲಿ ಮೂಡಿದೆ. ಹಳೆಯದರ ಸ್ಥಳದಲ್ಲಿ ಒಂದು ಹೊಸ ಸಮಾಜವನ್ನು ಕಂಡಕೊಳ್ಳಬೇಕಾಗಿದೆ. ರಕ್ಷಣೆ, ಪರಿಹಾರ, ಪುನರ್‌ವಸತಿ ಎಂಬ ಪ್ರಕೋಪದ ಮಾಮೂಲಿ ಕಥಾನಕದಿಂದ ರಕ್ಷಣೆ, ಪರಿಹಾರ ಹಾಗೂ ಪುನರ್‌ನಿರ್ಮಾಣ ಸಾಧ್ಯವಾಗಿದೆ. ಪರಿಸರ ಹಾಗೂ ಬೆಳವಣಿಗೆಯನ್ನು ಕುರಿತು ಯೋಚಿಸುವ ಒಂದು ಹೊಸ ಕೇರಳವನ್ನು ಸೃಷ್ಟಿಸಿಬೇಕಾಗಿದೆ ಎಂಬುದರ ಬಗ್ಗೆ ಶ್ರೀ ವಿಜಯನ್ ಅವರಿಗೆ ಸ್ಪಷ್ಟವಿದೆ. ಹಳೆಯ ದುರಂತದಿಂದ ಚೇತರಿಸಿಕೊಳ್ಳುವುದರ ಜೊತೆಗೆ ಮೂಲ ಸೌಕರ್ಯದ ಬಾಳಿಕೆಯ ಬಗ್ಗೆಯೂ ಯೋಚನೆ ಮಾಡಬೇಕಾಗಿದೆ. ವಿಜಯನ್ ಅವರೇ ಹೇಳಿರುವಂತೆ 1924ರ ಪ್ರವಾಹದ ಸಮಯದಲ್ಲಿ ಒಂದು ಅಣೆಕಟ್ಟು ಇತ್ತು. ಇಂದು 42 ದೊಡ್ಡ ಅಣೆಕಟ್ಟುಗಳೂ ಸೇರಿದಂತೆ 82 ಅಣೆಕಟ್ಟುಗಳು ಇವೆ. ಇಂದು ಹೊಸ ಬಗೆಯ ನಿಯಂತ್ರಣ ಹಾಗೂ ತಾಳಿಕೆಯನ್ನು ಕಂಡುಕೊಳ್ಳಬೇಕಾಗಿದೆ. ಈ ಚಿಂತನೆಯ ಹಿಂದೆ ಸರ್ಕಾರಗಳು ಇಂತಹ ದುರಂತಗಳನ್ನು ಮಾದರಿಯಾಗಬಲ್ಲಂತಹ ಬದಲಾವಣೆಯ ಕ್ಷಣಗಳಾಗಿ ಬಳಸಿಕೊಳ್ಳಬೇಕು ಎಂಬ ವಿಚಾರವೂ ಇತ್ತು. ಕೇರಳಕ್ಕೆ ಆವಶ್ಯಕವಾಗಿರುವ ಮೂಲಭೂತ ಸೌಕರ್ಯವನ್ನು ನಿರ್ಮಿಸುವುದಕ್ಕೆ ಕನಿಷ್ಟ ಎರಡು ದಶಕಗಳು ಬೇಕು. ಒಂದು ಪ್ರವಾಹವೆನ್ನುವುದು ಪ್ರಜಾಸತ್ತಾತ್ಮಕತೆ ಹಾಗು ಆಡಳಿತವನ್ನು ಕುರಿತು ಮರುಚಿಂತನೆ ಮಾಡುವುದಕ್ಕೆ, ಅದನ್ನು ಪರಿಸರ, ಸಂಸ್ಕೃತಿ ಹಾಗೂ ಬದುಕಿನೊಂದಿಗೆ ಮತ್ತೆ ಜೋಡಿಸುವುದಕ್ಕೆ ಒಂದು ಅವಕಾಶವಾಗಿದೆ.

ಆದರೂ ಇನ್ನೂ ಉತ್ತರ ಕಂಡುಕೊಳ್ಳಬೇಕಾದ ಹಲವಾರು ಪ್ರಶ್ನೆಗಳಿವೆ. ಗಾಡ್ಗೀಳ್ ಹೇಳಿದ್ದು ಸರಿ. ನಮಗೆ ಒಂದು ನೈತಿಕ ಹಾಗೂ ಆರ್ಥಿಕ ಕಲ್ಪನೆಯಾಗಿ ಪರಿಸರಾತ್ಮಕ ಒಳನೋಟ ಇರಬೇಕು. ಪ್ರಕೃತಿಯನ್ನು ಧರ್ಮದರ್ಶಿತ್ವದ (ಟ್ರಸ್ಟೀಶಿಪ್‌ನ) ಕ್ರಿಯೆಯಾಗಿ ನೋಡುವುದಕ್ಕೆ ಸಾಧ್ಯವಾಗಬೇಕು. ಅದರ ಶಕ್ತಿ ಹಾಗೂ ಕೋಪವನ್ನು ಅರ್ಥಮಾಡಿಕೊಳ್ಳುವುದಕ್ಕೆ ಆಗಬೇಕು. ಪ್ರವಾಹದಿಂದ ಪಾರಾಗಿ ಉಳಿದವರೊಬ್ಬರು ನದಿ ತಾನು ಕಳೆದುಕೊಂಡಿದ್ದ ತನ್ನತನವನ್ನು ಮತ್ತೆ ಪಡೆದುಕೊಂಡಿದೆ ಎಂದು ಹೇಳಿದರಂತೆ. ತನ್ನ ಸಂಪ್ರದಾಯಿಕ ಹಾಗೂ ಜಾಗತಿಕ ಪ್ರಜ್ಞೆಯನ್ನು ಸೃಜನಶೀಲ ಬಗೆಗಳಲ್ಲಿ ಬೆಸೆಯುತ್ತಿರುವ ಕೇರಳಕ್ಕೆ ತನ್ನ ನಾಶವಾಗಿರುವ ಪರಿಸರಾತ್ಮಕ ಅಸ್ತಿತ್ವವನ್ನು ಬಳಕೆ ಹಾಗೂ ಬೆಳವಣಿಗೆಯ ಮರೆವನ್ನು ಮೀರಿಕೊಂಡು ನೋಡುವುದಕ್ಕೆ ಬಹುಶಃ ಇದು ಸಕಾಲವೆನಿಸುತ್ತದೆ.

ನೆನಪಿಡಲು ಕಲಿಯೋಣ

ಹಳೆಯ ಮಾದರಿಗಳ ದುರಂತದ ಸಂದರ್ಭದಲ್ಲಿನ ಒಂದು ದೊಡ್ಡ ತಪ್ಪನ್ನು ಗಮನಿಸಬೇಕು. ದುರಂತಗಳು ಪ್ರಮಾಣ ಎಷ್ಟೇ ದೊಡ್ಡದಿರಲಿ, ಆ ಸಂದರ್ಭದ ಕಾರ್ಯನೀತಿಯ ನೆನಪುಗಳು ನಮ್ಮಲ್ಲಿ ಉಳಿದಿರುವುದಿಲ್ಲ. ಹಳೆಯ ಪಾಠಗಳನ್ನು ನಾವು ಕಲಿಯುವುದಿಲ್ಲ, ಹೊಸದನ್ನೂ ಮರೆತುಬಿಡುತ್ತೇವೆ. ಕಥಾನಕವಾಗಿ ದುರಂತಗಳಿಗೆ ಕಥೆಹೇಳುವ ಗುಣ ಇರಬೇಕು. ನೀತಿಕಥೆಗಳಂತೆ ಅವುಗಳನ್ನು ಪುನರಾವರ್ತಿಸುತ್ತಿರಬೇಕು, ಮತ್ತೆ ಮತ್ತೆ ಹೊಸ ರೀತಿಯಲ್ಲಿ ಹೇಳುತ್ತಿರಬೇಕು, ಮರುಚಿಂತನೆ ಮಾಡುತ್ತಿರಬೇಕು. ಕಥೆಗಾರ ಹಾಗೂ ನೀತಿ ರೂಪಿಸುವವನು ಪ್ರವಾಹ ಕೇರಳವನ್ನು ಪುನರುಜ್ಜೀವನಗೊಳಿಸಿ, ಪುನರ್ ನಿರ್ಮಿಸುವ ಚಿತ್ರವನ್ನು ನೇಯುತ್ತಿರಬೇಕು. ನೋವಿನ ಕಥನವನ್ನು ನ್ಯಾಯದ ಹೊಸ ಮಾದರಿಗಳನ್ನಾಗಿ ಬದಲಿಸಬೇಕು. ಈ ಸಮಸ್ಯೆಗೆ ಪರಿಹಾರಕಂಡುಕೊಳ್ಳಲು ಮನಸ್ಸಿನ ಹೊಸ ಪಂಚಾಯಿತಿಗಳನ್ನು ಕೇರಳ ಸೃಷ್ಟಿಸಬೇಕು.

ಫೋನ್ 9900082773

ಪ್ರತಿ ಸರ್ವಾಧಿಕಾರಶಾಹಿ ದಾಳಿಗೂ ಐಕ್ಯ ಪ್ರತಿರೋಧ ಒಡ್ಡಬೇಕು



ಸನಾತನ ಸಂಸ್ಥಾ ಮತ್ತದರ ಸಹವರ್ತಿ ಸಂಘಟನೆ ಹಿಂದೂ ಜಾಗೃತಿ ಸಮಿತಿ ವಿರುದ್ಧ ಸಾಕಷ್ಟು ಮಾಹಿತಿಗಳು ಇದ್ದರೂ ಕ್ರಮ ಕೈಗೊಳ್ಳಲು ಹಿಂದೇಟು ಹಾಕುತ್ತಿರುವ ಮಹಾರಾಷ್ಟ್ರ ಬಿಜೆಪಿ ಸರಕಾರ ಮಾನವ ಹಕ್ಕುಗಳು ಮತ್ತು ನಾಗರಿಕ ಸ್ವಾತಂತ್ರ್ಯದ ಕಾರ್ಯಕರ್ತರು ಹಾಗೂ ಎಡಪಂಥೀಯ ಬುದ್ಧಿಜೀವಿಗಳ ಬೆನ್ನು ಹತ್ತಿದೆ.

ಸರ್ವಾಧಿಕಾರಶಾಹಿ ಆಳ್ವಿಕೆ ಎಲ್ಲಾ ವಿಭಾಗಗಳ ಮೇಲ ಗುರಿಯಿಡುತ್ತಿದೆ. ಇಂತಹ ಪ್ರತಿಯೊಂದು ಸರ್ವಾಧಿಕಾರಶಾಹಿ ಹಾಗೂ ಪ್ರಜಾಪ್ರಭುತ್ವ-ವಿರೋಧಿ ಆಕ್ರಮಣವನ್ನೂ ಪ್ರತಿರೋಧಿಸಬೇಕು. ನ್ಯಾಯಾಲಯಗಳು, ಮಾಧ್ಯಮ ಮತ್ತು ಸಾರ್ವಜನಿಕ ವೇದಿಕೆಗಳಲ್ಲಿ ಐಕ್ಯ ಹೋರಾಟಗಳ ಮೂಲಕ ಅವನ್ನು ಎದುರಿಸಬೇಕು.



*** ಪ್ರಕಾಶ ಕಾರಟ್**

ದೇಶದ ಐದು ರಾಜ್ಯಗಳ ಹಲವು ನಗರಗಳಲ್ಲಿ ಪುಣೆ ಪೊಲೀಸರು ಮಾನವ ಹಕ್ಕುಗಳು ಮತ್ತು ನಾಗರಿಕ ಸ್ವಾತಂತ್ರ್ಯದ ಕಾರ್ಯಕರ್ತರು ಹಾಗೂ ಎಡಪಂಥೀಯ ಬುದ್ಧಿಜೀವಿಗಳನ್ನು ಬಂಧಿಸಿದ್ದು ಹಾಗೂ ಮನೆಗಳ ಮೇಲೆ ದಾಳಿ ದೇಶವು ತ್ವರಿತಗತಿಯಲ್ಲಿ ಸರ್ವಾಧಿಕಾರಶಾಹಿ ಆಳ್ವಿಕೆಯ ಅಡಿಗೆ ಒಳಗಾಗುತ್ತಿದೆ ಎಂಬ ಅನಿಷ್ಟಕಾರಿ ಸೂಚನೆಯಾಗಿದೆ.

ಆಗಸ್ಟ್ 28ರಂದು ಸುಧಾ ಭಾರದ್ವಾಜ್, ಗೌತಮ್ ನವಲಖಾ, ವರವರ ರಾವ್, ವೆರ್ನನ್ ಗೊನ್ಸಾಲ್ವೆಸ್ ಮತ್ತು ಅರುಣ್ ಫೆರೆರಾ ಈ ಐವರು ಕಾರ್ಯಕರ್ತರನ್ನು ಬಂಧಿಸಲಾಯಿತು. ಗೋವಾದಲ್ಲಿ ಪ್ರಾಧ್ಯಾಪಕ ಮತ್ತು ದಲಿತ ಚಿಂತಕ ಆನಂದ ತೇಲ್‌ತುಂಬ್ಡೆ, ರಾಂಚಿಯಲ್ಲಿ ಸ್ಟನ್ ಸ್ವಾಮಿ ಮತ್ತಿತರರ ಮನೆಗಳನ್ನು ಶೋಧಿಸಲಾಯಿತು. ಹೀಗೆ ಬಂಧಿತರ ಹಾಗೂ ಮನೆಗಳನ್ನು ಶೋಧಿಸಲಾದವರ ಲ್ಯಾಪ್‌ಟಾಪ್‌ಗಳು, ಹಾರ್ಡ್ ಡಿಸ್ಕ್‌ಗಳು, ಮೊಬೈಲ್ ಫೋನ್‌ಗಳು ಹಾಗೂ ಇತರ ಕಾಗದಪತ್ರಗಳನ್ನು ವಶಪಡಿಸಿಕೊಂಡು ಒಯ್ಯಲಾಗಿದೆ.

ಎಲ್ಗಾರ್ ಪರಿಷತ್ ಹಾಗೂ ಇದೇ ವರ್ಷದ ಜನವರಿ ಒಂದರಂದು ನಡೆದ ಭೀಮಾ-ಕೋರೆಗಾಂವ್ ಹಿಂಸಾಚಾರದ ತನಿಖೆಗಳ ಸಂಬಂಧ ಈ ಬಂಧನ ಹಾಗೂ ಶೋಧಗಳನ್ನು ನಡೆಸಲಾಗಿದೆ ಎಂದು ಮಹಾರಾಷ್ಟ್ರ ಪೊಲೀಸರು ಹೇಳಿದ್ದಾರೆ. ಜನವರಿ ಒಂದರ ದಲಿತರ ರ್‍ಯಾಲಿ ವೇಳೆ ಅದರಲ್ಲಿ ಭಾಗವಹಿಸಿದ ಜನರ ಮೇಲೆ ಬಲಪಂಥೀಯ ಹಿಂದೂತ್ವ ಸಂಘಟನೆಗಳವರು ಹಲ್ಲೆ ಮಾಡಿದ್ದರು.

ಮಹಾರಾಷ್ಟ್ರ ಪೊಲೀಸರು ಜುಲೈನಲ್ಲಿ ಐವರು ದಲಿತ ಕಾರ್ಯಕರ್ತರನ್ನು ಬಂಧಿಸಿದ್ದರು. ಸುಧೀರ್ ಧವಳೆ, ದಲಿತರ ಪ್ರಕರಣಗಳನ್ನು ಕೈಗೆತ್ತಿಕೊಂಡ ವಕೀಲ ಸುರೇಂದ್ರ ಗಾಡ್ಲಿಂಗ್ ಹಾಗೂ ವಿಶ್ವವಿದ್ಯಾನಿಲಯದ ಅಧ್ಯಾಪಕರಾದ ಶೋಮ ಸೇನ್ ಅವರಲ್ಲಿ ಸೇರಿದ್ದಾರೆ. ರ್‍ಯಾಲಿ ಸಮಯದ ಹಿಂಸಾಚಾರದ ಆರೋಪಗಳ ಮೇಲೆ ಇವರನ್ನು ಬಂಧಿಸಲಾಗಿದೆ ಎಂದ ಪೊಲೀಸರು ಅದರ ಬೆನ್ನಲ್ಲೇ ಇನ್ನೊಂದು ಆರೋಪವನ್ನೂ ಹೊರಿಸಿದ್ದರು. ಪ್ರಧಾನಿ ನರೇಂದ್ರ ಮೋದಿಯವರನ್ನು ಕೊಲ್ಲಲು ಸಂಚು ರೂಪಿಸಲಾಗಿದೆ ಎಂಬ ಹುಸಿ ಪತ್ರವೊಂದರ ಆಧಾರದ ಮೇಲೆ ಆ ರೋಪವನ್ನು ಸೇರಿಸಲಾಗಿತ್ತು.

ಈಗ ಬಂಧಿತರೆಲ್ಲರೂ ಭೀಮಾ-ಕೋರೆಗಾಂವ್ ರ್‍ಯಾಲಿಯನ್ನು ಹಿಂಸಾಚಾರ ಪ್ರಚೋದಿಸಲು ಪ್ರಯತ್ನಿಸಿದ, ಮಾವೋವಾದಿಗಳ ಬಗ್ಗೆ ಅನುಕಂಪ ಹೊಂದಿರುವವರು ಎಂದು ಬಿಂಬಿಸುವ ಪ್ರಯತ್ನವನ್ನು ಅದೇ ಮಾದರಿಯಲ್ಲಿ ಮಾಡಲಾಗುತ್ತಿದೆ. ಈ ಆರೋಪಗಳನ್ನು ಪುಷ್ಟೀಕರಿಸಲು ಅಗತ್ಯವಾದ ರವೆಯಷ್ಟು ಸಾಕ್ಷ್ಯವನ್ನೂ ಪೊಲೀಸರು ಇದುವರೆಗೆ ಒದಗಿಸಿಲ್ಲ. ಈಗ ಬಂಧಿಸಲಾದ ಐವರ ಪೈಕಿ ಯಾರೊಬ್ಬರು ಕೂಡ ಭೀಮಾ-ಕೋರೆಗಾಂವ್ ರ್‍ಯಾಲಿಯಲ್ಲಿ ಯಾವುದೇ ಪಾತ್ರ ಹೊಂದಿಲ್ಲ ಅಥವಾ ಅದರಲ್ಲಿ ಭಾಗವಹಿಸಿದವರೂ ಅಲ್ಲ.

ಭೀಮಾ-ಕೋರೆಗಾಂವ್ ರ್‍ಯಾಲಿಯನ್ನು ಸಂಘಟಿಸಿದ್ದು ತಾವು ಎಂಬುದಾಗಿ ಇಬ್ಬರು ನಿವೃತ್ತ ನ್ಯಾಯಾಧೀಶರಾದ ಪಿ.ಬಿ. ಸಾವಂತ್ ಮತ್ತು ಕೊಲ್ಸೆ ಪಾಟೀಲ್ ಹೇಳಿರುವುದರಿಂದ ಎಲ್ಗಾರ್ ಪರಿಷತ್‌ಗೆ ಮಾವೋವಾದಿ ಸಂಪರ್ಕವನ್ನು ಕಲ್ಪಿಸುವುದು ಎಷ್ಟು ಅಸಂಬದ್ಧ ಎನ್ನುವುದು ಬಯಲಾಗಿದೆ.

ಆದರೆ ಇನ್ನೊಂದೆಡೆ ಹಿಂಸಾಚಾರಕ್ಕೆ ಕುಮ್ಮಕ್ಕು ನೀಡಿದ ಮಿಲಿಂದ್ ಏಕ್‌ಬೋಟೆ ಮತ್ತು ಸಂಭಾಜಿ ಭಿಡೆ ಮೊದಲಾದವರ ವಿರುದ್ಧ ಕ್ರಮ ಕೈಗೊಳ್ಳಲು ಮಹಾರಾಷ್ಟ್ರ ಪೊಲೀಸರು ಹಿಂಜರಿಯುತ್ತಿದ್ದಾರೆ. ಮಿಲಿಂದ್‌ನನ್ನು ಬಂಧಿಸದಿದ್ದಾಗ ಯಾಕೆ ಅವನನ್ನು ಸೆರೆಹಿಡಿದಿಲ್ಲ ಎಂದು ಸ್ವತಃ ಸುಪ್ರೀಂ ಕೋರ್ಟ್ ಪ್ರಶ್ನಿಸಿತ್ತು. ಆಮೇಲೆ ಆತನನ್ನು ಬಂಧಿಸಿದ ಒಂದೇ ತಿಂಗಳಲ್ಲಿ ಆತ ಜಾಮೀನಿನ ಮೇಲೆ ಹೊರಬಂದ. ಇನ್ನೊಂದೆಡೆ ಇದುವರೆಗೆ ಭಿಡೆಯ ಬಂಧನ ಆಗೇ ಇಲ್ಲ.

ಹೆಚ್ಚುತ್ತಿರುವ ದಲಿತ ಹಕ್ಕುಗಳ ಚಳವಳಿಯನ್ನು ಮಾವೋವಾದಿ ಪ್ರೇರಿತ ಎಂದು ಹೇಳಿ ಅದಕ್ಕೆ ಮಸಿ ಬಳಿಯಲು ಮಹಾರಾಷ್ಟ್ರದ ಬಿಜೆಪಿ ಸರಕಾರ ಮತ್ತು ಕೇಂದ್ರ ಸರಕಾರ ಪ್ರಯತ್ನಿಸುತ್ತಿವೆ. ಈ ಸಂಪರ್ಕವನ್ನು ಸಾಬೀತುಪಡಿಸಲಿಕ್ಕಾಗಿಯೇ ಬಂಧಿತ ಎಲ್ಲಾ ಹತ್ತು ಮಂದಿಯ ವಿರುದ್ಧ ಕಾನೂನುಬಾಹಿರ ಚಟುವಟಿಕೆ ತಡೆ ಕಾನೂನು (ಯುಎಪಿಎ) ಬಳಸಲಾಗಿದೆ.

ಮಹಾರಾಷ್ಟ್ರದಲ್ಲಿ ನರೇಂದ್ರ ಧಾಬೋಲ್ಕರ್, ಗೋವಿಂದ ಪನ್ಸಾರೆ ಹತ್ಯೆ ಸಂಬಂಧ ಸಾಕಷ್ಟು ಸಾಕ್ಷ್ಯಗಳು ಹೊರಬಿದ್ದಿವೆ, ಕರ್ನಾಟಕದಲ್ಲಿ ಎಂ.ಎಂ. ಕಲಬುರ್ಗಿ ಮತ್ತು ಗೌರಿ ಲಂಕೇಶ್ ಹತ್ಯೆಯಲ್ಲಿ 'ಸನಾತನ ಸಂಸ್ಥಾ' ಹಾಗೂ ಅದರ ಸಹವರ್ತಿ ಸಂಘಟನೆಗಳ ಕೈವಾಡದ ಬಗ್ಗೆ ಸಾಕ್ಷ್ಯಗಳು ದೊರಕಿವೆ. ಆದರೆ, ಭಯೋತ್ಪಾದನೆ ಚಟುವಟಿಕೆಗಳಲ್ಲಿ ಭಾಗವಹಿಸಿದ ಬಗ್ಗೆ ಸಾಬೀತಾಗಿರುವ ದಾಖಲೆಗಳಿದ್ದರೂ ಈ ಸಂಘಟನೆಗಳ ವಿದುದ್ಧ ಕ್ರಮ ಕೈಗೊಳ್ಳಲು ಮಹಾರಾಷ್ಟ್ರ ಸರಕಾರ ಮತ್ತು ಪೊಲೀಸರು ನಿರಾಕರಿಸುತ್ತಿದ್ದಾರೆ. ಗೌರಿ ಲಂಕೇಶ್ ಹತ್ಯೆ ತನಿಖೆ ನಡೆಸುತ್ತಿರುವ ಕರ್ನಾಟಕ ಪೊಲೀಸರು ಸನಾತನ ಸಂಸ್ಥಾಕ್ಕೆ ಸಂಬಂಧಿಸಿದ ಮೂವರನ್ನು ಇತ್ತೀಚೆಗೆ ಬಂಧಿಸಿದ್ದರಿಂದ ಮಹಾರಾಷ್ಟ್ರದ ಐದು ನಗರಗಳಲ್ಲಿ ಸ್ಫೋಟಗಳನ್ನು ನಡೆಸಲು ಸಂಚು ರೂಪಿಸಲಾಗಿತ್ತು ಎನ್ನುವ ಮಾಹಿತಿ ಬೆಳಕಿಗೆ ಬಂತು. ಇದಾದ ನಂತರವೂ ಸನಾನತನ ಸಂಸ್ಥಾ ಮತ್ತದರ ಸಹವರ್ತಿ ಸಂಘಟನೆ ಹಿಂದೂ ಜಾಗೃತಿ ಸಮಿತಿ ವಿರುದ್ಧ ಕ್ರಮ ಕೈಗೊಳ್ಳಲು ಫಡಣವೀಸ್ ಸರಕಾರ ಹಿಂದೇಟು ಹಾಕುತ್ತಿದೆ.

ಅದರ ಬದಲು, ಸುಧಾ ಭಾರದ್ವಾಜ್ ಮತ್ತು ಆನಂದ ತೇಲ್‌ತುಂಬ್ಡೆ ಅವರಂಥ ಖ್ಯಾತ ವಕೀಲರು ಮತ್ತು ಸಾಮಾಜಿಕ ಕಾರ್ಯಕರ್ತರ ಬೆನ್ನು ಹತ್ತಲು ಮಹಾರಾಷ್ಟ್ರ ಪೊಲೀಸರು ಉತ್ಸಾಹ ತೋರುತ್ತಿದ್ದಾರೆ. ಅವರು ಹತಾಶೆಯಿಂದ ಮಾವೋವಾದಿ ಪಿತೂರಿ ಹೆಣೆಯಲು ಹೀಗೆ ಮಾಡುತ್ತಿದ್ದಾರೆ.

ಪೊಲೀಸ್ ಮತ್ತು ಇತರ ಸರಕಾರಿ ಯಂತ್ರವನ್ನು ಎಗ್ಗಿಲ್ಲದೆ ಬಳಸುತ್ತಿರುವ ರೀತಿಯು ದಲಿತರು, ಆದಿವಾಸಿಗಳು ಮತ್ತು ಇತರ ದಮನಿತ ವಿಭಾಗಗಳ ವಿಚಾರವನ್ನು ಕೈಗೆತ್ತಿಕೊಳ್ಳಬೇಡಿ ಎಂದು ಎಲ್ಲಾ ರಾಜಕೀಯ ಪಕ್ಷಗಳಿಗೆ ಹಾಗೂ ಸಾಮಾಜಿಕ ಕಾರ್ಯಕರ್ತರಿಗೆ ಎಚ್ಚರಿಕೆಯೂ ಆಗಿದೆ. ಹಾಗೇನಾದರೂ ಮಾಡಿದಲ್ಲಿ ನಿಮ್ಮನ್ನು 'ಮಾವೋವಾದಿ' ಮತ್ತು 'ದೇಶ-ವಿರೋಧಿ' ಎಂದು ಗುರಿ ಮಾಡಲಾಗುತ್ತದೆ.

ಈ ಏಕಪಕ್ಷೀಯ ದಾಳಿಗೆ ಇನ್ನೊಂದು ಆಯಾಮವೂ ಇದೆ. ದಲಿತರು ಅಥವಾ ಪ್ರಭುತ್ವದ ದಮನಕ್ಕೆ ಒಳಗಾದ ಸಂತ್ರಸ್ತರ ಪ್ರಕರಣಗಳನ್ನು ಕೈಗೆತ್ತಿಕೊಳ್ಳುವ ವಕೀಲರು ಪ್ರಭುತ್ವದ ಗುರಿಯಾಗುತ್ತಾರೆ ಎನ್ನುವುದೇ ಆ ಅಂಶವಾಗಿದೆ. ಅಂಥವರನ್ನು ಬಂಧಿಸಲಾಗುತ್ತದೆ ಹಾಗೂ ಕರಾಳ ಕಾನೂನುಗಳನ್ನು ಅವರ ವಿರುದ್ಧ ಪ್ರಯೋಗಿಸಲಾಗುತ್ತದೆ. ಇದು ಕಾನೂನು ವೃತ್ತಿಯ ಹಕ್ಕುಗಳು ಮತ್ತು ವಕೀಲರು ಪ್ರತಿನಿಧಿಸುವ ಸಾಂವಿಧಾನಿಕ ಹಕ್ಕುಗಳ ಮೇಲಿನ ಹಲ್ಲೆಯಾಗಿದೆ.

ಇಷ್ಟು ಮಾತ್ರವೇ ಅಲ್ಲ, ಸರ್ವಾಧಿಕಾರಶಾಹಿ ಆಡಳಿತವು ಎಲ್ಲಾ ವಿಭಾಗಗಳನ್ನು ಗುರಿ ಮಾಡುತ್ತಿದೆ- ಪ್ರತಿಪಕ್ಷಗಳು, ಮಾನವ ಹಕ್ಕುಗಳ ಕಾರ್ಯಕರ್ತರು, ಅಕಾಡೆಮಿಕ್‌ಗಳು, ವಕೀಲರು, ಪತ್ರಕರ್ತರು ಮತ್ತು ಲೇಖಕರು. ಪ್ರತಿಯೊಂದು ಸರ್ವಾಧಿಕಾರಶಾಹಿ ಹಾಗೂ ಪ್ರಜಾಪ್ರಭುತ್ವ-ವಿರೋಧಿ ಆಕ್ರಮಣವನ್ನೂ ಪ್ರತಿರೋಧಿಸಬೇಕು. ನ್ಯಾಯಾಲಯಗಳು, ಮಾಧ್ಯಮ ಮತ್ತು ಸಾರ್ವಜನಿಕ ವೇದಿಕೆಗಳಲ್ಲಿ ಐಕ್ಯ ಹೋರಾಟಗಳ ಮೂಲಕ ಅವನ್ನು ಎದುರಿಸಬೇಕು.

ಬಂಧಿತ ಐವರನ್ನು ಸೆಪ್ಟೆಂಬರ್ ಆರರವರೆಗೆ ಪುಣೆಗೆ ವರ್ಗಾಯಿಸಬಾರದೆಂದು ಸುಪ್ರೀಂ ಕೋರ್ಟ್ ತಡೆಯನ್ನು ಪಡೆಯುವಲ್ಲಿನ ಯಶಸ್ಸು ಈ ನಿಟ್ಟಿನಲ್ಲಿ ಒಂದು ಮೊದಲ ಹೆಜ್ಜೆಯಾಗಿದೆ.


ಅನು: ವಿಶ್ವ

ಆಗಸ್ಟ್ 28ರಂದು ಮಹಾರಾಷ್ಟ್ರ ಪೋಲಿಸರು ಹೈದರಾಬಾದಿನಲ್ಲಿ 79 ವರ್ಷದ ಹಿರಿಯ ಕವಿ ಹಾಗೂ ನಿವೃತ್ತ ಪ್ರಾಧ್ಯಾಪಕ ವರಾವರ ರಾವ್, ಫರಿದಾಬಾದ್‌ನಲ್ಲಿ ಪ್ರಖ್ಯಾತ ವಕೀಲೆ ಹಾಗೂ ದಿಲ್ಲಿಯ ರಾಷ್ಟ್ರೀಯ ಕಾನೂನು ವಿವಿಯಲ್ಲಿ ಅಧ್ಯಾಪಕಿಯಾಗಿರುವ ಸುಧಾ ಭಾರದ್ವಾಜ್, ಮುಂಬೈಯಲ್ಲಿ ಪ್ರಖ್ಯಾತ ಲೇಖಕ ಮತ್ತು ಅಂಕಣಕಾರ ವೆರ್ನೊನ್ ಗೊನ್ಸಾಲ್ವೆಸ್, ಛತ್ತಿಸ್‌ಗಡದಲ್ಲಿ ಮಾನವ ಹಕ್ಕುಗಳ ವಕೀಲ ಅರುಣ್ ಫೆರೈರ ಮತ್ತು ದಿಲ್ಲಿಯಲ್ಲಿ ಪತ್ರಕರ್ತ ಗೌತಮ್ ನವಲಖ ಇವರುಗಳ ಮನೆಗಳ ಮೇಲೆ ಮುಂಜಾವಿನಲ್ಲಿ ದಾಳ ಮಾಡಿ ಅಲ್ಲಿದ್ದ ಮೊಬೈಲ್‌ಗಳು, ಲ್ಯಾಪ್‌ಟಾಪ್‌ಗಳು ಇತ್ಯಾದಿಗಳನ್ನು ವಶಪಡಿಸಿಕೊಂಡು ಅವರುಗಳನ್ನು ಪುಣೆಗೆ ಒಯ್ಯುವ ಸನ್ನಾಹದಲ್ಲಿದ್ದರು. ಈ ನಡುವೆ ದಿಲ್ಲಿ ಮತ್ತು ಪಂಜಾಬ್-ಹರ್ಯಾಣ ಹೈಕೋರ್ಟಿನಲ್ಲಿ ಹಾಕಿದ್ದ ಅರ್ಜಿಗಳಿಂದಾಗಿ ಪುಣೆಗೆ ಒಯ್ಯುವ ಆದೇಶಗಳಿಗೆ ಣತಿಜಃಿಂರಿಜಿಡಜು ಡಾಣ ಛಿಜತಾ ಉಳಿದ ಮೂವರನ್ನು ಪುಣೆಗೆ ಕರೆದೊಯ್ಯಲಾಯಿತು.

ಆಗಸ್ಟ್ 29ರಂದು ಐದು ಮಂದಿ ಪ್ರತಿಷ್ಠಿತ ನಾಗರಿಕರು, ದೇಶದ ಹಿರಿಯ ಇತಿಹಾಸಜ್ಞೆ ಪ್ರೊ. ರೊಮಿಲ ಥಾಪರ, ಪದ್ಮಶ್ರೀ ಪ್ರಶಸ್ತಿ ವಿಜೇತೆ ಮತ್ತು ದೇಶದ ಹಿರಿಯ ಮಹಿಳಾವಾದಿ ಅರ್ಥಶಾಸ್ತ್ರಜ್ಞರಲ್ಲಿ ಒಬ್ಬರಾದ ದೇವಕಿ ಜೈನ್, ಪ್ರಸಿದ್ಧ ಅರ್ಥಶಾಸ್ತ್ರಜ್ಞ ಪ್ರೊ. ಪ್ರಭಾತ್ ಪಟ್ನಾಯಕ್, ದಿಲ್ಲಿಯ ಸಮಾಜಶಾಸ್ತ್ರಜ್ಞ ಪ್ರೊ. ಸತೀಶ್ ದೇಶಪಾಂಡೆ ಹಾಗೂ ಕಾಮನ್‌ವೆಲ್ತ್ ಮಾನವ ಹಕ್ಕುಗಳ ಸಂಸ್ಥೆಯ ಹಿರಿಯ ಸಲಹೆಗಾರ ಮಾಜ ದಾರುವಾಲ ಸುಪ್ರಿಂ ಕೋರ್ಟಿನಲ್ಲಿ ಈ ಬಂಧನಗಳ ವಿರುದ್ದ ಅರ್ಜಿ ಸಲ್ಲಿಸಿದರು. ಅದರಲ್ಲಿ ಈ ಬಂಧನಗಳ ಬಗ್ಗೆ ಸ್ವತಂತ್ರ ಸಮಗ್ರ ತನಿಖೆ ನಡೆಸಬೇಕು, ಮಹಾರಾಷ್ಟ್ರ ಸರಕಾರದಿಂದ ಈ ಬಗ್ಗೆ ವಿವರಣೆ ಕೇಳಬೇಕು ಮತ್ತು ಭೀಮ-ಕೋರೆಗಾಂ ಹಿಂಸಾಚಾರಕ್ಕೆ ಸಂಬಂಧಪಟ್ಟಂತೆ ಬಂಧಿಸಿರುವ ಎಲ್ಲ ಕಾರ್ಯಕರ್ತರನ್ನು ಬಿಡುಗಡೆ ಮಾಡಬೇಕು ಎಂದು ಈ ಅರ್ಜಿಯಲ್ಲಿ ಕೋರಲಾಗಿದೆ.

ಮಹಾರಾಷ್ಟ್ರ ಸರಕಾರದ ವಕೀಲರು ಈ ಅರ್ಜಿದಾರರು 'ಅಪರಿಚಿತರು' ಎಂದು ವಿಚಾರಣೆಯನ್ನು ಆಕ್ಷೇಪಿಸಿದರು. ಆದರೆ ನ್ಯಾಯಾಲಯ "ಭಿನ್ನಾಭಿಪ್ರಾಯ ಪ್ರಜಾಪ್ರಭುತ್ವದ ಸುರಕ್ಷತಾ ಕವಾಟ' ಎಂದು ಆಕ್ಷೇಪವನ್ನು ಬದಿಗೊತ್ತಿ ಈ ಐವರನ್ನು ಪುಣೆಗೆ ಒಯ್ಯುವ ಆದೇಶಗಳನ್ನು ತಡೆಹಿಡಿದು ಸದ್ಯಕ್ಕೆ ಮುಂದಿನ ವಿಚಾರಣೆ ಸಪ್ಟಂಬರ್ 6 ರವರೆಗೆ ಅವರೆಲ್ಲರನ್ನೂ ಅವರವರ ಮನೆಗಳಲ್ಲಿ ಬಂಧನದಲ್ಲಿ ಇರಿಸಲು ಆದೇಶ ನೀಡಿದೆ. ಮಹಾರಾಷ್ಟ್ರ ಪೋಲಿಸರು ಪುಣೆಗೆ ಕರೆದೊಯ್ದ ಮೂವರನ್ನು ಮತ್ತೆ ಅವರ ಮನೆಗೆ ಒಯ್ಯಬೇಕಾಗಿ ಬಂದಿದೆ.

ಮಹಾರಾಷ್ಟ್ರ ಪೋಲೀಸರು ಗೋವಾದಲ್ಲಿ ಪ್ರಾಧ್ಯಾಪಕ ಮತ್ತು ದಲಿತ ಚಿಂತಕ ಆನಂದ ತೇಲ್‌ತುಂಬ್ಡೆ, ರಾಂಚಿಯಲ್ಲಿ ಸ್ಟನ್ ಸ್ವಾಮಿಯವರ ಮನೆಗಳ ಮೇಲೂ ದಾಳಿ ಮಾಡಿದರು. ಆನಂದ್ ತೇಲ್ತುಂಬ್ಡೆ ಆಗ ಮನೆಯಲ್ಲಿರಲಿಲ್ಲ. ಆದರೆ ಪೋಲೀಸರು ದರ್ಪದಿಂದ ಬೀಗ ತೆಗೆಸಿ ಇಡೀ ಶೋಧನಾ ಪ್ರಕ್ರಿಯಯನ್ನು ತಾನೊಬ್ಬ ಭಯಾನಕ ಭಯೋತ್ಪಾದಕ ಅಥವ ಕ್ರಿಮಿನಲ್ ಎಂಬಂತೆ ಎಂಬಂತೆ ನಡೆಸಿದರು ಎಂದು ಅವರು ಖೇದ ವ್ಯಕ್ತಪಡಿಸಿದ್ದಾರೆ.



ವ್ಯಂಗ್ಯಚಿತ್ರ: ಮಂಜುಲ್, ಫಸ್ಟ್‌ಪೋಸ್ಟ್



ವ್ಯಂಗ್ಯಚಿತ್ರ ಕೃಪೆ:ಸತೀಶ್ ಆಚಾರ್ಯ

ಚುನಾವಣಾ ಸುಧಾರಣೆಗಳಿಗೆ ಸಿಪಿಐ(ಎಂ) ಟಿಪ್ಪಣಿಯ ಸಾರಾಂಶ

1. ಏಕಕಾಲದಲ್ಲಿ ಚುನಾವಣೆಗಳನ್ನು ನಡೆಸಲು ಸರಕಾರ ಪ್ರಸ್ತಾವಿಸಿರುವ ಎಲ್ಲಾ ವಿಧಾನಗಳು – ಲೋಕಸಭಾ / ವಿಧಾನಸಭೆಯನ್ನು ದೀರ್ಘಗೊಳಿಸುವ ಅಥವಾ ಮೊಟಕುಗೊಳಿಸುವ, ರಾಷ್ಟ್ರಪತಿ/ರಾಜ್ಯಪಾಲರ ಆಡಳಿತ ತರುವ ಇತ್ಯಾದಿ – ಸಂವಿಧಾನದ ಮೂಲ ಆಶಯಗಳಾದ ಪ್ರಜಾಪ್ರಭುತ್ವ, ಒಕ್ಕೂಟತತ್ವ ಇತ್ಯಾದಿಗಳಿಗೆ ವಿರುದ್ಧವಾಗಿದ್ದು ಅದನ್ನು ಸಾರಾಸಗಟಾಗಿ ವಿರೋಧಿಸಬೇಕು.
2. **ಚುನಾವಣೆಯಲ್ಲಿ ಹಣದ ಪಾತ್ರ:** ಇಂದ್ರಜಿತ್ ಗುಪ್ತಾ ಸಮಿತಿ ಶಿಫಾರಸು ಮಾಡಿದ ಚುನಾವಣೆಗೆ ಭಾಗಶಃ ಪ್ರಭುತ್ವ ನಿಧಿ ನಿಯೋಜನೆ (ಸ್ಟೇಟ್ ಫಂಡಿಂಗ್) ಮಾಡಬೇಕು. ವಿದೇಶೀ ದೇಣಿಗೆ ತಿದ್ದುಪಡಿ, ಚುನಾವಣಾ ಬಾಂಡುಗಳನ್ನು ಹಿಂತೆಗೆದುಕೊಳ್ಳಬೇಕು. ಪಕ್ಷಗಳಿಗೆ ಮತ್ತು ಅಭ್ಯರ್ಥಿಗಳಿಗೆ ಕಾರ್ಪೊರೇಟ್ ಮತ್ತು ಇತರ ರಾಜಕಿಯ/ಚುನಾವಣಾ ದೇಣಿಗೆಗಳನ್ನು ನಿಷೇಧಿಸಬೇಕು. ಯಾವುದೇ ದೇಣಿಗೆ ಸಾರ್ವಜನಿಕವಾಗಿ ಪಾರದರ್ಶಕವಾಗಿರಬೇಕು. ಪಕ್ಷದ ಚುನಾವಣಾ ಖರ್ಚಿನ ಮೇಲೆ ಮಿತಿ ಹೇರಬೇಕು.
3. **ಭಾಗಶಃ ಆನುಪಾತಿಕ ಪ್ರಾತಿನಿಧ್ಯ:** ಈಗಿರುವ ಲೋಕಸಭೆಯ 543 ಸೀಟುಗಳನ್ನು ನೇರ ಚುನಾವಣೆಯ ಮೂಲಕ ತುಂಬುವುದನ್ನು ಮುಂದುವರಿಸಿ, ಸ್ಥಾನಗಳನ್ನು ಶೇ. 25 ರಷ್ಟು ಹೆಚ್ಚು ಮಾಡಿ, ಆ 136 ಸ್ಥಾನಗಳನ್ನು ಪಟ್ಟಿ ಪದ್ಧತಿಯನ್ನು ಅನುಸರಿಸಿ ಆನುಪಾತಿಕ ಪ್ರಾತಿನಿಧ್ಯದಿಂದ ತುಂಬುವ ಬದಲಾವಣೆಗಳನ್ನು ಮಾಡಬೇಕು. ನಂತರ ಆನುಪಾತಿಕ ಪ್ರಾತಿನಿಧ್ಯದ ಪದ್ಧತಿಯಲ್ಲಿನ ಸೀಟುಗಳ ಪಾಲನ್ನು ವಿಸ್ತರಿಸಬೇಕು..

ಸಿಪಿಐ(ಎಂ) ಪಿ.ಬಿ.ಯ 'ಚುನಾವಣಾ ಸುಧಾರಣೆಗಳು–ಒಂದು ಟಿಪ್ಪಣಿ'

ಏಕಕಾಲಕ್ಕೆ ಚುನಾವಣೆಗಳು ಬೇಡ !

ಚುನಾವಣೆಗಳಲ್ಲಿ ಭಾರೀ ಪ್ರಮಾಣದ ಕಾರ್ಪೊರೆಟ್ ಹಣ, ಕಾರ್ಪೊರೆಟ್ ಮಾಧ್ಯಮಗಳು ದೊಡ್ಡ ರೀತಿಯಲ್ಲಿ ಬಿಜೆಪಿಯ ಬೆಂಬಲಕ್ಕೆ ನಿಂತಿರುವ ಹಿನ್ನೆಲೆಯಲ್ಲಿ, ಮುಂಬರುತ್ತಿರುವ ಲೋಕಸಭಾ ಮತ್ತು ಹಲವು ರಾಜ್ಯಗಳ ವಿಧಾನಸಭಾ ಚುನಾವಣಾ ಕಣ ಹಿಂದೆಂದಿಗಿಂತಲೂ ಅತ್ಯಂತ ಅಸಮಾನ ಸ್ಪರ್ಧೆ ಕಾಣಲಿದೆ. ಇತ್ತೀಚೆಗೆ ಚುನಾವಣೆಗೆ ವಿದೇಶೀ ದೇಣಿಗೆಯನ್ನು ಕಾನೂನುಬದ್ಧಗೊಳಿಸಿದ್ದು ಮತ್ತು ಚುನಾವಣಾ ಬಾಂಡುಗಳು, ಚುನಾವಣಾ ದೇಣಿಗೆ ಬಗ್ಗೆ ಕಾರ್ಪೊರೆಟ್ ಗಳ ಮೇಲೆ ಇದ್ದ ಬದ್ದ ನಿಬಂಧನೆಗಳು, ಮಿತಿಗಳು ಮತ್ತು ಪಾರದರ್ಶಕತೆಯನ್ನು ಅಳಿಸಿಹಾಕಿದೆ. ಇದರ ಪ್ರಯೋಜನವೂ ಪ್ರಮುಖವಾಗಿ ಬಿಜೆಪಿಗೇ ದೊರಕಲಿದೆ. ಇದರಿಂದ ಚುನಾವಣೆಗಳಲ್ಲಿ ಹಣದ ಪಾತ್ರ, ಭ್ರಷ್ಟಾಚಾರಕ್ಕೆ ಅವಕಾಶ ವಿಪರೀತವಾಗಿ ಹೆಚ್ಚಿದೆ.

ಇದು ಸಾಲದೆಂಬಂತೆ ಜನರ ಆಕ್ರೋಶದಿಂದ ತಪ್ಪಿಸಿಕೊಳ್ಳಲು, ವಿರೋಧ ಪಕ್ಷಗಳನ್ನು ಇನ್ನಷ್ಟು ದುರ್ಬಲಗೊಳಿಸಲು ಏಕಕಾಲಕ್ಕೆ ಲೋಕಸಭಾ ಮತ್ತು ವಿಧಾನಸಭಾ ಚುನಾವಣೆಗಳ ಪ್ರಸ್ತಾವವನ್ನು ಮೋದಿ ಸರಕಾರ ಮುಂದಿಟ್ಟಿದೆ. ಇ.ವಿ.ಎಂ.ಗಳ ಬಗ್ಗೆ ಸಹ ಇತ್ತೀಚೆಗೆ ಚರ್ಚೆ ಎದ್ದಿದೆ. ಇದರೊಂದಿಗೆ ಇತ್ತೀಚೆಗೆ ಚುನಾವಣಾ ಆಯೋಗದ ನಿಷ್ಪಕ್ಷಪಾತತೆಯ ಬಗ್ಗೆ ಎದ್ದಿರುವ ತೀವ್ರ ಅನುಮಾನಗಳು ಚುನಾವಣಾ ಸುಧಾರಣೆಗಳ ಅಜೆಂಡಾವನ್ನು ಮುನ್ನೆಲೆಗೆ ತಂದಿದೆ.

ಈಗಿನ ವ್ಯವಸ್ಥೆಯಲ್ಲಿ ಪಕ್ಷಗಳ ಮತಗಳಿಕೆ ಮತ್ತು ಸೀಟುಗಳಿಕೆಯಲ್ಲಿ ಇರುವ ತೀವ್ರ ಅಸಮತೋಲನ, ಪಕ್ಷಗಳ ಆಂತರಿಕ ಪ್ರಜಾಪ್ರಭುತ್ವದ ವಿಷಯಗಳೂ ಹೆಚ್ಚೆಚ್ಚು ಪ್ರಮುಖವಾಗುತ್ತಿವೆ. ಇವೆಲ್ಲ ಸವಾಲುಗಳನ್ನು ಎದುರಿಸಿ ಪರಿಹರಿಸುವ ಸಮಗ್ರ ಮತ್ತು ತೀವ್ರ ಚುನಾವಣಾ ಸುಧಾರಣೆಗಳ ಬಗ್ಗೆ ಸಿಪಿಐ(ಎಂ) ಪೊಲಿಟ್ ಬ್ಯೂರೊ ಒಂದು ಟಿಪ್ಪಣಿ ಅಂಗೀಕರಿಸಿ, ಈ ಬಗ್ಗೆ ದೇಶದಾದ್ಯಂತ ಚರ್ಚೆ–ಸಂವಾದ ಚಳುವಳಿಗಳಿಗೆ ಕರೆ ಕೊಟ್ಟಿದೆ. ಇಲ್ಲಿ ಆ ಟಿಪ್ಪಣಿಯ ಕೆಲವು ಪ್ರಮುಖ ಅಂಶಗಳನ್ನು ಕೊಡಲಾಗಿದೆ. ಜತೆಗೆ ಸಿಪಿಐ(ಎಂ) ಪ್ರಸ್ತಾವಿಸುವ ಪ್ರಮುಖ ಸುಧಾರಣೆಗಳ ಸಾರಾಂಶವೂ ಇಲ್ಲಿದೆ.



ಶಾಸಕರ ಭವನ ಸಭಾಂಗಣದಲ್ಲಿ "ಚುನಾವಣಾ ಸುಧಾರಣೆಗಳು – ಒಂದು ಸಂವಾದ' ಅಗಸ್ಟ್ 30, 2018ರಂದು ನಡೆದು ಸಿಪಿಐ(ಎಂ), ಕಾಂಗ್ರೆಸ್, ಜೆಡಿ(ಯು–ಶರದ ಯಾದವ್), ಇತರ ಎಡಪಕ್ಷಗಳು ಭಾಗವಹಿಸಿದ್ದವು (ವರದಿ ಪುಟ 5ರಲ್ಲಿ)

4. **ರಾಜಕೀಯ ಪಕ್ಷಗಳ ಆಂತರಿಕ ಪ್ರಜಾಪ್ರಭುತ್ವವನ್ನು** ಹಾಗೂ ಪಾರದರ್ಶಕತೆಯನ್ನು ತರಲು ಕಾನೂನು ಆಯೋಗದ ಸಂಬಂಧಪಟ್ಟ ಶಿಫಾರಸುಗಳನ್ನು ಸ್ಥೂಲ ಮಾರ್ಗನಿರ್ದೇಶನಗಳಾಗಿ ಜಾರಿಗೆ ಪ್ರಯತ್ನಿಸಬೇಕು.
5. **ಚುನಾವಣಾ ಆಯೋಗದ ಪಾತ್ರವನ್ನು** ಸಂವಿಧಾನಿಕ ಸಂಸ್ಥೆಯಾಗಿ ಬಲಪಡಿಸಲು ಆಯುಕ್ತರ ನೇಮಕಾತಿಯಲ್ಲಿ ನ್ಯಾಯಾಂಗ ಮತ್ತು ಶಾಸಕಾಂಗವನ್ನು ಒಳಗೊಳ್ಳುವುದು, ಅಧಿಕಾರಶಾಹಿಯ ನಿವೃತ್ತಿ–ನಂತರದ ಆಮಿಷವಾಗದಂತೆ ಕ್ರಮಗಳು ಅಗತ್ಯ.
6. **ಮಾಧ್ಯಮಗಳ ಪಾತ್ರ ಮತ್ತು ಪ್ರಭಾವ:** ಚುನಾವಣೆಗಳ ಸಮಯದಲ್ಲಿ ಖಾಸಗೀ ಮುದ್ರಣ ಮತ್ತು ಎಲೆಕ್ಟ್ರಾನಿಕ್ ಮಾಧ್ಯಮಗಳಲ್ಲಿ ರಾಜಕೀಯ ಪಕ್ಷಗಳಿಗೆ ಹಾಗೂ ಅಭ್ಯರ್ಥಿಗಳಿಗೆ ಸಮಯ ನೀಡಲು ಸೂಕ್ತ ವ್ಯವಸ್ಥೆ, ಕಾಸಿಗಾಗಿ ಸುದ್ದಿ ಪರಿಣಾಮಕಾರಿ ನಿಷೇಧ ಮತ್ತು ಚುನಾವಣಾ ಜಾಹೀರಾತುಗಳ ಮೇಲೆ ನಿಯಂತ್ರಣ, ಸುದ್ದಿ ಮತ್ತು ಅಭಿಪ್ರಾಯಗಳಲ್ಲಿ ಪಕ್ಷಪಾತದ ವಿರುದ್ಧ ಎಲ್ಲಾ ಮಾಧ್ಯಮಗಳಿಗೆ ನಿರ್ದೇಶನ
7. **ಮತದಾನದ ಪದ್ಧತಿ ಮತ್ತು ತಂತ್ರಜ್ಞಾನದ ಆಯ್ಕೆ:** ಕನಿಷ್ಠ ಶೇ. 10 ರಷ್ಟು ಮತಗಟ್ಟೆಗಳಲ್ಲಿ ವಿವಿಪಿಎಟಿ ಗಣನೆಗಳನ್ನು ಇವಿಎಂ ದಾಖಲೆಗಳೊಂದಿಗೆ ತಾಳೆ, ಮತ್ತು ಇವಿಎಂ ಮತ್ತು ವಿವಿಪಿಎಟಿ ನಿರ್ವಹಣೆಯಲ್ಲಿ ನಿರಾಕರಿಸಲಾಗದ ಸುರಕ್ಷತಾ ವ್ಯವಸ್ಥೆಗಳ ಜಾರಿ

ಚುನಾವಣಾ ಸುಧಾರಣೆಗಳಿಗೆ ಸಿಪಿಐ(ಎಂ) ಟಿಪ್ಪಣಿಯ ಆಯ್ದ ಭಾಗಗಳು

1. ಏಕಕಾಲಕ್ಕೆ ಚುನಾವಣೆಗಳನ್ನು ನಡೆಸುವ ಪ್ರಸ್ತಾವ

ಲೋಕಸಭೆ ಅಥವಾ ವಿಧಾನಸಭೆಗಳ ಅವಧಿಯನ್ನು ದೀರ್ಘಗೊಳಿಸುವ ಯಾವುದೇ ಪ್ರಯತ್ನ ಸಂವಿಧಾನ–ವಿರೋಧಿಯಷ್ಟೇ ಅಲ್ಲ, ಪ್ರಜಾಪ್ರಭುತ್ವ ವಿರೋಧಿಯೂ ಆಗಿದೆ. ಚುನಾಯಿತ ಪ್ರತಿನಿಧಿಗಳ ಮೂಲಕ ವ್ಯಕ್ತವಾಗುವ ಜನತೆಯ ಇಚ್ಛೆಗೇ ಪಾರಮ್ಯ ಇರಬೇಕು.

ಏಕಕಾಲಕ್ಕೆ ಚುನಾವಣೆಗಳನ್ನು ನಡೆಸುವುದಕ್ಕೆ ಸಂಬಂಧಿಸಿದಂತೆ ಸಂವಿಧಾನಕ್ಕೆ ತಿದ್ದುಪಡಿ ಮಾಡಲು ಹಲವಾರು ಸಲಹೆ ಸೂಚನೆಗಳನ್ನು ನೀಡಲಾಗುತ್ತಿದೆ. ಇತ್ತೀಚೆಗೆ ನೀತಿ ಆಯೋಗವು ಬಿಡುಗಡೆ ಮಾಡಿರುವ ಚರ್ಚಾಪ್ರಬಂಧದಲ್ಲಿನ ಒಂದು ಸೂಚನೆಯ ಪ್ರಕಾರ, ಒಂದು ವೇಳೆ ಸಂಸತ್ತನ್ನು ವಿಸರ್ಜಿಸುವುದನ್ನು ತಪ್ಪಿಸಲು ಸಾಧ್ಯವಾಗದಿದ್ದರೆ, ಲೋಕಸಭೆಯ ಉಳಿದಿರುವ ಅವಧಿಯು ತುಂಬಾ ದೀರ್ಘವಾಗಿಲ್ಲದಿದ್ದರೆ, ಮುಂದಿನ ಸದನವನ್ನು ರಚಿಸುವ ವರೆಗೆ, ರಾಷ್ಟ್ರಪತಿಯವರು ತಾವು ನೇಮಿಸುವ ಒಂದು ಮಂತ್ರಿಮಂಡಲದ ಸಹಾಯ ಮತ್ತು ಸಲಹೆಗಳೊಂದಿಗೆ ಆಡಳಿತವನ್ನು ನಡೆಸಬಹುದು. ಈ ಆಕ್ರೋಶಕಾರಿ ಪ್ರಸ್ತಾವ ರಾಷ್ಟ್ರಪತಿಯವರನ್ನು ಕಾರ್ಯಾಕಾರಿ ಮುಖ್ಯಸ್ಥರನ್ನಾಗಿ ಮಾಡುತ್ತದೆ. ಇದು ಕಾರ್ಯಕಾರಿ ಅಧ್ಯಕ್ಷೀಯ ಪದ್ಧತಿಯನ್ನು ಹಿಂಬಾಗಿಲಿನಿಂದ ತರುವ ಪ್ರಯತ್ನವಾಗಿದೆ.

ಇನ್ನೊಂದು ಸೂಚನೆಯೆಂದರೆ, ಸದನವನ್ನು ವಿಸರ್ಜಿಸುವಾಗ ಅದರ ಉಳಿದಿರುವ ಅವಧಿಯು ದೀರ್ಘವಾಗಿದ್ದಲ್ಲಿ ಆಗ ಹೊಸದಾಗಿ ಚುನಾವಣೆಗಳನ್ನು ನಡೆಸಬಹುದು, ಆದರೆ ಈ ಹೊಸದಾಗಿ ಚುನಾಯಿತ ಸದನದ ಅವಧಿಯು ಹಿಂದಿನ ಸದನದ ಉಳಿದಿದ್ದ ಅವಧಿ ಮಾತ್ರ ಆಗಿರಬೇಕು. ಅಂದರೆ ಸದನವನ್ನು ಅದು ಆಯ್ಕೆಗೊಂಡ ಎರಡು ವರ್ಷಗಳ ನಂತರ ವಿಸರ್ಜಿಸಿದಲ್ಲಿ, ನಂತರ ನಡೆಯುವ ಚುನಾವಣೆಯಲ್ಲಿ ಆಯ್ಕೆಯಾಗುವ ಸದನದ ಅವಧಿ ಮೂರು ವರ್ಷಗಳದ್ದಾಗಿರುತ್ತದೆ. ಅಂದರೆ ಲೋಕಸಭಾ ಚುನಾವಣೆಗಳನ್ನು ಪದೇ ಪದೇ ನಡೆಸಬೇಕಾಗುತ್ತದೆ– ಇದು ಏಕಕಾಲಕ್ಕೆ ಚುನಾವಣೆಗಳ ಪ್ರತಿಪಾದನೆಯ ಮೂಲ ಉದ್ದೇಶವನ್ನೇ ವಿಫಲಗೊಳಿಸುತ್ತದೆ.

ಏಕಕಾಲಕ್ಕೆ ಚುನಾವಣೆಗಳನ್ನು ನಡೆಸುವ ಪ್ರಯತ್ನಗಳಿಗೆ ಬಲಿಯಾಗುವ ಇನ್ನೊಂದು ಸಂಗತಿಯೆಂದರೆ ಒಕ್ಕೂಟ ತತ್ವ. ಲೋಕಸಭೆ ಮತ್ತು ವಿಧಾನಸಭಾ ಚುನಾವಣೆಗಳನ್ನು ಏಕಕಾಲಕ್ಕೆ ನಡೆಸಲು 2015ರ ಸಂಸದೀಯ ಸ್ಥಾಯಿ ಸಮಿತಿಯ 79 ನೇ ವರದಿ ಮತ್ತು ನೀತಿ ಆಯೋಗದ ಪ್ರಬಂಧದ ಒಂದು ಸೂಚನೆಯೆಂದರೆ, ಹಂತ–ಹಂತವಾಗಿ ಕೆಲವು ವಿಧಾನಸಭೆಗಳ ಅವದಿಯನ್ನು ವಿಸ್ತರಿಸುವುದು ಅಥವಾ ಕೆಲವು ವಿಧಾನ ಸಭೆಗಳ ಅವಧಿಯನ್ನು ಮೊಟಕುಗೊಳಿಸುವುದು. ವಿಧಾನಸಭೆಗಳ ಅವಧಿಯನ್ನು ವಿಸ್ತರಿಸುವ ಅಥವಾ ಮೊಟಕುಗೊಳಿಸುವ ಎರಡೂ ಕ್ರಮಗಳು ರಾಜ್ಯದ ಹಕ್ಕುಗಳ ಮೇಲಿನ ದಾಳಿಯಾಗಿದೆ ಹಾಗೂ ತಮ್ಮ ವಿಧಾನ ಸಭೆಯನ್ನು ಆಯ್ಕೆ ಮಾಡುವ ನಾಗರೀಕರ ಹಕ್ಕುಗಳನ್ನು ನಿರ್ಬಂಧಿಸುತ್ತದೆ.

ರಾಜ್ಯ ವಿಧಾನಸಭೆಗಳಿಗೆ ಇರುವ ಮತ್ತೊಂದು ಸೂಚನೆ, ಒಂದು ವೇಳೆ ವಿಧಾನ ಸಭೆಯು ತನ್ನ ಅವಧಿಯ ಹೆಚ್ಚಿನ ಭಾಗವನ್ನು ಕಳೆದ ನಂತರ ವಿಸರ್ಜಿಸಲ್ಪಟ್ಟರೆ, ಉಳಿದ ಅವಧಿಯಲ್ಲಿ ರಾಜ್ಯಪಾಲರು ರಾಜ್ಯವನ್ನು ನಡೆಸುವುದು. ಇದು ಕೂಡ ಕೇಂದ್ರದ ಆಳ್ವಿಕೆಯೇ ಆಗುತ್ತದೆ.

ಶಾಸನ ಸಭೆಗಳ ಉತ್ತರದಾಯಿತ್ವವನ್ನು ನಿರ್ಬಂಧಿಸುವ ಮತ್ತು ಅವುಗಳ ನಿಗದಿತ ಅವಧಿಗೆ ಹಲವು ಸೂಚನೆಗಳು ಬಂದಿವೆ. ಭಾರತದ ಕಾನೂನು ಆಯೋಗದ ಕರಡು ಕಾರ್ಯಕಾರಿ

ಪುಟ 11 ಕ್ಕೆ

2. ನಿಧಿ ನಿಯೋಜನೆ (ಫಂಡಿಂಗ್)

ಇಂದ್ರಜಿತ್ ಗುಪ್ತಾ ಸಮಿತಿಯ ಶಿಫಾರಸು ಮಾಡಿರುವ ಭಾಗಶಃ ಪ್ರಭುತ್ವ ಚುನಾವಣಾ ನಿಧಿ ನಿಯೋಜನೆಯನ್ನು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಬೆಂಬಲಿಸುತ್ತದೆ. ಸಂಪೂರ್ಣವಾಗಿ ಪ್ರಭುತ್ವವೇ ಚುನಾವಣೆಗೆ ನಿಧಿ ನೀಡುವುದು ಅಥವಾ ಸಮನಾದ ಅನುದಾನ ನೀಡುವುದು ಅಂದರೆ ಖಾಸಗೀ (ದಾನಿಗಳು ಅಥವಾ ಕಾರ್ಪೋರೇಟ್‌ಗಳ) ನಿಧಿ ನೀಡಿಕೆಗಳಿಗೆ ಸಮನಾಗಿ ಸರ್ಕಾರವೂ ನೀಡುವುದು ಸಧ್ಯದ ಪರಿಸ್ಥಿತಿಯಲ್ಲಿ ಕಾರ್ಯಸಾಧ್ಯವಲ್ಲ. ಈಗಿರುವ ಭಾಗಶಃ ನೀಡಿಕೆಯು ಒಂದು ರಾಜಕೀಯ ಪಕ್ಷವು ಚುನಾವಣೆಗೆ ಮಾಡಬಹುದಾದ ಕನಿಷ್ಟ ಖರ್ಚಿಗೆ ಸೀಮಿತವಾಗಿದೆ. ಹೀಗೆ ಸಾಮಗ್ರಿಗಳ ಮೂಲಕ ಪ್ರಭುತ್ವದ ಭಾಗಶಃ ನೀಡಿಕೆಯು ಪಕ್ಷಗಳು ಮತ್ತು ಅಭ್ಯರ್ಥಿಗಳಿಗೆ "ಸಮಾನ ಹಣಕಾಸು ರಂಗಸ್ಥಳ" (Financial Floor)ವನ್ನು ನಿರ್ಮಿಸುತ್ತದೆ. ಇದು ಚುನಾವಣಾ ವೆಚ್ಚವನ್ನು ಕೂಡ ಇಳಿಸಬಲ್ಲದು.

ಪ್ರಭುತ್ವದ ನಿಧಿ ನಿಯೋಜನೆಯ ಸುಧಾರಣೆಗಳು ಚುನಾವಣಾ ಹಣಕಾಸು ಸುಧಾರಣೆಗಳಿಗೆ ಪೂರ್ವಭಾವಿಯಾಗಿ ಬರಬೇಕಾಗುತ್ತದೆ ಇಲ್ಲದಿದ್ದಲ್ಲಿ ಪ್ರಭುತ್ವದ ನಿಧಿ ನೀಡಿಕೆ ರಾಜಕೀಯ ಪಕ್ಷಗಳಿಗೆ ಹಾಗೂ ಅಭ್ಯರ್ಥಿಗಳಿಗೆ ಸಾರ್ವಜನಿಕ ಖಜಾನೆಯಿಂದ ಇನ್ನೊಂದು ಹಣಕಾಸಿನ ಮೂಲವಾಗುತ್ತದೆ.

ಜನತಾ ಪ್ರಾತಿನಿಧ್ಯ ಕಾಯಿದೆಯ ಸೆಕ್ಷನ್ 77 ರಲ್ಲಿ ಅಭ್ಯರ್ಥಿಯ ಚುನಾವಣಾ ವೆಚ್ಚದ ಮೇಲೆ ಮಿತಿಯನ್ನು ಹೇರಲಾಗಿದೆ. ರಾಜಕೀಯ ಪಕ್ಷಗಳು ಒಬ್ಬ ನಿರ್ದಿಷ್ಟ ಅಭ್ಯರ್ಥಿಯ ಪರವಾಗಿಯಲ್ಲದ ಸಾಮಾನ್ಯ ಪ್ರಚಾರಕ್ಕೆ ಎಷ್ಟಾದರೂ ಖರ್ಚು ಮಾಡಬಹುದಾಗಿದೆ. ಪಕ್ಷಗಳ ಚುನಾವಣಾ ವೆಚ್ಚಕ್ಕೆ ಮಿತಿ ನಿಗದಿ ಮಾಡಲಾಗಿಲ್ಲ. ರಾಜಕೀಯ ಪಕ್ಷಗಳ ಖರ್ಚಿಗೆ ಮಿತಿ ನಿಗದಿ ಮಾಡುವಂತ ಸೂಕ್ತ ತಿದ್ದುಪಡಿಯನ್ನು ಜನತಾ ಪ್ರಾತಿನಿಧ್ಯ ಕಾಯಿದೆಗೆ ತರಬೇಕಾಗಿದೆ.

ಜನತಾ ಪ್ರಾತಿನಿಧ್ಯ ಕಾಯಿದೆಯ ಸೆಕ್ಷನ್ 77 ರಲ್ಲಿರುವ ಇನ್ನೊಂದು ನ್ಯೂನ್ಯತೆಯೆಂದರೆ, ಒಂದು ಅಭ್ಯರ್ಥಿಯ ಚುನಾವಣಾ ವೆಚ್ಚವನ್ನು ಅವನು ನಾಮಪತ್ರ ಸಲ್ಲಿಸಿದ ದಿನದಿಂದ ಫಲಿತಾಂಶ ಪ್ರಕಟವಾಗುವ ದಿನದವರೆಗೆ ಮಾಡಿದ ವೆಚ್ಚವಾಗಿ ಪರಿಗಣಿಸಿ ಮಿತಿ ನಿಗದಿ ಪಡಿಸಲಾಗಿದೆ. ಆದರೆ ನಿಜವಾಗಿ ಖರ್ಚು ಮಾಡುವ ಕಾಲಾವಧಿ ಇನ್ನೂ ಧೀರ್ಘವಾಗಿಯೇ ಇರುತ್ತದೆ. ಈ ನ್ಯೂನ್ಯತೆಯನ್ನು ಸರಿಪಡಿಸಲು ಸೂಕ್ತ ಕಾನೂನು ತಿದ್ದುಪಡಿಯ ಅವಶ್ಯಕತೆ ಇದೆ.

ಎಲ್ಲಾ ರಾಜಕೀಯ ಪಕ್ಷಗಳು ತಾವು ಸ್ವೀಕರಿಸಿದ ಮತ್ತು ಖರ್ಚು ಮಾಡಿದ ಎಲ್ಲ ವಿವರಗಳನ್ನು ಸ್ಪಷ್ಟವಾಗಿ ಮತ್ತು ಸಂಪೂರ್ಣವಾಗಿ ಪ್ರಕಟಿಸುವುದಕ್ಕಾಗಿ ಜನತಾ ಪ್ರಾತಿನಿಧ್ಯ ಕಾಯಿದೆಗೆ ಸೂಕ್ತ ತಿದ್ದಪಡಿಗಳನ್ನು ತರಬೇಕು.

ಹೊಸ ಚುನಾವಣಾ ಬಾಂಡುಗಳು ಜಾರಿಗೆ ಬಂದರೆ ನಂತರ ಈ ಅಂಕಿ ಅಂಶಗಳೂ ಹೋಲಿಕೆಗೆ ಲಭ್ಯವಾಗುವುದಿಲ್ಲ. ಯಾವುದೇ ಮಿತಿಯಿಲ್ಲದ ಮತ್ತು ಅನಾಮಧೇಯ ನಿಧಿಗಳ ಜೊತೆಗೆ ವಿದೇಶೀ ನಿಧಿಗಳಿಗೂ ಹೊಸ ತಿದ್ದುಪಡಿಗಳು ಅವಕಾಶ ಮಾಡಿಕೊಡುತ್ತವೆ.

ರಾಜಕೀಯ ಪಕ್ಷಗಳಿಗೆ ಕಾರ್ಪೋರೇಟ್‌ಗಳು ಚುನಾವಣಾ ಬಾಂಡ್‌ಗಳ ಮೂಲಕ ನೀಡುವ ದೇಣಿಗೆಯನ್ನು ಸಂಪೂರ್ಣವಾಗಿ ಸಾರ್ವಜನಿಕ ಪರವೀಕ್ಷಣೆಯಿಂದ ಹೊರಗಿಡಲಾಗಿದೆ. ಚುನಾವಣಾ ಬಾಂಡ್‌ಗಳ ಮೂಲಕ ರಾಜಕೀಯ ಪಕ್ಷಗಳು ಸಂಗ್ರಹಿಸಿದ ದೇಣಿಗೆಯ ಮೂಲವನ್ನು ಪ್ರಕಟ ಮಾಡಬೇಕಿಲ್ಲದಂತಹ ತಿದ್ದುಪಡಿಗಳನ್ನು ಜನತಾ ಪ್ರಾತಿನಿಧ್ಯ ಕಾಯಿದೆ ಮತ್ತು ಆದಾಯಕರ ಕಾಯಿದೆಗಳಿಗೆ ಮಾಡಲಾಗಿದೆ. ರಾಜಕೀಯ ಹೂಡಿಕೆಯನ್ನು ಪಾರದರ್ಶಕಗೊಳಿಸುವುದರ ಬದಲಾಗಿ, ಕಾನೂನಿನ ತಿದ್ದುಪಡಿಗಳನ್ನು ಮಾಡುವ

ಪುಟ 11 ಕ್ಕೆ

ಸಪ್ಟಂಬರ್ 5 ರ ರೈತ–ಕಾರ್ಮಿಕ ಸಂಘರ್ಷ ರ್‍ಯಾಲಿ:
ಹೊಸ ಜಾಗೃತಿಯ ಆರಂಭದ ಸಂಕೇತ –ಪ್ರೊ. ಪ್ರಭಾತ್ ಪಟ್ನಾಯಕ್





ಶೋಷಣೆಯಿಂದ, ತಾರತಮ್ಯಗಳಿಂದ ಮುಕ್ತವಾದ ಭಾರತವನ್ನು ಕಟ್ಟಲು ಇದನ್ನು ಎಲ್ಲರೂ ಬೆಂಬಲಿಸಬೇಕು–ಸ್ವಾಗತ ಸಮಿತಿಯ ಮನವಿ

0.1ಶೇ. ಶ್ರೀಮಂತರ ಪರವಾದ ಧೋರಣೆಗಳ ವಿರುದ್ಧ
99.9ಶೇ. ಜನಸಾಮಾನ್ಯರ-ಪರ ಧೋರಣೆಗಳಿಗಾಗಿ
ಸಪ್ಟಂಬರ್ 5: ಎಲ್ಲರ ನಡಿಗೆ–ದಿಲ್ಲಿಯ ಕಡೆಗೆ

ಇದು ದೇಶದ ಕೋಟ್ಯಂತರ ಕಾರ್ಮಿಕರು, ರೈತರು ಮತ್ತು ಕೃಷಿ ಕೂಲಿಕಾರರ ನಡುವೆ ಕೆಲಸ ಮಾಡುತ್ತಿರುವ ಸಿಐಟಿಯು, ಎಐಕೆಎಸ್(ಅಖಿಲ ಭಾರತ ಕಿಸಾನ್ ಸಭಾ) ಮತ್ತು ಎಐಎಡಬ್ಲ್ಯುಯು (ಅಖಿಲ ಭಾರತ ಕೃಷಿಕೂಲಿಕಾರರ ಸಂಘ) ನೀಡಿರುವ ಕರೆ.

ಕೇವಲ 0.1%ದಷ್ಟು ಶ್ರೀಮಂತರ ಸಮೃದ್ಧಿಗಾಗಿ ಕಲ್ಪಿಸಿರುವ ಧೋರಣೆಗಳನ್ನು ಒಪ್ಪಲು ಸಾಧ್ಯವಿಲ್ಲ ಎಂದು ದುಡಿಯುವ ಜನಗಳು ಒಕ್ಕೊರಲಿನಿಂದ ಹೇಳಬೇಕಾದ ಸಮಯ ಬಂದಿದೆ; ಜಾತಿ–ಧರ್ಮ–ಪ್ರಾದೇಶಿಕ ಭಾವನೆಗಳನ್ನು ಕೆರಳಿಸಿ ಜನರ ಐಕ್ಯತೆಯನ್ನು ಮುರಿಯುವ ಕೋಮುವಾದಿ ಹುನ್ನಾರಗಳನ್ನು ಸೋಲಿಸಲು ದೃಢ ಐಕ್ಯತೆಯನ್ನು ಕಟ್ಟಬೇಕಾದ ಸಮಯ ಬಂದಿದೆ; ಒಟ್ಟಿನಲ್ಲಿ, ಈ ದೇಶದ ಬಹುಸಂಖ್ಯೆಯ ಜನರ ಹಿತ ಕಾಪಾಡಲು ಅಗತ್ಯವಾದ ಪರ್ಯಾಯ ಧೋರಣೆಗಳಿಗಾಗಿ ಒತ್ತಾಯ ಮಾಡಲೇಬೇಕಾದ ಸಮಯ ಬಂದಿದೆ ಎಂದು ಮನಗಂಡಿರುವ ಈ ಸಂಘಟನೆಗಳು ಒಂದು ದೃಢ ಹೋರಾಟದ ಕರೆ ನೀಡಿದವು.

ಇದಕ್ಕೆ ಸಿದ್ಧತೆಯಾಗಿ ಆಗಸ್ಟ್ 9, 2018ರಂದು ಜೈಲು ಭರೋ,ಇದನ್ನನುಸರಿಸಿ ಸ್ವಾತಂತ್ರ್ಯ ದಿನಾಚರಣೆಯ ಹಿಂದಿನ ದಿನ ಆಗಸ್ಟ್ 14–15ರ ರಾತ್ರಿಯಿಡೀ ಸ್ವಾತಂತ್ರ್ಯೋತ್ಸವ ಸಾಮೂಹಿಕ ಜಾಗರಣೆ ನಡೆಸಿದ ನಂತರ ಈಗ ಸೆಪ್ಟೆಂಬರ್ 5, 2018ರಂದು ದೇಶದ ರಾಜಧಾನಿಗೆ ಲಗ್ಗೆಯಿಟ್ಟು 99.9% ದಷ್ಟಿರುವ ಜನಸಾಮಾನ್ಯರ ಪರ ಪರ್ಯಾಯ ಧೋರಣೆಗಳನ್ನು ಒತ್ತಾಯಿಸಿ "ಮಜ್ದೂರ್–ಕಿಸಾನ್ ಪ್ರತಿಭಟನಾ ಪ್ರದರ್ಶನ" ನಡೆಸಲು ಸಿದ್ಧರಾಗಿದ್ದಾರೆ. ದೇಶದ ಮೂಲೆ–ಮೂಲೆಗಳಿಂದ ಕಾರ್ಮಿಕರು, ರೈತರು, ಕೃಷಿ ಕೂಲಿಕಾರರು ದಿಲ್ಲಿಯ ಕಡೆಗೆ ಸಾಗಿದ್ದಾರೆ.

ದೇಶದ ದುಡಿಯುವ ಜನಗಳ ಆಕ್ರೋಶ ಏಕೆ, ಅವರು ಈ ದೇಶದ ಆಳರಸರಿಂದ ಕೇಳುತ್ತಿರುವುದಾದರೂ ಏನು, ದೇಶದ ದುಡಿಯುವ ಜನರ ಪ್ರಮುಖ ಬೇಡಿಕೆಗಳ ಬಗ್ಗೆ ಹಿಂದಿನ ಸಂಚಿಕೆಗಳಲ್ಲಿ ' ಓದಿದ್ದೀರಿ.

ಈಗಾಗಲೇ ವರದಿಯಾಗಿರುವಂತೆ ಈ ಚಾರಿತ್ರಿಕ ರ್‍ಯಾಲಿಯಯನ್ನು ಯಶಸ್ವಿಯಾಗಿ ನಡೆಸಲು ವಿವಿಧ ಕ್ಷೇತ್ರಗಳ ಪ್ರತಿಷ್ಠಿತ ವ್ಯಕ್ತಿಗಳಿರುವ ಒಂದು ಸ್ವಾಗತ ಸನಮಿತಿಯನ್ನು ರಚಿಸಲಾಗಿತ್ತು. ಪ್ರಸಿದ್ಧ ಅರ್ಥಶಾಸ್ತ್ರಜ್ಞ ಪ್ರೊ. ಪ್ರಭಾತ್ ಪಟ್ನಾಯಕ್ ಇದರ ಅಧ್ಯಕ್ಷರು. **ಆಗಸ್ಟ್ 29ರಂದು ಒಂದು ಪತ್ರಿಕಾಸಮ್ಮೇಳನದಲ್ಲಿ ಇವರು ಈ ರ್‍ಯಾಲಿಯ ಐತಿಹಾಸಿಕ ಮಹತ್ವನ್ನು ಸಂಕ್ಷಿಪ್ತವಾಗಿ ತಿಳಿಸುವ ಒಂದು ಮನವಿಯನ್ನು ಬಿಡುಗಡೆ ಮಾಡಿದರು. ಶೋಷಣೆಯಿಂದ, ಜಾತಿ, ಕೋಮು, ಲಿಂಗ ಆಧಾರಿತ ತಾರತಮ್ಯದಿಂದ ಮುಕ್ತವಾದ ಒಂದು ಭಾರತವನ್ನು ಕಟ್ಟುವ ಆಸಕ್ತಿ ಹೊಂದಿರುವ ಎಲ್ಲರೂ ಪತ್ರಿಯೊಂದು ರೀತಿಯಲ್ಲೂ ಇದನ್ನು, ಈ ವರ್ಗಗಳ ತಕ್ಷಣದ ಬೇಡಿಕೆಗಳನ್ನು ಬೆಂಬಲಿಸಬೇಕು ಎಂದು ಇದರಲ್ಲಿ ಸ್ವಾಗತ ಸಮಿತಿ ಮನವಿ ಮಾಡಿಕೊಂಡಿದೆ.**

ಈ ಸಂದರ್ಭದಲ್ಲಿ ಮಾತಾಡುತ್ತ ಪ್ರೊ. ಪ್ರಭಾತ್ ಪಟ್ನಾಯಕ್ ನವ–ಉದಾರವಾದದಿಂದಾಗಿ ಅಪಾರ ಸಂಕಟಗಳನ್ನು ಎದುರಿಸುತ್ತಿರುವ ಈ ಮೂರೂ ವರ್ಗಗಳು ಒಂದಾಗಿರುವುದು ಸಹಜವಷ್ಟೇ ಅಲ್ಲ, ತಮ್ಮ ಹೋರಾಟಗಳನ್ನು ಈ ಹಂತಕ್ಕೆ ತಂದಿರುವುದು ಒಂದು ಮಹತ್ವದ ಸಂಗತಿ ಎಂದರು.

ನವ–ಉದಾರವಾದೀ ಆಳ್ವಿಕೆಯ ಪ್ರಸಕ್ತ ಕಾಲಘಟ್ಟದಲ್ಲಿ ಕೋಮುವಾದಿ ಸಾಯ ಬಡಿಯುವ ಹಿಂಡುಗಳು ಅಲ್ಪಸಂಖ್ಯಾತರ ಮೇಲೆ, ದಲಿತರ ಮೇಲೆ, ಸರಕಾರದ ಧೋರಣೆಗಳನ್ನು ಟೀಕಿಸುವವರ ಮೇಲೆ ಹರಿಹಾಯವುಉದನ್ನು ಕಂಡಿದ್ದೇವೆ. ಆದರೆ ಇದುವರೆಗೆ ಸರಕಾರ ಒಂದು ಸ್ಥಿಮಿತದಲ್ಲಿತ್ತು. ಆದರೆ ಈಗ ಅದನ್ನೂ ಕಳಕೊಂಡು ದೇಶಾದ್ಯಂತ ಹಲವಾರು ಮಾನವ ಹಕ್ಕುಗಳ ಹೋರಾಟಗಾರರ ಬಂಧನಕ್ಕಿಳಿದಿದೆ.

ಇದುವರೆಗೆ ವಿವಿಧ ಜನವಿಭಾಗಗಳು ತಂತಮ್ಮ ಕ್ಷೇತ್ರಗಳಲ್ಲಿ ಈ ಧೋರಣೆಗಳ ವಿರುದ್ಧ ಹೋರಾಟ ನಡೆಸಿವೆ. ಆದರೆ **ಹದಗೆಡುತ್ತಿರುವ ಸನ್ನಿವೇಶವನ್ನು ಬದಲಿಸಲು ಇಷ್ಟೇ ಸಾಲದು, ಈ ನಿಟ್ಟಿನಲ್ಲಿ ಸಪ್ಟಂಬರ್ 5ರ ರ್‍ಯಾಲಿ ಒಂದು ಚಾರಿತ್ರಿಕ ಹೆಜ್ಜೆ , ದೇಶದ ರಾಜಕೀಯದಲ್ಲೂ ಒಂದು ಹೊಸ ಪ್ರಸ್ಥಾನ ಎಂದು ಪ್ರೊ. ಪಟ್ನಾಯಕ್ ಹೇಳಿದರು.**

ಸ್ವಾಗತ ಸಮಿತಿಯ ಇನ್ನೊಬ್ಬ ಪ್ರಮುಖ ಸದಸ್ಯರಾದ ಪ್ರಸಿದ್ಧ ಕವಿ ಕೆ.ಸಚ್ಚಿದಾನಂದನ್ ಮಾತನಾಡುತ್ತ ದೇಶದಲ್ಲಿ ಈಗ ಧ್ರುವೀಕರಣವಾಗಿದೆ, ಇದರಿಂದಾಗಿ **ಎರಡು ತೆರನ ಸೌಹಾರ್ದಗಳು ಏರ್ಪಟ್ಟಿವೆ ಎಂದರು. ಇದರಲ್ಲಿ ಒಂದು ನಕಾರಾತ್ಮಕವಾದದ್ದು–ನವ–ಉದರವಾದ, ಕೋಮುವಾದ ಮತ್ತು ಇತರ ಬಲಪಂಥೀಯ ಶಕ್ತಿಗಳದ್ದು; ಇದಕ್ಕೆ ಎದುರಾಗಿ ಕಾರ್ಮಿಕರು–ರೈತರು ಮತ್ತು ಕೃಷಿ ಕೂಲಿಕಾರರ ರಚನಾತ್ಮಕ ಸೌಹಾರ್ದ ಬೆಳೆಯುತ್ತಿದೆ. ಈಗ 'ಬುದ್ಧಿಜೀವಿಗಳೂ ಇದರಲ್ಲಿ ಸೇರಿಕೊಳ್ಳಬೇಕಾದ ಸನ್ನಿವೇಶ ನಿರ್ಮಾಣವಾಗಿದೆ. ಇದೀಗ ಒಂದು ವಿಶಾಲವಾದ ಐಕ್ಯತೆಯ ಆರಂಭದ ಸಂಕೇತ ಎಂದು ಅವರು ಹೇಳಿದರು.**

ಪ್ರಭಾತ್ ಪಟ್ನಾಯಕ್, ಕೆ. ಸಚ್ಚಿದಾನಂದನ್, ವಿವಾನ್ ಸುಂದರಂ, ಎಂ ಕೆ ರೈನ, ರಾಮ್ ರಹಮಾನ್, ಮದನ್‌ಗೋಪಾಲ್ ಸಿಂಗ್, ವೆಂಕಟೇಶ್ ರಾಮಕೃಷ್ಣನ್, ಎನ್ ಕೆ. ಶರ್ಮ, ಎಂ ಎಂ ಪಿ ಸಿಂಗ್, ಸೊಹೈಲ್ ಹಾಶ್ಮಿ, ಪಿ ಕೆ ಶುಕ್ಲ, ಡಿ ಎನ್ ಝಾ, ಅರ್ಜುನ್ ದೇವ್, ಲತಾ ಸಿಂಗ್, ಸಿ.ಪಿ.ಚಂದ್ರಶೇಖರ್, ಝೊಯಾ ಹಸನ್, ಗೌಹರ್ ರಝಾ, ದಿನೇಶ್ ಅಬ್ರೋಲ್ ಮತ್ತು ಜಯತಿ ಘೋಷ್ ಇದಕ್ಕೆ ಸಹಿ ಹಾಕಿದ್ದಾರೆ. ಈ ಮನವಿಯ ಪೂರ್ಣ ಪಾಠವನ್ನು ಇಲ್ಲಿ ಕೊಡಲಾಗಿದೆ.

ಸಪ್ಟಂಬರ್ 5ರ ರೈತ–ಕಾರ್ಮಿಕ ರ್‍ಯಾಲಿಯ ಕುರಿತು ಒಂದು ಮನವಿ

ಕಾರ್ಮಿಕರು, ರೈತರು ಮತ್ತು ಕೃಷಿ ಕೂಲಿಕಾರರ ಸಪ್ಟಂಬರ್ 5ರ ರ್‍ಯಾಲಿ ದೇಶದ ಇತಿಹಾಸದಲ್ಲಿ ಒಂದು ಅಭೂತಪೂರ್ವ ಘಟನೆ. ಇದುವರೆಗೆ ದೇಶದಲ್ಲಿ ಕಾರ್ಮಿಕರು, ರೈತರು ಮತ್ತು ಕೃಷಿಕೂಲಿಕಾರರ ಪ್ರತ್ಯೇಕ ರ್‍ಯಾಲಿಗಳು ನಡೆದಿವೆ. ಆದರೆ ಎಂದೂ ಈ ಎಲ್ಲ ವರ್ಗಗಳ ಒಂದು ಜಂಟಿ ರ್‍ಯಾಲಿ, ಅದೂ ದೇಶದ ರಾಜಧಾನಿಯಲ್ಲಿ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಖಂಡಿತ ನಡೆದಿಲ್ಲ. ಇದು ಇಂತಹ ಒಂದು ಮೊದಲ ಪ್ರಯತ್ನವಾಗಿದೆ.

ಈ ವರ್ಗಗಳು ಜೊತೆಗೂಡುತ್ತಿರುವುದು ಒಂದು ಮಹತ್ವಪೂರ್ಣ ರಾಜಕೀಯ ಘಟನೆಯಷ್ಟೇ ಅಲ್ಲ. ಅವರ ಆರ್ಥಿಕ ಹಣಬರೆಹಗಳು ನವ–ಉದಾರವಾದದ ಅಡಿಯಲ್ಲಿ ನಿಕಟವಾಗಿ ಹೆಣೆದುಕೊಂಡು ಬಿಟ್ಟಿವೆ. ನವ–ಉದಾರವಾದದ ಅಡಿಯಲ್ಲಿ ರೈತ ಕೃಷಿಗೆ ಪ್ರಭುತ್ವದ ಬೆಂಬಲವನ್ನು ಹಿಂತೆಗೆದುಕೊಳ್ಳುವ ಮೂಲಕ ಹರಿಯಬಿಟ್ಟ ಕರ್ಷಕ ಬಿಕ್ಕಟ್ಟು ಈಗಾಗಲೇ ಆತ್ಮಹತ್ಯೆಗಳ ಮೂಲಕ ಕಳೆದ ಎರಡು ದಶಕಗಳಲ್ಲಿ 3 ಲಕ್ಷಕ್ಕೂ ಹೆಚ್ಚು ಜೀವಗಳ ಬಲಿ ತೆಗೆದುಕೊಂಡಿದೆ, ಅಸಂಖ್ಯಾತ ಜನಗಳನ್ನು ಉದ್ಯೋಗದ ಹುಡುಕಾಟದಲ್ಲಿ ಗ್ರಾಮಾಂತರಗಳಿಂದ ನಗರಗಳತ್ತ ಅಟ್ಟಿದೆ. ನಗರಗಳಲ್ಲಿ ಅವರು ಅರಸುವ ಉದ್ಯೋಗಗಳು ಇಲ್ಲವೇ ಇಲ್ಲವಾದ್ದರಿಂದ ಅಲ್ಲಿ ಆಗಲೇ ಇರುವ ನಿರುದ್ಯೋಗಿ, ಅರೆಉದ್ಯೋಗಿಗಳ ಸಂಖ್ಯೆ ಮತ್ತಷ್ಟು ಏರುವಂತಾಗಿದೆಯಷ್ಟೇ. ಜತೆಗೆ, ಅವರಿಗೆ ಅರಿವಿಲ್ಲದೆಯೇ, ಇದು ನಗರಗಳಲ್ಲಿ ದುಡಿಯುತ್ತಿರುವ ಕಾರ್ಮಿಕರ ನಿಜಸಂಬಳಗಳನ್ನು ಮತ್ತು ಕೆಲಸದ ಪರಿಸ್ಥಿತಿಗಳನ್ನು ಹದಗೆಡಿಸುವಲ್ಲಿಯೂ ಕಾಣಿಕೆ ನೀಡಿದೆ. ಸಂಘಟಿತರಾಗಿರುವ, ಯೂನಿಯನ್‌ಗಳನ್ನು ಕಟ್ಟಿಕೊಂಡಿರುವ ಕಾರ್ಮಿಕರನ್ನೂ ಇದು ತಟ್ಟಿದೆ.

ಈ ವರ್ಗಗಳು ನವ–ಉದಾರವಾದದಿಂದ ಜಂಟಿಯಾಗಿ ಸಂಕಟಗಳಿಗೆ ಒಳಗಾದವರು. ಅಂತಹ ನವ–ಉದಾರವಾದಿ ವ್ಯವಸ್ಥೆಯನ್ನು ಹಿಮ್ಮೆಟ್ಟಿಸಿ ಸೋಲಿಸಲು ಈ ವರ್ಗಗಳ ಮೈತ್ರಿ ಒಂದು ಪ್ರಾಥಮಿಕ ಸಾಧನ. ಆದ್ದರಿಂದ ಈಗ ದೇಶವನ್ನು ಆಳುತ್ತಿರುವ ಕೋಮುವಾದಿ–ಸರ್ವಾಧಿಕಾರಶಾಹಿ ಶಕ್ತಿಗಳನ್ನು ಪೋಷಿಸುತ್ತಿರುವ ಪ್ರಸಕ್ತ ಕಾಲಘಟ್ಟವನ್ನು ಮೀರಿ ನಿಲ್ಲಲು ಕೂಡ ಈ ಮೈತ್ರಿಯು ಪ್ರಾಥಮಿಕ ಸಾಧನವಾಗಿದೆ. ಈ ಮೈತ್ರಿ ಈಗಿನ ದುಷ್ಟ ಪ್ರವೃತ್ತಿಯ ಅಂತಿಮ ಸೋಲಿನ ಮಾರ್ಗ.

ಈ ಮೈತ್ರಿ ಏರ್ಪಡಲು ನವ–ಉದಾರವಾದವೇ ಒಂದು ವಸ್ತುನಿಷ್ಠ ಸಾಧ್ಯತೆಯನ್ನು ನಿರ್ಮಿಸಿದೆ. ಇದನ್ನು ಬದಲಾವಣೆಯ ಒಂದು ಮಾಧ್ಯಮವಾಗುವ ಪಾತ್ರವನ್ನು ಪ್ರಜ್ಞಾಪೂರ್ವಕವಾಗಿ ವಹಿಸಲು ಆರಂಭಿಸುವ ತನಗಾಗಿಯೇ–ಇರುವ –ಮೈತ್ರಿಯಾಗಿ ಪರಿವರ್ತಿಸುವಲ್ಲಿ ಸಪ್ಟಂಬರ್ 5ರ ರ್‍ಯಾಲಿ ಒಂದು ಮಹತ್ವದ ಹೆಜ್ಜೆ. ಶೋಷಣೆಯಿಂದ, ಜಾತಿ, ಕೋಮು, ಲಿಂಗ ಆಧಾರಿತ ತಾರತಮ್ಯದಿಂದ ಮುಕ್ತವಾದ ಒಂದು ಭಾರತವನ್ನು ಕಟ್ಟುವ ಆಸಕ್ತಿ ಹೊಂದಿರುವ ಎಲ್ಲರೂ ಪತ್ರಿಯೊಂದು ರೀತಿಯಲ್ಲೂ ಇದನ್ನು, ಈ ವರ್ಗಗಳ ತಕ್ಷಣದ ಬೇಡಿಕೆಗಳನ್ನು ಬೆಂಬಲಿಸಬೇಕು ಎಂದು ನಾವು ಮನವಿ ಮಾಡಿಕೊಳ್ಳುತ್ತೇವೆ.

ಕೋಮುವಾದ ದುಡಿಯುವ ಜನಗಳ ಹಿತಗಳಿಗೆ ಮಾರಕ ಪುಟ 10

ಕಾರ್ಮಿಕರು, ರೈತರು, ಕೃಷಿಕೂಲಿಕಾರರ ತಕ್ಷಣದ ಬೇಡಿಕೆಗಳು ಪುಟ 10

ಕೋಮುವಾದ ದುಡಿಯುವ ಜನಗಳ ಹಿತಗಳಿಗೆ ಮಾರಕ

ಸಪ್ಟಂಬರ್ 5 ರಂದು ಸಂಸತ್ತಿನ ಮುಂದೆ ನಡೆಯುವ ರೈತ–ಕಾರ್ಮಿಕ ಸಂಘರ್ಷ ರ್‍ಯಾಲಿ ಎಲ್ಲ ಶ್ರಮಜೀವಿಗಳ ಐಕ್ಯತೆಯನ್ನು ಉಳಿಸಿ ಬೆಳೆಸುವ ಮತ್ತು ಈ ಐಕ್ಯತೆಯನ್ನು ಛಿದ್ರಗೊಳಿಸ ಬಯಸುವವರನ್ನು ಸೋಲಿಸುವ ದೃಢ ನಿರ್ಧಾರವನ್ನು ವ್ಯಕ್ತಗೊಳಿಸಲಿದೆ.

ದೇಶದ ದುಡಿಯುವ ಜನತೆ ಕಛೇರಿಗಳಲ್ಲಿ ಅಂಗಡಿಗಳಲ್ಲಿ, ಹೊಲಗದ್ದೆಗಳಲ್ಲಿ ಕಠಿಣ ಪರಿಸ್ಥಿತಿಯನ್ನು ಎದುರಿಸುತ್ತಿರುವುದಕ್ಕೆ ಕಾರಣ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅನುಸರಿಸುತ್ತಿರುವ ನೀತಿಗಳು, ಏರುತ್ತಿರುವ ಬೆಲೆ, ಸ್ಥಗಿತಗೊಂಡಿರುವ ಸಂಬಳಗಳು, ನಿರುದ್ಯೋಗ, ರೈತರ ಬೆಳೆಗಳಿಗೆ ಬೆಂಬಲ ಬೆಲೆ ಸಿಗದಿರುವುದು, ಹೆಚ್ಚುತ್ತಿರುವ ವಿದ್ಯಾಭ್ಯಾಸ ಮತ್ತು ಆರೋಗ್ಯ ವೆಚ್ಚ .ಇವೆಲ್ಲ 'ಒಳ್ಳೆಯ ದಿನಗಳು' ಬರಲಿವೆ ಎಂಬ ಕನಸನ್ನು ನುಚ್ಚು ನೂರಾಗಿಸಿವೆ. ಆರ್ಥಿಕ ನೀತಿಗಳಿಂದ ರೋಸಿಹೋದ ಜನತೆ 2015 ಮತ್ತು 2016 ರಲ್ಲಿ ಎರಡು ಬೃಹತ್ ಮುಷ್ಕರಗಳ ಮೂಲಕ ಮತ್ತು ಚಾರಿತ್ರಿಕ 2017 ಮಹಾಪಡಾವ್ ಮೂಲಕ ಆಕ್ರೋಶ ವ್ಯಕ್ತಗೊಳಿಸಿದ್ದಾರೆ.

ದುಡಿಯುವ ಜನತೆ ತಮ್ಮ ಬೇಡಿಕೆಗೆ ಹೋರಾಡುವಾಗ ಐಕ್ಯತೆಯನ್ನು ಹಳಿ ತಪ್ಪಿಸುವ ಹುನ್ನಾರ ಧರ್ಮ ಮತ್ತು ಜಾತಿ ಮೂಲಕ ನಡೆಯುವ ಅಪಾಯ ಕಾಣುತ್ತಿದೆ. ಜನರ ಆಕ್ರೋಶ ಸರ್ಕಾರವನ್ನೇ ಕಿತ್ತೊಗೆಯಬಹುದೆಂಬ ಆತಂಕದಿಂದ ಬಿಜೆಪಿ ಮತ್ತು ಅದರ ಗುರು ಆರ್‌ಎಸ್‌ಎಸ್ ಕೋಮುವಾದಿ ವಿಷವನ್ನು ಜನರ ಮಧ್ಯೆ ಹರಡುತ್ತಿವೆ. ಕೋಮುವಾದಿ ಹಿಂಸೆ 2014–2017 ರ ಅವಧಿಯಲ್ಲಿ 28% ಹೆಚ್ಚಿದ್ದು 3000 ಕೋಮು ಹಿಂಸಾಚಾರದ ಘಟನೆಗಳು ನಡೆದಿವೆ, ಇದರಲ್ಲಿ 400 ಮಂದಿ ಬಲಿಯಾಗಿದ್ದಾರೆ ಮತ್ತು 9000 ಮಂದಿ ಗಾಯಗೊಂಡಿದ್ದಾರೆ. ಕೋಮು ಹಿಂಸಾಚಾರವನ್ನು ಉದ್ರೇಕಿಸುವ ಅಧಿಕೃತ ವಾಗಿ ದಾಖಲಾದ ಕೇಸುಗಳ ಸಂಖ್ಯೆ 2014ರಲ್ಲಿ 366 ಇದ್ದದ್ದು 2017ರಲ್ಲಿ 475ಕ್ಕೆ ಏರಿದೆ, ಅಂದರೆ 41% ಏರಿಕೆ.

ಬಿಜೆಪಿ ಸರ್ಕಾರದಲ್ಲಿ ದಲಿತರ ಮೇಲೆ, ಅತ್ಯಂತ ದಮನಿತರ ಮೇಲೆ ಸಂಘಪರಿವಾರ ಪ್ರತಿದಿನ ದೇಶದ ಒಂದಿಲ್ಲೊಮದು ಕಡೆ ಹಲ್ಲೆಗಳನ್ನು ನಡೆಸುತ್ತಿದೆ. ಹೆಚ್ಚಾಗಿ ಈ ಜನವಿಭಾಗಗಳ ಜೀವನೋಪಾಯಗಳು ಮತ್ತು ಅವರ ಮೂಕ ಸಾಮಾಜಿಕ ಹಕ್ಕುಗಳ ಮೇಲೆ ಈ ಹಲ್ಲೆಗಳು ನಡೆಯುತ್ತಿವೆ.

ಬಿಜೆಪಿ 2014ರಲ್ಲಿ ಅಧಿಕಾರಕ್ಕೆ ಬಂದಂದಿನಿಂದ ಗೋರಕ್ಷಣೆಯ ಹೆಸರಿನಲ್ಲಿ 78 ಹಲ್ಲೆಗಳು ನಡೆದಿವೆ, 29 ಮಂದಿಯನ್ನು ಕೋಮುವಾದಿ ಹಿಂಡುಗಳು ಬಡಿದು ಸಾಯಿಸಿವೆ, 273 ಜನರನ್ನು ಗಾಯಗೊಳಿಸಿವೆ, 148 ಮಂದಿ ತೀವ್ರವಾಗಿ ಗಾಯಗೊಂಡಿದ್ದಾರೆ. ಇವರಲ್ಲಿ ಮೂರನೇ ಎರಡರಷ್ಟು ಮುಸ್ಲಿಮರು, ಉಳಿದವರು ಹೆಚ್ಚಾಗಿ ದಲಿತರು. ಕ್ರಿಶ್ಚಿಯನ್ನರೂ ಹೆಚ್ಚೆಚ್ಚು ಹಿಂಸಾಚಾರವನ್ನು ಎದುರಿಸಬೇಕಾಗಿ ಬಂದಿದೆ. ಚರ್ಚುಗಳು, ಪಾದ್ರಿಗಳು, ಕೆರೊಲ್ ಹಾಡುಗಾರರು. ಕ್ರಿಸ್‌ಮಸ್, ಈಸ್ಟರ್ ಆಚರಣೆಗಳು ಹಲ್ಲೆಗಳಿಗೆ ಗುರಿಯಾಗಿವೆ.

ಇವೆಲ್ಲವುಗಳಲ್ಲೂ ಸಂಕಟಕ್ಕೆ ಒಳಗಾದವರು ಜನಸಾಮಾನ್ಯರೇ. ಅವರು ಯಾವುದೇ ಚಳುವಳಿ ನಡೆಸದಂತೆ ಮಾಡಲಾಗಿದೆ, ಇದರಿಮದ ಸಂತೋಷವಾಗಿರುವುದು ಮಾಲಕರಿಗೆ.

ಕೋಮುವಾದಿ ವಿಷವನ್ನು ಸುಳ್ಳು ಮತ್ತು ದ್ವೇಷದ ಸುದ್ದಿಗಳ ಮೂಲಕ ಹರಡಲಾಗುತ್ತಿದೆ. 'ಲವ್‌ಜಿಹಾದ್' ಬಲವಂತ ಮತಾಂತರ, ಗೋಮಾಂಸ, ಜನಸಂಖ್ಯೆ ಹೆಚ್ಚಳ ಎಲ್ಲವೂ ದ್ವೇಷ ಪ್ರಚಾರದ ಸರಕಾಗಿವೆ. ಹಿಂದು ಹಬ್ಬದ ಆಚರಣೆಗಳಿಗೆ ಸಶಸ್ತ್ರ ರೂಪ ಕೊಟ್ಟು ' ಅಲ್ಪಸಂಖ್ಯಾತರ ಮೇಲೆ ದಾಳಿ ನಡೆಸಲಾಗುತ್ತಿದೆ. ಹೀಗೆ ನಡೆಯುವ ಹಿಂಸಾಚಾರದಲ್ಲಿ ಸ್ಥಳೀಯ ಪೋಲಿಸರೂ ಶಾಮೀಲಾಗಿರುತ್ತಾರೆ.

ಬಿಜೆಪಿ ಮತ್ತು ಸಂಘ ಪರಿವಾರದ ಮುಖಂಡರುಗಳು ಮತ್ತೆ–ಮತ್ತೆ ಅಲ್ಪಸಂಖ್ಯಾತರ ಮೇಲೆ ಗುರಿಯಿಡುತ್ತಿದ್ದಾರೆ, ಬಹುಸಂಖ್ಯಾತರ ನಡುವಿನ ಕ್ರಿಮಿನಲ್‌ಗಳಿಗೂ ರಕ್ಷಣೆ ಕೊಡುತ್ತಿದ್ದಾರೆ.

ಈ ದೇಶದಲ್ಲಿ ವಿವಿಧ ಸಮುದಾಯಗಳ ಜನರು ಶತಮಾನಗಳಿಂದ ಸಾಮರಸ್ಯದಿಂದ ಬದುಕು ನಡೆಸಿದ್ದಾರೆ.ಯುದ್ಧಗಳು ನಡೆಯುತ್ತಿದ್ದರೆ ಅದು ಆಳುವವರ ಕುಮ್ಮಕ್ಕಿನಿಂದ ಮಾತ್ರವೇ. ಗದ್ದೆಗಳಲ್ಲಿ, ಕಾರ್ಖಾನೆಗಳಲ್ಲಿ ಜತೆ–ಜತೆಗೇ ದುಡಿದಿದ್ದಾರೆ, ಸಂತೋಷ–ಸಂಕಟಗಳನ್ನು ಹಂಚಿಕೊಂಡಿದ್ದಾರೆ. ಆದರೆ ಈಗ ಇದಕ್ಕೆಲ್ಲ ಬೆದರಿಕೆ ಉಂಟಾಗಿದೆ. ಈ ಹಿಂದೆ ಕೋಮು ಅಶಾಂತಿಯ ಇತಿಹಾಸವೇ ಇಲ್ಲದ ಸ್ಥಳಗಳಲ್ಲೂ ಈಗ ಪರಸ್ಪರ ಘರ್ಷಣೆಗಳು ನಡೆಯುತ್ತಿವೆ. ಇದನ್ನು ಹೀಗೆಯೇ ಬಿಟ್ಟರೆ ಆರೆಸ್ಸೆಸ್–ಬಿಜೆಪಿ ದೇಶವನ್ನು ರಕ್ತಪಾತದತ್ತ ನೂಕಿ ಛಿದ್ರ–ವಿಚ್ಛಿದ್ರಗೊಳಿಸುತ್ತಾರೆ.

ಬಿಜೆಪಿ–ಆರೆಸ್ಸೆಸ್ ಕೋಮುವಾದಿ ಪ್ರಚಾರಗಳು ಅಲ್ಪಸಮುಖ್ಯಾತ ಸಮುದಾಯಗಳ ಜನರನ್ನು ಅವರ ಮೂಲಭೂತವಾದಿಗಳ ತೆಕ್ಕೆಗೆ ತಳ್ಳುತ್ತಿವೆ. ಹೀಗೆ ಹಿಂದೂ ಕೋಮುವಾದಿಗಳು ಮತ್ತು ಅಲ್ಪಸಂಖ್ಯಾತರಲ್ಲಿನ ಮೂಲಭೂತವಾದಿಗಳು ಪರಸ್ಪರ ಪೊಷಣೆ ನೀಡುತ್ತ ದೇಸಕ್ಕೆ, ಜನರಿಗೆ ಅಪಾಯ ಸೃಷ್ಟಿಸುತ್ತಿದ್ದಾರೆ.

ಬಿಜೆಪಿ–ಆರ್‌ಎಸ್‌ಎಸ್ ನ ಚಿಂತನೆಗಳು ದುಡಿಯುವ ಜನಗಳ ಹಿತಾಸಕ್ತಿಗಳಿಗೆ ಹೇಗೆ ಮಾರಕವಾಗಲಿದೆ ಎಂಬುದನ್ನು ತಿಳಿಯಬೇಕಿದೆ. ಬಿಎಂಎಸ್ ನಂತಹ ಸಂಸ್ಥೆಗಳಿಗೆ ಬೇಕಿರುವುದು ಗೋಲ್ವಾಲ್ಕರ್ ಹೇಳಿರುವ 'ಹಿಂದು ರಾಷ್ಟ್ರ ನಿರ್ಮಾಣ' ಅವರ ಪ್ರಕಾರ ಹಿಂದು ಜನಾಂಗ, ಧರ್ಮ, ಸಂಸ್ಕೃತಿ, ಭಾಷೆಗಳಿಗೆ ಸೇರಿರದ ಜನರಿಂದ ರಾಷ್ಟ್ರ ಜೀವನಕ್ಕೆ ಕುತ್ತಾಗುತ್ತದೆ. ಈ ಹಿಂದು ರಾಷ್ಟ್ರ ಎಲ್ಲರಿಗೂ ಸಂಪತ್ತು ಮತ್ತು ಶಾಂತಿ ತರುತ್ತದೆಯೇ? ಅವರ ಗುರು ಗೋಲ್ವಾಲ್ಕರ್ ಹಿಂದುಗಳಲ್ಲದವರೆಲ್ಲ ಗುಲಾಮರ ರೀತಿಯಲ್ಲಿ ಎರಡನೇಯ ದರ್ಜೆ ಪ್ರಜೆಗಳಾಗಿರುತ್ತಾರೆ. ಆದ್ದರಿಂದ ಅವರಿಗೆ ಶಾಂತಿ–ಸಂಪತ್ತಿನ ಪ್ರಶ್ನೆಯೇ ಇರಬಾರದು!


ಗೋಲ್ವಾಲ್ಕರ್ ಕಾರ್ಮಿಕರ ಹಕ್ಕುಗಳನ್ನು, ಬೇಡಿಕೆಗಳನ್ನು ಗೇಲಿ ಮಾಡಿದ್ದಾರೆ. ಎಲ್ಲರೂ ಹಕ್ಕುಗಳ ಬಗ್ಗೆಯೇ ಮಾತಾಡುತ್ತಾರೆ, ಕರ್ತವ್ಯಗಳ ಬಗ್ಗೆ ಮಾತಾಡುತ್ತಿಲ್ಲ, ಆದ್ದರಿಂದಲೇ ಅವರ ಪ್ರಕಾರ ಉದ್ಯಮಿಗಳು– ಕಾರ್ಮಿಕರು, ಮಾಲಕರು–ನೌಕರರ ನಡುವೆ ತಿಕ್ಕಾಟಗಳು ನಡೆಯುತ್ತಿವೆಯಂತೆ, ಮಾಲಕರ, ಉದ್ಯಮಿಗಳ ಲಾಭದ ದುರಾಸೆಗಳಿಂದ ಅಲ್ಲ!

ಆದ್ದರಿಂದಲೇ ಕಾರ್ಮಿಕರ ಹಕ್ಕುಗಳನ್ನು ಮೊಟಕು ಮಾಡಿ ಅವರನ್ನು ಕೂಲಿಗುಲಾಮರಾಗಿಸುವ ಕಾರ್ಮಿಕ ಕಾನೂನು 'ಸುಧಾರಣೆ'ಗಳ ಬಗ್ಗೆ ಕಾಮಿಕರನ್ನು ಪ್ರತಿನಿಧಿಸುತ್ತೇನ ಎನ್ನುವ ಬಿಎಂಎಸ್‌ಗೆ ಯಾವ ಆಕ್ಷೇಪವೂ ಇಲ್ಲ! ಸಂಬಳ–ಸೌಕರ್ಯಗಳ ಕಡಿತಗಳ ಬಗ್ಗೆ ಯಾವ ಪ್ರತಿಭಟನೆಯನ್ನೂ ಮಾಡಬಾರದು!

ಹಿಂದು ರಾಷ್ಟ್ರದಲ್ಲಿ ಆಳುವ 'ಶ್ರೇಷ್ಟರು'ಗಳಿಗೆ ಸೇವೆ ಸಲ್ಲಿಸಬೇಕೇ ಹೊರತು ಹಕ್ಕಿಗಾಗಿ ಕನಸು ಕಾಣುವಂತಿಲ್ಲ. ಕಾರ್ಮಿಕರ ಸಮಸ್ಯೆಗಳಿಗೆ ಆರ್‌ಎಸ್‌ಎಸ್ ನೀಡುವ ಪರಿಹಾರ ಮಾಲಿಕರು ಕಾಲೋನಿಗಳಲ್ಲಿ ಎಸ್ಟೇಟ್‌ಗಳಲ್ಲಿ ದೇವಸ್ಥಾನ ಕಟ್ಟುವುದು, ಭಜನೆ, ಪೂಜೆ, ಹರಿಕಥೆ ಕಾರ್ಯಕ್ರಮಗಳನ್ನು ಆಯೋಜಿಸುವುದು. ಸಹಜವಾಗಿಯೇ ಇದು ದೊಡ್ಡ–ದೊಡ್ಡ ಮಾಲಕರು, ಉದ್ಯಮಿಗಳಿಗೆ ಅಪ್ಯಾಯಮಾನವಾದ ಸಿದ್ಧಾಂತ. ಆದ್ದರಿಂದ ಅಂಬಾನಿಗಳು, ಟಾಟಾಗಳು, ಬಿರ್ಲಾಗಳು, ಅದಾನಿಗಳು ದಿನಬೆಳಗಾದರೆ ನರೇಂದ್ರ ಮೋದಿಯವರನ್ನು ಹಾಡಿ ಹೊಗಳುತ್ತಿದ್ದಾರೆ.

ಆದರೆ ಇದು ಕಾರ್ಮಿಕ ವರ್ಗಕ್ಕೆ ಅಪಾಯಕರವಾದಿ ಸಿದ್ಧಾಂತ ಎಂದು ಬೇರೆ ಹೇಳಬೇಕಾಗಿಲ್ಲ. ಆದ್ದರಿಂದ ಬಿಜೆಪಿ–ಆರೆಸ್ಸೆಸ್‌ನ ಕಣ್ಣೋಟದ ವಿರುದ್ಧ ಹೋರಾಟ ಮತ್ತು ಅರ್ಥಿಕ ಬೇಡಿಕೆಗಳ ಮೇಲಿನ ಹೋರಾಟ ಪರಸ್ಪರ ತಳಕು ಹಾಕಿಕೊಂಡಿವೆ.

ಸಪ್ಟಂಬರ್ 5 ರಂದು ಸಂಸತ್ತಿನ ಮುಂದೆ ನಡೆಯುವ ರೈತ–ಕಾರ್ಮಿಕ ಸಂಘರ್ಷ ರ್‍ಯಾಲಿ ಎಲ್ಲ ಶ್ರಮಜೀವಿಗಳ ಐಕ್ಯತೆಯನ್ನು ಉಳಿಸಿ ಬೆಳೆಸುವ ಮತ್ತು ಈ ಐಕ್ಯತೆಯನ್ನು ಛಿದ್ರಗೊಳಿಸ ಬಯಸುವವರನ್ನು ಸೋಲಿಸುವ ದೃಢ ನಿರ್ಧಾರವನ್ನು ವ್ಯಕ್ತಗೊಳಿಸಲಿದೆ.



ಕಾರ್ಮಿಕರು, ರೈತರು, ಕೃಷಿಕೂಲಿಕಾರರ ತಕ್ಷಣದ ಬೇಡಿಕೆಗಳು



1. ಬೆಲೆ ಏರಿಕೆ ತಡೆಗಟ್ಟಿ, ವಿತರಣಾ ವ್ಯವಸ್ಥೆಯನ್ನು ಸಾರ್ವತ್ರಿಕಗೊಳಿಸಿ. ಆವಶ್ಯಕ ಸಾಮಗ್ರಿಗಳಲ್ಲಿ ವಾಯಿದಾ ವ್ಯಾಪಾರವನ್ನು ನಿಷೇಧಿಸಿ.
2. ಘನತೆಯ ಉದ್ಯೋಗ ನಿರ್ಮಾಣಕ್ಕೆ ಮೂರ್ತ ಕ್ರಮಗಳನ್ನು ಜಾರಿಗೊಳಿಸಿ.
3. ಎಲ್ಲ ಕಾರ್ಮಿಕರಿಗೂ ರೂ.18 ಸಾವಿರಕ್ಕಿಂತ ಕಡಿಮೆಯಾಗದಂತೆ ಕನಿಷ್ಟ ವೇತನ ಘೋಷಿಸಿ.
4. ಕಾರ್ಮಿಕ ವಿರೋಧಿ ಕಾನೂನು ತಿದ್ದುಪಡಿಗಳ ಪ್ರಯತ್ನ ಕೈಬಿಡಿ.
5. ಡಾ: ಸ್ವಾಮಿನಾಥನ್ ಆಯೋಗದ ಶಿಫಾರಸ್ಸಿನಂತೆ ರೈತರ ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆ ನಿಗದಿಪಡಿಸಿ. ಮತ್ತು ಸಮಯಕ್ಕ ಸರಿಯಾಗಿ ಸಾರ್ವಜನಿಕ ಖರೀದಿ ನಡೆಸಿ.
6. ಬಡ ರೈತರ ಮತ್ತು ಕೃಷಿಕೂಲಿಕಾರರ ಸಾಲಗಳನ್ನು ಮನ್ನಾ ಜಾರಿಗೊಳಿಸಿ
7. ಕೃಷಿ ಕೂಲಿಕಾರರಿಗಾಗಿ ಸಮಗ್ರ ಕೇಂದ್ರೀಯ ಶಾಸನ ಜಾರಿಗೊಳಿಸಿ.
8. ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಯೋಜನೆಯನ್ನು ನುಲ್ಲ ಗ್ರಾಮೀಣ ಪ್ರದೇಶಗಳಲ್ಲಿ ಜಾರಿಗೊಳಿಸಿ ಮತ್ತು ನಗರ ಪ್ರದೇಶಗಳಿಗೂ ಅನ್ವಯವಾಗುವಂತೆ ಕಾಯ್ದೆ ತಿದ್ದುಪಡಿ ತನ್ನಿ.
9. ಎಲ್ಲರಿಗೂ ಆರೋಗ್ಯ, ಆಹಾರ, ಶಿಕ್ಷಣ ಮತ್ತು ವಸತಿ ಲಭ್ಯಗೊಳಿಸಿ
10. ಸಾರ್ವತ್ರಿಕ ಸಾಮಾಜಿಕ ಭದ್ರತೆ ಒದಗಿಸಿ.
11. ಗುತ್ತಿಗೆ ಕೆಲಸದ ಪದ್ಧತಿಯನ್ನು ರದ್ದುಗೊಳಿಸಿ, ಪುರುಷರಿಗೆ ಮತ್ತು ಮಹಿಳೆಯರಿಗೆ ಸಮಾನ ಕೆಲಸಕ್ಕೆ ಸಮಾನ ವೇತನ ಜಾರಿಗೊಳಿಸಿ.
12. ಮರುಹಂಚಿಕೆಯ ಭೂಸುಧಾರಣೆಗಳನ್ನು ಜಾರಿಗೊಳಿಸಿ
13. ರೈತರಿಂದ ಬಲಾತ್ಕಾರದ ಭೂಮಿ ಸ್ವಾಧೀನ ನಿಲ್ಲಿಸಿ,
14. ಪ್ರಾಕೃತಿಕ–ನೈಸರ್ಗಿಕ ವಿಕೋಪಗಳಿಗೆ ತುತ್ತಾದ ಜನರಿಗೆ ಪರಿಹಾರ ಮತ್ತು ಮರುವಸತಿ ಒದಗಿಸಿ.
15. ನವ ಉದಾರಿಕರಣ ನೀತಿಗಳನ್ನು ಕೈ ಬಿಡಿ.

ಈ ಬೇಡಿಕೆಗಳನ್ನು ಈಡೇರಿಸಲು ಖಂಡಿತಾ ಸಾಧ್ಯವಿದೆ.

ಆದರೆ ಹಿಂದೆ ಕಾಂಗ್ರೆಸ್ ನೇತೃತ್ವದ ಸರಕಾರಗಳು ಈಡೇರಿಸಲಿಲ್ಲ, ಈಗ ಮೋದಿ ನೇತೃತ್ವದ ಸರಕಾರ ಇವನ್ನು ಈಡೇರಿಸಲು ಸಿದ್ದವಾಗುವುದಿಲ್ಲ ಎನ್ನುತ್ತಾರೆ ರೈತ–ಕಾರ್ಮಿಕ ಸಂಘರ್ಷ ರ್‍ಯಾಲಿಯ ಸ್ವಾಗತ ಸಮಿತಿಯ ಅಧ್ಯಕ್ಷ ಪ್ರೊ. ಪ್ರಭಾತ್ ಪಟ್ನಾಯಕ್. ಏಕೆಂದರೆ ಇದಕ್ಕೆ ನವ–ಉದಾರವಾದದ ಹೇರಿಕೆಯನ್ನು ಎದುರಿಸುವ ರಾಜಕೀಯ ಇಚ್ಚಾಶಕ್ತಿ ಬೇಕಾಗುತ್ತದೆ. ನವ–ಉದಾರವಾದವನ್ನು ಹಿಂದಿನ ಎಲ್ಲ ಸರಕಾರಗಳಿಗಿಂತಲೂ ಹೆಚ್ಚು ರಭಸದಿಂದ ಅಪ್ಪಿಕೊಂಡಿರುವ ಮೋದಿ ಸರಕಾರಕ್ಕೆ ಈ ಇಚ್ಛಾಶಕ್ತಿ ಖಂಡಿತಾ ಇಲ್ಲ. ಆದರೆ ರೈತರ–ಕಾರ್ಮಿಕ ಹೋರಾಟಗಳು ಈ ಬೇಡಿಕೆಗಳನ್ನು ಸರಕಾರ ಪರಿಶೀಲಿಸುವಂತಹ ರಾಜಕಿಯ ಒತ್ತಡವನ್ನು ನಿರ್ಮಿಸಬೇಕಾಗುತ್ತದೆ. ಸಪ್ಟಂಬರ್ 5ರ ರ್‍ಯಾಲಿ ಈ ನಿಟ್ಟಿನಲ್ಲಿ ಒಂದು ಮಹತ್ವದ ಹೆಜ್ಜೆಯಾಗಲಿದೆ ಎಂದು ಪ್ರೊ. ಪಟ್ನಾಯಕ್ ಹೇಳುತ್ತಾರೆ.

ಚುನಾವಣಾ ಸುಧಾರಣೆಗಳಿಗೆ ಸಿಪಿಐ(ಎಂ) ಟಿಪ್ಪಣಿಯ ಆಯ್ದ ಭಾಗಗಳು.......... ಪುಟ 8 ರಿಂದ

3. ಭಾಗಶಃ ಆನುಪಾತಿಕ ಪ್ರಾತಿನಿಧ್ಯ (Partial Proportional Representation)

ಈಗಿರುವ First-Past-The-Post (FPTP- ಅಂದರೆ ಸ್ಪರ್ಧೆಯ ಅಂತಿಮ ರೇಖೆಯನ್ನು ದಾಟುವ ಮೊದಲಿಗರು) ಪದ್ಧತಿಯಲ್ಲಿ ಮತಗಳಿಕೆ ಮತ್ತು ಸೀಟುಗಳಿಕೆಯಲ್ಲಿ ಅಸಾಂಗತ್ಯವಿರಲು ಸಾಧ್ಯವಿದೆ. 2014 ರ ಲೋಕಸಭಾ ಚುನಾವಣೆಯಲ್ಲಿ ಆದಂತೆ ಹಿಂದೆಂದೂ ಕೇವಲ ಪ್ರತಿಶತ 31 ರಷ್ಟು ಮತಗಳನ್ನು ಪಡೆದು ಯಾವುದೇ ಪಕ್ಷ ಲೋಕಸಭೆಯ ಅರ್ಧಕ್ಕಿಂತಲೂ ಹೆಚ್ಚು ಸ್ಥಾನಗಳನ್ನು ಗೆದ್ದಿರಲಿಲ್ಲ. ಕಾಂಗ್ರೆಸ್ ಶೇ. 19.3 ರಷ್ಟು ಮತಗಳನ್ನು ಗಳಿಸಿ 44 ಸೀಟುಗಳನ್ನು ಪಡೆದಿದೆ. ಆದರೆ 2009ರಲ್ಲಿ ಬಿಜೆಪಿ ಶೇ. 18.5 ರಷ್ಟು ಮತಗಳನ್ನು ಪಡೆದು 116 ಸೀಟುಗಳನ್ನು ಗಳಿಸಿತ್ತು. ಉತ್ತರ ಪ್ರದೇಶದಲ್ಲಿ ಬಿಎಸ್‌ಪಿ ಶೇ. 20 ರಷ್ಟು ಮತಗಳಿಸಿದ್ದರೂ ಒಂದೂ ಸೀಟು ಸಿಕ್ಕಿಲ್ಲ. ತಮಿಳುನಾಡಿನಲ್ಲಿ ಡಿಎಂಕೆ ಮತ್ತು ಅದರ ಮಿತ್ರಪಕ್ಷಗಳು ಶೇ. 27 ರಷ್ಟು ಮತಗಳಿಸಿದ್ದರೂ ಒಂದೂ ಸೀಟು ಗೆದ್ದಿಲ್ಲ.

ಆನುಪಾತಿಕ ಪ್ರಾತಿನಿಧ್ಯ ವ್ಯವಸ್ಥೆ ಚುನಾವಣಾ ಫಲಿತಾಂಶದಲ್ಲಿ ಮತಗಳಿಕೆ ಮತ್ತು ಗೆದ್ದ ಸೀಟುಗಳ ನಡುವೆ ಸಾಧ್ಯವಾದಷ್ಟೂ ಅನುಪಾತ ಇರುವಂತೆ ಮಾಡುತ್ತದೆ. ಈಗಿರುವ ಈಕಖಿಕ ಪದ್ಧತಿಯ ಕೊರತೆಗಳು ಮತ್ತು ದೌರ್ಬಲ್ಯಗಳಿಗೆ ಒಂದು ಪರಿಹಾರ ಕಂಡುಕೊಳ್ಳುವಲ್ಲಿ ಭಾರತದ ಚುನಾವಣಾ ವ್ಯವಸ್ಥೆಯನ್ನು ಈಕಖಿಕ ವ್ಯವಸ್ಥೆ ಹಾಗೂ ಆನುಪಾತಿಕ ಪ್ರಾತಿನಿಧ್ಯವನ್ನು ಜೋಡಿಸಿದ ಒಂದು ಸಮ್ಮಿಶ್ರ ಪದ್ಧತಿಗೆ ಬದಲಾಯಿಸಬೇಕಾಗಿದೆ.

ಕಾನೂನು ಆಯೋಗವು ಮಾಡಿರುವ ಶಿಫಾರಸುಗಳಲ್ಲಿ ಒಂದು ಈಗಿರುವ ಲೋಕಸಭೆಯ 543 ಸೀಟುಗಳನ್ನು ನೇರ ಚುನಾವಣೆಯ ಮೂಲಕ ತುಂಬುವುದನ್ನು ಮುಂದುವರಿಸಬಹುದು ಮತ್ತು ಲೋಕಸಭೆಯ ಸ್ಥಾನಗಳನ್ನು ಶೇ. 25 ರಷ್ಟು ಹೆಚ್ಚು ಮಾಡಿ, ಆ 136 ಸ್ಥಾನಗಳನ್ನು ಪಟ್ಟಿ ಪದ್ಧತಿಯನ್ನು ಅನುಸರಿಸಿ ಆನುಪಾತಿಕ ಪ್ರಾತಿನಿಧ್ಯದಿಂದ ತುಂಬಬಹುದು ಎಂದು ಸೂಚಿಸಿದೆ. ಇಂತಹುದೇ ವಿಸ್ತರಣೆಯನ್ನು ವಿಧಾನಸಭೆಗಳಿಗೂ ಕೂಡ ಮಾಡಬಹುದು. ಮೊದಲನೇ ಹಂತದಲ್ಲಿ ಇದನ್ನು ಪ್ರಯತ್ನಿಸಿ, ನಂತರ ಆನುಪಾತಿಕ ಪ್ರಾತಿನಿಧ್ಯದ ಪದ್ಧತಿಯಲ್ಲಿನ ಸೀಟುಗಳ ಪಾಲನ್ನು ವಿಸ್ತರಿಸಬಹುದು.

5. ಚುನಾವಣಾ ಆಯೋಗಕ್ಕೆ ಸುಧಾರಣೆಗಳು

ಚುನಾವಣಾ ಆಯೋಗದ ಸ್ವಾತಂತ್ರ್ಯ ಮತ್ತು ಸ್ವಾಯತ್ತತೆ ಅದನ್ನು ಸ್ವತಂತ್ರ ಸಂವಿಧಾನಿಕ ಸಂಸ್ಥೆಯಾಗಿ ಅದರ ಪಾತ್ರವನ್ನು ಬಲಪಡಿಸುವಲ್ಲಿ ಬಹಳ ಮಹತ್ವದ್ದಾಗಿದೆ. ಆದರೆ ಸೂಕ್ತ ತಪಾಸಣೆ ಇಲ್ಲದಿದ್ದಲ್ಲಿ ಅದು ಅಸಮತೋಲನೆಗೆ ದಾರಿ ಮಾಡಿಕೊಡಬಹುದು. ಆದ್ದರಿಂದ ಒಟ್ಟು ಮತದಾರರಿಗೆ, ಈ ದೇಶದ ಜನತೆಗೆ ಉತ್ತರದಾಯಿತ್ವ ಒಂದು ಅಗತ್ಯ ಪೂರ್ವಶರತ್ತಾಗಿದೆ.

ಇದಕ್ಕಾಗಿ ಕೆಲವು ಸಾಂಸ್ಥಿಕ ಬದಲಾವಣೆಗಳ ಅವಶ್ಯಕತೆ ಇದೆ. ಇದರಲ್ಲಿ ಮೊದಲನೆಯ ವಿಷಯ ಆಯುಕ್ತರ ನೇಮಕಾತಿ. ಕಾರ್ಯಾಂಗದ ಜೊತೆಗೆ ಶಾಸಕಾಂಗ ಮತ್ತು ನ್ಯಾಯಾಂಗಗಳನ್ನು ಒಳಗೊಳ್ಳುವುದರ ಮೂಲಕ ಆಯ್ಕೆ ಪ್ರಕ್ರಿಯೆಯಲ್ಲಿ ಕಾರ್ಯಾಂಗವೇ ಹೆಚ್ಚಿನ ಅಧಿಕಾರ ಹೊಂದುವುದನ್ನು ನಿಯಂತ್ರಿಸುವುದು. ಎರಡನೆಯದಾಗಿ, ಈ ಆಯುಕ್ತರೆಲ್ಲರೂ ಸಾಮಾನ್ಯವಾಗಿ ಹಿಂದಿನ ಅಧಿಕಾರಶಾಹಿಗಳೇ ಆಗಿರುವುದರಿಂದ ಈ ನೇಮಕಾತಿಗಳನ್ನು ನಿವೃತ್ತಿಯ ನಂತರದ ಸೌಲಭ್ಯವೆಂದು ಕಾಣಲಾಗುತ್ತೆಯಾದ್ದರಿಂದ ಅವರು ಕಾರ್ಯಾಂಗದ ಪ್ರಭಾವಕ್ಕೆ ಒಳಗಾಗುವ ಸಂಭವವಿರುತ್ತದೆ. ಮೂರನೆಯದಾಗಿ ಅಧಿಕಾರಿಗಳ ಮೇಲೆ ಚುನಾವಣಾ ಆಯೋಗದ ಸ್ವಾತಂತ್ರ್ಯ ನಿಗದಿತ ಚುನಾವಣಾ ಅವಧಿಗಷ್ಟೇ ಸೀಮಿತವಾಗಿರುತ್ತದೆ. ಚುನಾವಣಾ ನಂತರದ ಮುಯ್ಯಿಗಳಿಂದ ಅವರಿಗೆ ರಕ್ಷಣೆಯಿರುವುದಿಲ್ಲ. ಈ ಪ್ರಶ್ನೆಯನ್ನು ಕೂಡ ಪರಿಶೀಲಿಸಬೇಕಾಗಿದೆ.

7. ಮತದಾನದ ಪದ್ಧತಿ ಮತ್ತು ತಂತ್ರಜ್ಞಾನದ ಆಯ್ಕೆ

ಇಲೆಕ್ಟ್ರಾನಿಕ್ ಮತದಾನ ಯಂತ್ರ(ಇವಿಎಂ)ಗಳ ಬಳಕೆಯ ಬಗ್ಗೆ ಮತ್ತು ಈಗ ವಿವಿಪಿಎಟಿಗಳೊಂದಿಗೆ ಬಳಕೆಯ ಮೇಲೆ ಬಿಸಿ–ಬಿಸಿ ಚರ್ಚೆ ನಡೆದಿದೆ. ನಾವು ಈ ಹಿಂದೆ ಇವಿಎಂಗಳನ್ನು ಬೆಂಬಲಿಸಿದ್ದೆವು, ಮತ್ತು ಸಾರ್ವಜನಿಕ ಅಭಿಪ್ರಾಯದಲ್ಲಿ ಹೆಚ್ಚುತ್ತಿರುವ ಅನುಮಾನಗಳಿಂದಾಗಿ ವಿವಿಪಿಎಟಿ ಯಂತ್ರಗಳನ್ನು ಬಳಸಬೇಕು ಎಂದು ಕೇಳಿದೆವು. ಇವಿಎಂಗಳ ಬಳಕೆಯಲ್ಲಿ ದೊಡ್ಡ ಪ್ರಮಾಣದ ಅಕ್ರಮಗಳಾಗಬಹುದೆಂದು ನಿರ್ದಿಷ್ಟವಾಗಿ ತೋರಿಸುವ ತಾಂತ್ರಿಕ ಆಧಾರ ಇಲ್ಲವಾದರೂ, ಕನಿಷ್ಠ ಶೇ.10 ರಷ್ಟು ಮತಗಟ್ಟೆಗಳಲ್ಲಿ ವಿವಿಪಿಎಟಿ ಗಣನೆಗಳನ್ನು ಇವಿಎಂ ದಾಖಲೆಗಳೊಂದಿಗೆ ತಾಳೆ ಮಾಡಬೇಕೆಂಬ ನಮ್ಮ ಸೂಚನೆಯನ್ನು ಚುನಾವಣಾ ಆಯೋಗವು ಈ ಹಿಂದೆ ಒಪ್ಪಿತ್ತು. ಆದರೆ ವಾಸ್ತವವಾಗಿ ಇದನ್ನು ಇನ್ನೂ ಜಾರಿಮಾಡಿಲ್ಲ. ಇದಲ್ಲದೆ ಸಾಕಷ್ಟು ದೊಡ್ಡ ಸಂಖ್ಯೆಯಲ್ಲಿ ತಾಂತ್ರಿಕ ವಿಫಲತೆಗಳು ಚುನಾವಣಾ ಕಣದಲ್ಲಿ ಕಂಡುಬಂದಿರುವುದು ವರದಿಯಾಗಿವೆ. ಇದರಿಂದಾಗಿ ಛಿದ್ರಕಾರಿ ಪರಿಣಾಮ ಉಂಟಾಗಿರುವುದು ಸ್ವಯಂವೇದ್ಯ. ಇವಿಎಂ ಮತ್ತು ವಿವಿಪಿಎಟಿ ಯಂತ್ರಗಳನ್ನು ಜತೆಗೂಡಿಸುವಲ್ಲಿ ತಾಂತ್ರಿಕ ಸಮಸ್ಯೆಗಳು ಇವೆ ಎಂಬುದನ್ನು ಸ್ವಲ್ಪ ಮಟ್ಟಿಗೆ ಅಧಿಕೃತವಾಗಿ ಒಪ್ಪಲಾಗಿದೆ. ಇವಿಎಂ ಮತ್ತು ವಿವಿಪಿಎಟಿ ನಿರ್ವಹಣೆಯಲ್ಲಿ ನಿರಾಕರಿಸಲಾಗದ ಸುರಕ್ಷತಾ ವ್ಯವಸ್ಥೆಗಳನ್ನು ಜಾರಿಗೆ ತರಬೇಕು ಮತ್ತು ಇವುಗಳ ರಚನೆ, ತಯಾರಿಕೆ, ಅವುಗಳ ನಿರ್ವಹಣೆ ಮತ್ತು ದುರಸ್ತಿ ಚಟುವಟಿಕೆಗಳಲ್ಲಿ ಖಾಸಗೀ ಮಾರಾಟಗಾರರನ್ನು ತೆಗೆದುಹಾಕಲು ಮಾರ್ಗಸೂಚಿಗಳನ್ನು ಪುನರ್‌ರೂಪಿಸಲು ಸರ್ವಪಕ್ಷ ಸಮಾಲೋಚನೆಯನ್ನು ಚುನಾವಣಾ ಆಯೋಗವು ಆರಂಭಿಸಬೇಕಾದ ಅವಶ್ಯಕತೆ ಇದೆ.

ಏಕಕಾಲಕ್ಕೆ ಚುನಾವಣೆಗಳನ್ನು ನಡೆಸುವ ಪ್ರಸ್ತಾವ..... ಪುಟ 8 ರಿಂದ

ಪ್ರಬಂಧದಲ್ಲೂ ಮತ್ತಿತರ ಕಡೆಗಳಲ್ಲೂ ಕೊಟ್ಟಿರುವ ಒಂದು ಸೂಚನೆಯೆಂದರೆ, ಒಂದು ಅವಿಶ್ವಾಸ ಗೊತ್ತುವಳಿಯನ್ನು ಮಂಡಿಸುವುದಾದರೆ, ಅದರ ಜೊತೆಗೆ ಹೊಸ ನಾಯಕನನ್ನು ಆರಿಸುವ ಗೊತ್ತುವಳಿಯೂ ಇರಬೇಕು ಎನ್ನುವುದು. ಇದರ ಅರ್ಥ ಸರಕಾರವನ್ನು ಇಳಿಸುವ ಶಾಸಕರ ಅಧಿಕಾರವನ್ನು ನಿರ್ಬಂಧಿಸುವುದು ಮತ್ತು ಅದನ್ನು ಹೊಸ ನಾಯಕನ ಆಯ್ಕೆಯ ಶರತ್ತಿಗೆ ಒಳಪಡಿಸುವುದು.

ಸರ್ಕಾರವನ್ನು ಮತದಾನದ ಮೂಲಕ ಇಳಿಸುವ ಚುನಾಯಿತ ಶಾಸಕರು ಮತ್ತು ಲೋಕಸಭಾ ಸದಸ್ಯರ ಹಕ್ಕನ್ನು ನಿರ್ಬಂಧಿಸಲೂ ಸಾಧ್ಯವಿಲ್ಲ, ಅಥವ ಒಂದು ಸ್ಥಿರ ಬಹುಮತವನ್ನು ಹೊಂದಿರುವ ಆಳುವ ಪಕ್ಷವು ಸದನವನ್ನು ವಿಸರ್ಜಿಸುವ ಹಕ್ಕನ್ನು ಮೊಟಕುಗೊಳಿಸುವುದೂ ಸಾಧ್ಯವಿಲ್ಲ.

ಏಕಕಾಲಕ್ಕೆ ಚುನಾವಣೆಗಳ ಹೆಸರಿನಲ್ಲಿ ಬಂದಿರುವ ಎಲ್ಲಾ ಸೂಚನೆಗಳೂ ರಾಜ್ಯಪಾಲರ ಮತ್ತು ಕೇಂದ್ರದ ಹಸ್ತಕ್ಷೇಪದ ಅವಕಾಶಗಳನ್ನು ಹೆಚ್ಚಿಸುತ್ತವೆ.

ಲೋಕಸಭೆ ಮತ್ತು ವಿಧಾನಸಭೆಗಳಿಗೆ ಏಕಕಾಲಕ್ಕೆ ಚುನಾವಣೆ ನಡೆಸುವುದು ಸರ್ಕಾರವು ಶಾಸನ ಸಭೆಗೆ ಉತ್ತರದಾಯಿತ್ವವನ್ನು ಹೊಂದಿರುವ ಸಾಂವಿಧಾನಿಕ ಯೋಜನೆಯನ್ನು ನಾಶಗೊಳಿಸುವುದಾಗಿದೆ.

4. ರಾಜಕೀಯ ಪಕ್ಷಗಳಲ್ಲಿ ಆಂತರಿಕ ಪ್ರಜಾಪ್ರಭುತ್ವ

ರಾಜಕೀಯ ಪಕ್ಷಗಳ ಆಂತರಿಕ ಪ್ರಜಾಪ್ರಭುತ್ವದ ನಿಯಂತ್ರಣಕ್ಕೆ ಏಕೈಕ ಅಂಶ ಎಂದರೆ ಜನತಾ ಪ್ರಾತಿನಿಧ್ಯ ಕಾಯಿದೆಯ ಸೆಕ್ಷನ್ 29 ಎ. ಇದು ರಾಜಕೀಯ ಪಕ್ಷಗಳು ಚುನಾವಣಾ ಆಯೋಗದಲ್ಲಿ ನೊಂದಣಿ ಮಾಡಲು ಸೂಚಿಸುತ್ತದೆ. ಈ ನೊಂದಣಿಗೆ ಬೇಕಾದ ನಿರ್ದೇಶನಗಳು ಅಭ್ಯರ್ಥಿಗಳ ಆಯ್ಕೆಯ ಬಗ್ಗೆ ಮೌನವಾಗಿವೆ.

ನಿಧಿ ನಿಯೋಜನೆಯ ವಿಷಯದಲ್ಲಿ ರಾಜಕೀಯ ಪಕ್ಷಗಳ ಉತ್ತರದಾಯಿತ್ವ ಮತ್ತು ಪಾರದರ್ಶಕತೆ ರಾಜಕೀಯ ವ್ಯವಸ್ಥೆಯನ್ನು ಸ್ವಚ್ಛಗೊಳಿಸಲು ಮತ್ತು ಜನತೆಯ ನಂಬಿಕೆಯನ್ನು ಪುನಃ ಸ್ಥಾಪಿಸುವಲ್ಲಿ ಪ್ರರಮ ಮಹತ್ವದ್ದಾಗಿದೆ. ಈ ಸಂದರ್ಭದಲ್ಲಿ ಅಭ್ಯರ್ಥಿಯ/ಪತ್ನಿಯ ಮತ್ತು ಅವಲಂಬಿತ ಮಕ್ಕಳ ಆಸ್ತಿ ಮಾಹಿತಿಗಳು ಕೂಡ ಸಾರ್ವಜನಿಕವಾಗಿ ಲಭ್ಯವಿರಬೇಕಾಗುತ್ತದೆ..

ಚುನಾವಣಾ ಆಯೋಗವು ಒಂದು ರಾಜಕೀಯ ಪಕ್ಷದ ನೋಂದಣಿಯನ್ನು ಅದು ಅದನ್ನು ಮೋಸದಿಂದ ಪಡೆದಿದ್ದರೆ ಅಥವಾ ಪಕ್ಷವು ತನ್ನ ಆಂತರಿಕ ಸಂವಿಧಾನವನ್ನು ತಿದ್ದುಪಡಿ ಮಾಡಿ ಇನ್ನು ಮುಂದೆ ತನಗೆ ಭಾರತದ ಸಂವಿಧಾನವನ್ನು ಪಾಲಿಸುವುದು ಸಾಧ್ಯವಿಲ್ಲವೆಂದು ಚುನಾವಣಾ ಆಯೋಗಕ್ಕೆ ಅಧಿಸೂಚನೆ ನೀಡಿದರೆ ಮಾತ್ರವೇ ರದ್ದು ಪಡಿಸಬಹುದಾಗಿದೆ. ಆದ್ದರಿಂದ ಜನತಾ ಪ್ರಾತಿನಿಧ್ಯ ಕಾಯಿದೆಗೆ ಸೂಕ್ತ ತಿದ್ದುಪಡಿ ಮಾಡುವ ಮೂಲಕ ಹತ್ತು ವರ್ಷಗಳ ಅವಧಿಯಲ್ಲಿ ಚುನಾವಣೆಯಲ್ಲಿ ಸ್ಪರ್ಧೆ ಮಾಡದೇ ಇರುವ ರಾಜಕೀಯ ಪಕ್ಷದ ನೊಂದಣಿ ರದ್ದು ಪಡಿಸುವ ಅಧಿಕಾರವನ್ನು ಚುನಾವಣಾ ಆಯೋಗಕ್ಕೆ ನೀಡಬೇಕು.

ರಾಜಕೀಯ ಪಕ್ಷಗಳಲ್ಲಿ ಆಂತರಿಕ ಪ್ರಜಾಪ್ರಭುತ್ವವನ್ನು ಹಾಗೂ ಪಾರದರ್ಶಕತೆಯನ್ನು ತರುವುದು ಮಹತ್ವದ್ದಾಗಿದೆ. ಆದರೆ ಯಾವುದೇ ಪ್ರಾಧಿಕಾರ ಪಕ್ಷಗಳ ನಿರ್ವಹಣೆ ಮತ್ತು ಸಿದ್ಧಾಂತದಲ್ಲಿ ಹಸ್ತಕ್ಷೇಪ ಮಾಡಬಾರದು. ಈ ಬಗ್ಗೆ ಕಾನೂನು ಆಯೋಗದ ಸಂಬಂಧಪಟ್ಟ ಶಿಫಾರಸುಗಳನ್ನು ಸ್ಥೂಲ ಮಾರ್ಗನಿರ್ದೇಶನಗಳಾಗಿ ಜಾರಿಗೆ ಪ್ರಯತ್ನಿಸಬಹುದಾಗಿದೆ.

6. ಮಾಧ್ಯಮಗಳ ಪಾತ್ರ ಮತ್ತು ಸಮಾನ ಅವಕಾಶಗಳ ಮೇಲೆ ಅವುಗಳ ಪ್ರಭಾವ

ಮಾಧ್ಯಮಗಳ ಮಾಲೀಕತ್ವವು ಕೆಲವು ಕೂಟಗಳ, ಕೆಲವೇ ಜನಗಳ ಕೈಗಳಲ್ಲಿ ಇದ್ದರೆ ಅದು ಅಧಿಕಾರದಲ್ಲಿರುವ ಪಕ್ಷಗಳಿಗೆ ಪ್ರಯೋಜನಕ್ಕೆ ಕಾರಣವಾಗುತ್ತದೆ ಎಂಬ ಸಂಗತಿ ಭಾರತದಲ್ಲಿ ಕಾಣ ಬರುತ್ತಿದೆ. ಇದು ಮುಕ್ತ ಮತ್ತು ನ್ಯಾಯಯುತ ಚುನಾವಣೆ ನಡೆಸುವಲ್ಲಿ ಪ್ರತಿಕೂಲ ಪರಿಣಾಮವನ್ನು ಉಂಟುಮಾಡುತ್ತದೆ. ರಾಜಕೀಯ ಪಕ್ಷಗಳ ಮತ್ತು ಅಭ್ಯರ್ಥಿಗಳ ಮೇಲೆ ದೋಷಾರೋಪಣೆ ಮಾಡಿ ಅವರ ಬೇಟೆಯಾಡುವ, ಚಾರಿತ್ರ್ಯವಧೆ ಮಾಡುವ ಉದಾಹರಣೆಗಳೂ ಇವೆ. ಈ ಕ್ಷೇತ್ರದಲ್ಲಿ ಸೂಕ್ತ ನಿಯಂತ್ರಣ ವ್ಯವಸ್ಥೆಯ ಅವಶ್ಯಕತೆ ಇದೆ.

ಚುನಾವಣೆಗಳ ಸಮಯದಲ್ಲಿ ಖಾಸಗೀ ಒಡೆತನದ ಮುದ್ರಣ ಮತ್ತು ಎಲೆಕ್ಟ್ರಾನಿಕ್ ಮಾಧ್ಯಮಗಳಲ್ಲಿ ರಾಜಕೀಯ ಪಕ್ಷಗಳಿಗೆ ಹಾಗೂ ಅಭ್ಯರ್ಥಿಗಳಿಗೆ ಸಮಯ ನೀಡಲು ಸೂಕ್ತ ವ್ಯವಸ್ಥೆ ಆಗಬೇಕಾಗಿದೆ.

ಇತ್ತೀಚಿನ ವಿದ್ಯಮಾನವಾದ ಸುದ್ದಿಗಾಗಿ ಹಣ ತೆರುವುದು ಮುಕ್ತ ಮತ್ತು ನ್ಯಾಯಯುತ ಚುನಾವಣೆಗೆ ಅಡ್ಡಿಯಾಗುವ ಆಚರಣೆ. ಇದು ಮತದಾರರ ತಿಳಿದುಕೊಳ್ಳುವ ಹಕ್ಕನ್ನು ಭಾಧಿಸುತ್ತದೆ ಮತ್ತು ಚುನಾವಣೆಗಳನ್ನು ಹಣಬಲ ಹೊಂದಿರುವವರ ಕಡೆಗೆ ವಾಲಿಸುತ್ತದೆ. ಸುದ್ದಿಗಾಗಿ ಹಣ ನೀಡುವುದನ್ನು ಹಾಗೂ ಸುದ್ದಿ ಪ್ರಸಾರಕ್ಕಾಗಿ ಹಣ ಪಡೆಯುವುದನ್ನು ಚುನಾವಣಾ ಅಪರಾಧವಾಗಿ ಪರಿಗಣಿಸಿ ಶಿಕ್ಷಾರ್ಹಗೊಳಿಸಬೇಕು ಮತ್ತು ಚುನಾವಣಾ ಜಾಹೀರಾತುಗಳನ್ನು ನಿಯಂತ್ರಿಸಬೇಕು. ಅವು ಕೇವಲ ಜಾಹೀರಾತುಗಳು ಎಂಬ ಹೇಳಿಕೆಯನ್ನು ಅವುಗಳಿಗೆ ಕಡ್ಡಾಯಗೊಳಿಸಬೇಕು. ಇಂತಹ ನಿಯಂತ್ರಣದ ಉದ್ದೇಶವೆಂದರೆ ರಾಜಕೀಯ ಜಾಹೀರಾತುಗಳು ಹಣ ಕೊಟ್ಟು ಪ್ರಕಟಿಸಿದಂತವುಗಳು, ಸುದ್ದಿಗಳೆಂದು ಪ್ರಸಾರ ಮಾಡಿದಂತವುಗಳು ಅಲ್ಲ ಎಂದು ಸ್ಪಷ್ಟವಾಗಿ ತಿಳಿಯುವಂತಾಗುವುದು.

ಮಾಧ್ಯಮಗಳ ಅಡ್ಡ ಮಾಲಿಕತ್ವವು ಒಂದು ಚೈತನ್ಯಶೀಲ ಪ್ರಜಾಪ್ರಭುತ್ವ ರಾಜಕೀಯ ವ್ಯವಸ್ಥೆಗೆ ಬೆದರಿಕೆಯಾಗಿದೆ. ಇದು ಭಾರತದಲ್ಲಿ ಆಗುತ್ತಿದೆ. ಮಾಧ್ಯಮಗಳ ಮಾಲೀಕತ್ವ ಕೆಲವೇ ಜನಗಳ ಕೈಗಳಲ್ಲಿರುವ ಮಾರುಕಟ್ಟೆಯಲ್ಲಿ ಹೆಚ್ಚೆಚ್ಚು ಕೇಂದ್ರೀಕೃತವಾಗುತ್ತಿರುವುದು ವೈವಿಧ್ಯತೆ ಮತ್ತು ಬಹುತ್ವದ ನಾಶಕ್ಕೆ ಕಾರಣವಾಗದಂತೆ ಮಾಡುವುದು ವಸ್ತು ನಿಷ್ಟವಾದ, ಪೂರ್ವಗ್ರಹ ಪೀಡಿತವಲ್ಲದ, ವೈವಿಧ್ಯ ಪೂರ್ಣ ಅಭಿಪ್ರಾಯಗಳನ್ನು ಪಡೆಯುವ ನಾಗರಿಕರ ಹಕ್ಕನ್ನು ರಕ್ಷಿಸಲು ಸೂಕ್ತ ಸುರಕ್ಷತಾ ಕ್ರಮಗಳು ಅಗತ್ಯವಾಗಿವೆ..

ಸರ್ಕಾರಿ ಹಾಗೂ ಖಾಸಗೀ ಮಾಧ್ಯಮಗಳೆರಡಕ್ಕೂ ಅನ್ವಯವಾಗುವ ಸಾಮಾನ್ಯ ಮಾರ್ಗಸೂಚಿ ನಿರ್ದೇಶನಗಳನ್ನು ಚುನಾವಣಾ ಆಯೋಗವು ನೀಡಬಹುದಾಗಿದೆ. ದೂರದರ್ಶನ ಮತ್ತು ಆಕಾಶವಾಣಿಗಳು ಕೂಡ ಆಡಳಿತದಲ್ಲಿರುವ ರಾಜಕೀಯ ಪಕ್ಷಗಳ ಪಕ್ಷಪಾತಿಯಾಗಿ ಸುದ್ದಿ ಮತ್ತು ಅಭಿಪ್ರಾಯಗಳನ್ನು ನೀಡುತ್ತವೆ. ಹೀಗಾಗಿ ಸರ್ಕಾರಿ, ಖಾಸಗೀ ಮತ್ತು ಸಾಮಾಜಿಕ ಮಾಧ್ಯಮಗಳೆಲ್ಲವುಗಳಿಗೆ ಅನ್ವಯವಾಗುವಂತಹ ಮಾರ್ಗದರ್ಶಿ ನಿರ್ದೇಶನಗಳನ್ನು ನೀಡಬೇಕು. ಇಂತಹ ಮಾರ್ಗಸೂಚಿಗಳನ್ನು ಚುನಾವಣಾ ಆಯೋಗವು ರಾಜಕೀಯ ಪಕ್ಷಗಳೊಂದಿಗೆ ಸಮಾಲೋಚಿಸಿ ರೂಪಿಸಬೇಕು.

ಪ್ರೆಸ್ ಕೌನ್ಸಿಲ್ ಆಫ್ ಇಂಡಿಯಾದ ಮಾದರಿಯಲ್ಲಿ ಒಂದು ಸ್ವತಂತ್ರವಾದ ಪ್ರಸಾರ ನಿಯಂತ್ರಣ ವ್ಯವಸ್ಥೆಯನ್ನು ರಚಿಸುವುದು, ಈಗ ಮೂಡಿಬರುತ್ತಿರುವ ಸನ್ನಿವೇಶದಲ್ಲಿ ತೀರಾ ಅವಶ್ಯಕವಾಗಿದೆ.


ನಿಧಿ ನಿಯೋಜನೆ (ಫಂಡಿಂಗ್)..... ಪುಟ 8 ರಿಂದ

ಮೂಲಕ ಚುನಾವಣಾ ಬಾಂಡ್‌ಗಳ ಮೂಲಕ ದೊಡ್ಡ ಪ್ರಮಾಣದಲ್ಲಿ ದೇಣಿಗೆಗಳನ್ನು ಪಡೆದು ವಿವರಗಳನ್ನು ಅನಾಮಧೇಯ ಮತ್ತು ಗುಪ್ತವಾಗಿರಿಸಲು ಅವಕಾಶ ನೀಡುವ ಹೊಸ ಮಾರ್ಗವನ್ನು ದೊರಕಿಸಿ ಕೊಡಲಾಗಿದೆ. ಈ ಮೂಲಕ ರಾಜಕೀಯ ಭ್ರಷ್ಟಾಚಾರವನ್ನು ಕಾನೂನುಬದ್ಧಗೊಳಿಸಿದಂತಾಗುತ್ತದೆ. ಎಲ್ಲಾ ರಾಜಕೀಯ ಪಕ್ಷಗಳಿಗೆ ಮತ್ತು ಅಭ್ಯರ್ಥಿಗಳಿಗೆ, ಕಾರ್ಪೋರೇಟ್ ಸಂಸ್ಥೆಗಳು ದೇಣಿಗೆ ನೀಡುವುದನ್ನು ಸಂಪೂರ್ಣವಾಗಿ ನಿಷೇಧಿಸಬೇಕು. ಒಂದು ವೇಳೆ ಕಾರ್ಪೋರೇಟ್‌ಗಳು ನಿಧಿ ನೀಡಬೇಕೆಂದಿದ್ದರೆ, ಭಾರತೀಯ ಚುನಾವಣಾ ಆಯೋಗದ ಮೇಲ್ವಿಚಾರಣೆಯ ಒಂದು ನಿಧಿಗೆ ಅವು ದೇಣಿಗೆ ನೀಡಬಹುದು, ಈ ನಿಧಿಯಿಂದ ಚುನಾವಣೆಗಳಲ್ಲಿ ಪಕ್ಷಗಳಿಗೆ ಸಾರ್ವಜನಿಕ ಹಣಕಾಸು ಒದಗಿಸಬಹುದು.

ಈ ಮೊದಲು, ಕೇಂದ್ರದ ಬಜೆಟ್‌ನಲ್ಲಿ ವಿದೇಶೀ ದೇಣಿಗೆ ನಿಯಂತ್ರಣ ಕಾಯಿದೆಗೆ (Foreign Contribution Regulation Act) ಗೆ ತಿದ್ದುಪಡಿಯನ್ನು ಹಣಕಾಸು ಮಸೂದೆ (Finance Bill) ಯ ಮೂಲಕ ಮಾಡಲಾಯಿತು. ಇದರಿಂದ ವಿದೇಶಿ ಕಂಪನಿಗಳ ಭಾರತೀಯ ಉಪಸಂಸ್ಥೆಗಳು ನೀಡುವ ವಂತಿಗೆಯನ್ನು ಭಾರತೀಯ ಮೂಲದ್ದಾಗಿ ಪರಿಗಣಿಸಲು ಸಾಧ್ಯವಾಗುತ್ತದೆ. ಇದಲ್ಲದೆ ಇತ್ತೀಚಿನ ಕ್ರಮಗಳ ಪ್ರಕಾರ ಬಹುರಾಷ್ಟ್ರೀಯ ಕಂಪನಿಗಳೂ ಕೂಡ ಚುನಾವಣಾ ಬಾಂಡ್‌ಗಳ ಮೂಲಕ ರಾಜಕೀಯ ಪಕ್ಷಗಳಿಗೆ ದೇಣಿಗೆ ನೀಡಬಹುದಾಗಿದ್ದು ಈ ಎಲ್ಲ ವಂತಿಗೆಗಳನ್ನು ಸಾರ್ವಜನಿಕ ಪರಿವೀಕ್ಷಣೆಯಿಂದ ಹೊರಗಿಡಲಾಗಿದೆ. ಇದು ಈ ದೇಶದ ಪ್ರಜಾಸತ್ತಾತ್ಮಕ ರಾಜಕೀಯ ವ್ಯವಸ್ಥೆ ಮತ್ತು ಸಾರ್ವಭೌಮತೆಯ ಮೇಲೆ ಗಂಭೀರ ಪರಿಣಾಮ ಬೀರಲಿದೆ.

ಇತ್ತೀಚಿನ ತಿದ್ದುಪಡಿಗಳು ಹಣಬಲದ ಪಾತ್ರವನ್ನು ಕಾರ್ಪೋರೇಟ್ ಪರ ನೀತಿಗಳನ್ನು ಬೆಂಬಲಿಸುವ ಪಕ್ಷಗಳು ಮತ್ತು ಅಭ್ಯರ್ಥಿಗಳಿಗೆ ಅನುಕೂಲಕರವಾಗಿಸುವ ರೀತಿಯಲ್ಲಿ ಹೆಚ್ಚಿಸುತ್ತವೆ. ಈ ತಿದ್ದುಪಡಿಗಳು ದೇಶದ ಆರ್ಥಿಕತೆಯಷ್ಟೇ ಅಲ್ಲ, ರಾಜಕೀಯದ ಮೇಲೆಯೂ ಕಾರ್ಪೋರೇಟ್‌ಗಳ ಹಿಡಿತವನ್ನು ಬಲಗೊಳಿಸುತ್ತವೆ. ಇದು ದೇಶದ ಪ್ರಜಾಸತ್ತಾತ್ಮಕ ರಾಜಕೀಯ ವ್ಯವಸ್ಥೆಯ ಮೇಲೆ ವಿನಾಶಕಾರಿ ಪರಿಣಾಮವನ್ನು ಉಂಟು ಮಾಡುತ್ತದೆ.

ನೋಟುರದ್ಧತಿಯ ಅಂತಿಮ 'ಸಾಧನೆ': ಕಪ್ಪು-ಬಿಳಿ! ಖೋಟಾ-ಸಾಚಾ!!



ಮಿತ್ರೋಂ, ನಿಮ್ಮ ಸ್ಕೋರ್ 99.3%, ನನ್ನದು 0.7%.

ಇದು ಹಿಂದುಸ್ತಾನ್ ಟೈಮ್ಸ್ ಪತ್ರಿಕೆಯ ಆಗಸ್ಟ್ 30ರ ಮುಖಪುಟದಲ್ಲಿನ ಒಂದು ಶಿರೋನಾಮೆ.

ನವಂಬರ್ 2016ರಲ್ಲಿ ಪ್ರಧಾನ ಮಂತ್ರಿಗಳ ಮಹಾ ಅಚ್ಛೇದಿನ್ ಸಾಹಸ ಎಂದು ಟಾಂಟಾಂ ಮಾಡಿದ ನೋಟುರದ್ಧತಿಯನ್ನು ಕುರಿತ ಭಾರತೀಯ ರಿಝರ್ವ್ ಬ್ಯಾಂಕ್ (ಆರ್‌ಬಿಐ) ಅಂತಿಮ ಫಲಿತಾಂಶ ಪ್ರಕಟಣೆಯನ್ನು ಅದು ತನ್ನ ಓದುಗರಿಗೆ ಕೊಟ್ಟ ರೀತಿ. **ಆಗಸ್ಟ್ 29ರಂದು ಆರ್‌ಬಿಐ ರದ್ದಾದ 50ರೂ. 1000ರೂ.ಗಳ ನೋಟುಗಳ ಎಣಿಕೆ ಮುಗಿದಿದೆ, ರದ್ದುಗೊಳಿಸಿದ ರೂ. 15,41,793 ಕೋಟಿ ಮೌಲ್ಯದ ನೋಟುಗಳಲ್ಲಿ ರೂ.15,31,773 ಕೋಟಿ ಮೌಲ್ಯದ ನೋಟುಗಳು, ಅಂದರೆ 99.3% ದಷ್ಟು ವಾಪಾಸು ಬಂದಿವೆ ಎಂದು ಅದರ 2017-18ರ ವರದಿ ಹೊರಗೆಡಹಿದೆ. ಅಂದರೆ ಸುಮಾರಾಗಿ ರದ್ದಾದ ಎಲ್ಲ ನೋಟುಗಳೂ ವಾಪಾಸು ಬಂದಿವೆ.**



ವ್ಯಂಗ್ಯಚಿತ್ರ: ಕೃಪೆ: ಪಿ.ಮಹಮ್ಮದ್

ಈ ನೋಟುರದ್ಧತಿ ಕನಿಷ್ಟ 3 ಲಕ್ಷ ಕೋಟಿ ರೂ. ಮೌಲ್ಯದ 'ಕಪ್ಪು ಹಣ'ವನ್ನು ಹೊರಗೆಳೆಯುತ್ತದೆ ಎಂದು ಸರಕಾರ ಜನಗಳಿಗೆ ಹೇಳಿತ್ತು. ಈ ಅಬ್ಬರದ ಮಾತು ಕಳೆದ ವರ್ಷವೇ ಆರ್‌ಬಿಐನ 2016-17ರ ವರದಿ 15.28ಲಕ್ಷ ಕೋಟಿ ರೂ.ಗಳಷ್ಟು ನೋಟುಗಳು ವಾಪಾಸು ಬಂದಿರಬಹುದು ಎಂಬ ಅಂದಾಜನ್ನು ಪ್ರಕಟಿಸಿದಾಗಲೇ ಕೇವಲ 'ಗ್ಯಾಸ್' ಎಂದು ಸ್ಪಷ್ಟವಾಗಿತ್ತು ಆದರೆ ಇವುಗಳಲ್ಲಿ ಖೋಟಾ ನೋಟುಗಳೆಷ್ಟು ಎಂದು ಲೆಕ್ಕ ಹಾಕಬೇಕಾಗಿದೆ ಎಂದು ಹೇಳಲಾಯಿತು.

ಈಗ ಆ ಕೆಲಸವೂ ಮುಗಿದಿದೆ. ಸಿಕ್ಕಿದ್ದು 500 ರೂ.ಗಳ 3.18ಲಕ್ಷದಷ್ಟು ನೋಟುಗಳು ಮತ್ತು 1000ರೂ.ನ 2.56 ಲಕ್ಷದಷ್ಟು ನೋಟುಗಳು, ಇವುಗಳ ಒಟ್ಟು ಮೌಲ್ಯ41.5 ಕೋಟಿ ರೂ.ಗಳು ಮಾತ್ರ, ಅಂದರೆ ನವಂಬರ್ 2016ರಲ್ಲಿ ನೋಟುರದ್ಧತಿಯ 'ಚಾರಿತ್ರಿಕ ಧೀರಕ್ರಮ'ದ ' ಮೊದಲು ಚಲಾವಣೆಯಲ್ಲಿದ್ದ ನೋಟುಗಳ ಒಟ್ಟು ಮೌಲ್ಯದ 0.0027 ಶೇ.!

ಖೋಟಾ ನೋಟುಗಳ ಪಿಡುಗೂ ನಿವಾರಣೆಯಾಗಿಲ್ಲ

ಆರ್‌ಬಿಐನ ವಾರ್ಷಿಕ ವರದಿಯ ಪ್ರಕಾರ ಹೊಸದಾಗಿ ಚಲಾವಣೆಗೆ ಬಿಟ್ಟ 500ರೂ., 2000ರೂ. ನೋಟುಗಳಲ್ಲಿ ಖೋಟಾ ನೋಟಿನ ಹಾವಳಿ ದೊಡ್ಡ ಪ್ರಮಾಣದಲ್ಲಿ ಹೆಚ್ಚಿದೆ.

ವರ್ಷ	2000ರೂ. ಖೋಟಾ ನೋಟು	500ರೂ. ಖೋಟಾ ನೋಟು
2016-17	638	199
2017-18	17929	9892

ನಿಜ, ಹೊಸ ನೋಟುಗಳು ಬಂದದ್ದು 2016-17ರ ಅರ್ಧವರ್ಷ ಕಳೆದ ನಂತರ ಆದರೂ 2000ರೂ. ಮತ್ತು 500ರೂ. ಖೋಟಾ ನೋಟುಗಳಲ್ಲಿ ಅನುಕ್ರಮವಾಗಿ 2710ಶೇ. ಮತ್ತು 4178ಶೇ. ಹೆಚ್ಚಳದ ಅರ್ಥವೇನು?

2000ರೂ. ಖೋಟಾ ನೊಟುಗಳ ಪ್ರಮಾಣವೇ ಹೆಚ್ಚುತ್ತಿರುವುದು ಆತಂಕಕಾರಿ ವಿಷಯ ಎಂದು ಬ್ಯಾಂಕ್‌ಗಳ ವಕ್ತಾರರುಗಳು ಹೇಳುತ್ತಿದ್ದಾರೆ.

ಖೋಟಾ ನೋಟುಗಳನ್ನು ಭಯೋತ್ಪಾದಕರು ಮತ್ತಿತರರು ಬುಡಮೇಲು ಕೃತ್ಯಗಳಿಗೆ ಬಳಸಿಕೊಳ್ಳುತ್ತಿದ್ದಾರೆ, ನೋಟುರದ್ದತಿ ಇದಕ್ಕೆ ಭಾರೀ ಏಟು ಕೊಟ್ಟು ಭಯೋತ್ಪಾದಕರ ಬೆನ್ನು ಮುರಿಯುತ್ತದೆ ಎಂದು ಹಣಕಾಸು ಮಂತ್ರಿಗಳು ನೋಟುರದ್ಧತಿಯ ಮತ್ತೊಂದು ಸದ್ಗುಣವನ್ನು ಹಾಡಿದ್ದರು.

ಆದರೆ ಈಗ ಆರ್‌ಬಿಐ ವರದಿ ಹೇಳುತ್ತಿರುವುದೇ ಬೇರೆ.
ಕಪ್ಪು ಹಣವೂ ಬರಲಿಲ್ಲ, ಖೋಟಾ ನೋಟೂ ಹೋಗಲಿಲ್ಲ.

ಹಾಗಿದ್ದರೆ ನಿಜವಾದ ಸಾಧನೆ ಏನು? ಕಪ್ಪನ್ನು ಬಿಳಿಮಾಡಿದ್ದು, ಖೋಟಾವನ್ನು ಸಾಚಾ ಮಾಡಿದ್ದು ಎಂದು ಒಬ್ಬ ರಾಜಕೀಯ ಅರ್ಥಶಾಸ್ತ್ರದ ವಿಶ್ಲೇಷಕರು ಸೂಚಿಸಿದ್ದಾರೆ.

ಇನ್ನೂ ಏಕೆ ಬಂದಿಲ್ಲ ಸಂಸದೀಯ ಸಮಿತಿಯ ವರದಿ ?

ರಿಝರ್ವ್ ಬ್ಯಾಂಕಿನ ಲೆಕ್ಕಾಚಾರ ಪ್ರಕಟವಾಯಿತು. ಆದರೆ ನೋಟುರದ್ದತಿ ಕುರಿತ ಸಂಸದೀಯ ಸಮಿತಿಯ ವರದಿ ಇನ್ನೂ ಪ್ರಕಟವಾಗಿಲ್ಲ. ನಿಜಸಂಗತಿಯೆಂದರೆ ಅದೂ ಸಿದ್ಧವಾಗಿದೆ ಎನ್ನಲಾಗಿದೆ. ಆದರೆ ಪ್ರಕಟ ಮಾಡಲು ಸಂಸದೀಯ ಹಣಕಾಸು ಸ್ಥಾಯೀ ಸಮಿತಿಯ ಆಳುವ ಪಕ್ಷದ ಸದಸ್ಯರು ಬಿಡುತ್ತಿಲ್ಲವಂತೆ.

ಕರಡು ವರದಿ ನೋಟುರದ್ಧತಿಯಿಂದಾಗಿ ಜಿಡಿಪಿಯಲ್ಲಿ 1% ಇಳಿಕೆಯಾಗಿದೆ, ಅದಕ್ಕನುಗುಣವಾಗಿ ಉದ್ಯೋಗಾವಕಾಶಗಳಲ್ಲೂ ಕಡಿತವಾಗಿದೆ ಎಂದು ಅಭಿಪ್ರಾಯ ಪಟ್ಟಿದೆಯಂತೆ. ಅಲ್ಲದೆ ಹೊಸ ಕರೆನ್ಸಿಗಳನ್ನು ಮುದ್ರಿಸಲು ಮತ್ತು ಅದಕ್ಕಾಗಿ ಎಟಿಎಂಗಳನ್ನು ಬದಲಿಸಲು ವಿಪರೀತ ಖರ್ಚಾಗಿದೆ ಎಂದೂ ಅದರಲ್ಲಿ ಹೇಳಲಾಗಿದೆಯಂತೆ.

ರಿಝರ್ವ್ ಬ್ಯಾಂಕಿನ ಗವರ್ನರ್ ಮತ್ತು ಇತರ ಪ್ರಮುಖ ಬ್ಯಾಂಕರುಗಳ ಉತ್ತರಗಳನ್ನು ಕೇಳಿ ರಚಿಸಿದಡೀ ಕರಡನ್ನು ರಚಿಸಿದ್ದರೂ, ನೋಟುರದ್ಧತಿ ಕಪ್ಪು ಹಣವನ್ನು ಹೊರಹಾಕಿದೆ, ಖೋಟಾ ನೋಟು ಹಾವಳಿಯನ್ನು ತಡೆದಿದೆ ಎಂದೇ ಈ ಸ್ಥಾಯೀ ಸಮಿತಿಯ ಆಳುವ ಪಕ್ಷದ ಸದಸ್ಯರು ವಾದಿಸುತ್ತಿದ್ದಾರಂತೆ.

ಈಗ ಆರ್‌ಬಿಐ ವರದಿಯ ನಂತರ ಅವರು ಏನು ಹೇಳುತ್ತಾರೋ ಕಾದು ನೋಡುವ ಅಗತ್ಯವಿದೆಯೇ?

ಇದ್ದಂತಿಲ್ಲ. ಏಕೆಂದರೆ ಹಣಕಾಸು ಮಂತ್ರಿಗಳು ಕಪ್ಪು ಹಣ, ಖೋಟಾ ನೋಟಿನ ತಮ್ಮದೇ ತರ್ಕಗಳನ್ನು ಬದಿಗೆ ತಳ್ಳಿ ಈಗ ದೇಶದ ಆರ್ಥಿಕವನ್ನು ಇದು ಔಪಚಾರಿಕಗೊಳಿಸಿದೆ, ಹೆಚ್ಚು ಮಂದಿ ತೆರಿಗೆ ಕೊಡುತ್ತಿದ್ದಾರೆ ಎಂದು ಈ ಮಹಾವಿಫಲತೆಯನ್ನು ಈಗಲೂ ಸಮರ್ಥಿಸಿಕೊಳ್ಳುವ ಪ್ರಯತ್ನ ನಡೆಸಿದ್ದಾರೆ. ನಿಜವಾಗಿ ತೆರಿಗೆ ಆದಾಯ ಹೆಚ್ಚಿದೆ ಎಂಬುದೂ ಲೆಕ್ಕದ ಕಸರತ್ತೇ ಹೊರತು ವಾಸ್ತವ ಸಂಗತಿಯಲ್ಲ ಎನ್ನುತ್ತಾರೆ ಅರ್ಥಶಾಸ್ತ್ರಜ್ಞರು.

ಯುಜಿಸಿ ಯೇ ಇರಲಿ, ಹೆಚ್‌ಇಸಿಐ ಬೇಡ -ವಿಜ್ಞಾನ ಅಕಡೆಮಿಗಳ ಒಮ್ಮತಾಭಿಪ್ರಾಯ

ಯುಜಿಸಿ ಮತ್ತು ಅಚ್ಛೇ ದಿನಗಳಲ್ಲಿ ಅದನ್ನು ರದ್ದು ಮಾಡಿ ತರಬೇಕೆಂದಿರುವ ಹೆಚ್‌ಇಸಿಐ(ಉನ್ನತ ಶಿಕ್ಷಣ ಆಯೋಗ) ಇವೆರಡನ್ನೂ ಜಾಗರೂಕತೆಯಿಂದ ಅಧ್ಯಯನ ಮಾಡಿದ ದೇಶದ ಮೂರು ವಿಜ್ಞಾನ ಅಕಡೆಮಿಗಳು ನಮ್ಮ ಪ್ರಸಕ್ತ ಉನ್ನತ ಶಿಕ್ಷಣದ ಸಮಸ್ಯೆಗಳಿಗೆ ಯುಜಿಸಿಯ ಅಸಮರ್ಪಕತೆ ಕಾರಣವಲ್ಲ, ಬದಲಿಗೆ ಅದರ ಅದಕ್ಷ ಜಾರಿಯೇ ಕಾರಣ ಎಂಬ ತೀರ್ಮಾನಕ್ಕೆ ಬಂದಿವೆ, ಮತ್ತು ಅವು ಈ ತೀರ್ಮಾನವನ್ನು ಮಾನವ ಸಂಪನ್ಮೂಲ ಮಂತ್ರಿಗಳಿಗೆ ಬರೆದಿವೆ ಎಂದು 'ದಿ ವೈರ್' ವರದಿ ಮಾಡಿದೆ.

ಐಎನ್‌ಎಸ್‌ಎ(ಭಾರತೀಯ ರಾಷ್ಟ್ರೀಯ ವಿಜ್ಞಾನ ಅಕಡೆಮಿ), ಐಎಎಸ್‌ಸಿ(ಭಾರತೀಯ ವಿಜ್ಞಾನಗಳ ಅಕಡೆಮಿ)ಮತ್ತು ಎನ್‌ಎಎಸ್‌ಐ(ರಾಷ್ಟ್ರೀಯ ವಿಜ್ಞಾನ ಅಕಡೆಮಿ, ಭಾರತ) ಎರಡು ದಿನಗಳ ಸಭೆಯ ನಂತರ ಆಗಸ್ಟ್ 23ರಂದು ಒಂದು ಜಂಟಿ ಹೇಳಿಕೆ ನೀಡಿವೆ ಎಂದು ಈ ವರದಿ ಹೇಳುತ್ತದೆ.

ಹೆಚ್‌ಇಸಿಐನ ಹಲವು ಅಂಶಗಳು ಯುಜಿಸಿ ಕಾಯ್ದೆಯ ನಕಲುಗಳಾಗಿವೆ, ಇನ್ನು ಕೆಲವು ಕಾರ್ಯಸಾಧ್ಯವಲ್ಲ, ಅಥವ ಅಪೇಕ್ಷಣೀಯವಲ್ಲ, ಅವುಗಳು ಭಾರತದಲ್ಲಿ ಶಿಕ್ಷಣದ ಬೆಳವಣಿಗೆಯನ್ನು ಮುಂದಿನ ದಶಕಗಳಲ್ಲಿ ಕುಂಠಿತಗೊಳಿಸುತ್ತವೆ ಎಂದು ಇದರಲ್ಲಿ ಹೇಳಲಾಗಿದೆಯಂತೆ.

ಈ ಮೂರು ವಿಜ್ಞಾನ ಸಂಸ್ಥೆಗಳ ಅಧ್ಯಕ್ಷರುಗಳು ತಮ್ಮ ಜಂಟಿ ಹೇಳಿಕೆಯಲ್ಲಿ ಈ ಹೆಚ್‌ಇಸಿಐ ಏಕೆ ಎಂಬುದಕ್ಕೆ ನೀತಿಗಳನ್ನು ಸ್ಪಷ್ಟಗೊಳಿಸಿಲ್ಲ, ಆ ಬಗ್ಗೆ ಅಗತ್ಯ ಸಮಾಲೋಚನೆಗಳನ್ನು ನಡೆಸಿಲ್ಲ, ಇದು ದೇಶದಲ್ಲಿ ಉನ್ನತ ಶಿಕ್ಷಣದ ದಿಕ್ಪಥಕ್ಕೆ ಹಾನಿಕಾರಕ. ಇದ್ದಕ್ಕಿದಂತೆ ಹೊಸದೊಂದು ವ್ಯವಸ್ಥೆಯನ್ನು ತರುವ ಬದಲು, ಯುಜಿಸಿಯಲ್ಲೇ ಅಗತ್ಯ ಸರಿಪಡಿಕೆ ಹೆಜ್ಜೆಗಳನ್ನಿಟ್ಟು, ಸಾಕಷ್ಟು ಶೈಕ್ಷಣಿಕ ನಿಧಿಗಳ ವಿನಿಯೋಜನೆ ಮಾಡಿ ಯುಜಿಸಿಯಲ್ಲಿನ ಆಭಾಸಗಳನ್ನು ಹೋಗಲಾಡಿಸಬಹುದು, ಮತ್ತು ಉತ್ಕೃಷ್ಟತೆಯ ಅಪೇಕ್ಷಿತ ಮಟ್ಟಗಳನ್ನು ಸಾಧಿಸಬಹುದು ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಯುಜಿಸಿ ಕಾಯ್ದೆ ದೇಶದಲ್ಲಿ ಉನ್ನತ ಶಿಕ್ಷಣದ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸಿದೆ. ಇತ್ತೀಚಿನ ದಶಕಗಳಲ್ಲಿ ಅದರಲ್ಲಿ ಅವನತಿ ಕಾಣುತ್ತಿದ್ದರೆ, ಅದಕ್ಕೆ ಕಾರಣ ತ್ವರಿತವಾಗಿ ವಿಸ್ತರಣೆಗೊಳ್ಳುತ್ತಿರುವ ಉನ್ನತ ಶಿಕ್ಷಣದ ಅಗತ್ಯಗಳಿಗೆ ಅದು ಹೊಂದಿಕೊಳ್ಳದಿರುವುದು ಮತ್ತು ಅದರ ಜತೆಗೆ ಸಾಕಷ್ಟು ನಿಧಿ ನೀಡಿಕೆ ಆಗದಿರುವುದು ಎಂದಿರುವ ಈ ಜಂಟಿ ಹೇಳಿಕೆ ಹೆಚ್‌ಇಸಿಐನಲ್ಲಿನ ಕೆಲವು ಅಂಶಗಳ ಬಗ್ಗೆ ಆತಂಕ ವ್ಯಕ್ತಪಡಿಸುತ್ತ **ಯುಜಿಸಿಯನ್ನು ಉಳಿಸಿಕೊಳ್ಳಲು ಮತ್ತು ಅದನ್ನು ಕಾರ್ಯನಿರ್ವಹಣೆಯಲ್ಲಿ ಸ್ವಾಯತ್ತತೆ ಮತ್ತು ಗಮನಾರ್ಹ ಪ್ರಮಾಣದಲ್ಲಿ ಹಣಕಾಸು ಒದಗಿಸುವ ಮೂಲಕ ಬಲಪಡಿಸಲು ಎಲ್ಲ ಪ್ರಯತ್ನಗಳನ್ನು ಮಾಡಬೇಕು ಎಂದು ಶಿಫಾರಸು ಮಾಡಿದೆ, ಮತ್ತು ಭಾರತೀಯ ಶಿಕ್ಷಣ ವ್ಯವಸ್ಥೆಯ ಸಮೃದ್ಧಿಯನ್ನು ಮುಂದುವರೆಸಲು ಹಾಗೂ ಅಂತರ್ರಾಷ್ಟ್ರೀಯವಾಗಿ ಸ್ಪರ್ಧಾತ್ಮಕವಾಗಿ ಉಳಿಸಲು ಇದೇ ಏಕೈಕ ದಾರಿ ಎಂದಿದೆ.**

ಶಿಕ್ಷಣದ ಖಾಸಗೀಕರಣ ಮತ್ತು ಬಹಿಷ್ಕರಣಕ್ಕೆ ಬದ್ಧವಾಗಿರುವ ಒಂದು ಆಳ್ವಿಕೆ ಅದಕ್ಕಾಗಿಯೇ ರೂಪಿಸಬೇಕೆಂದಿರುವ ಒಂದು ವ್ಯವಸ್ಥೆಯ ಬಗ್ಗೆ ದೇಶದ ಉನ್ನತ ವಿಜ್ಞಾನಿಗಳ ಒಮ್ಮತಾಭಿಪ್ರಾಯವನ್ನು ಗಂಭೀರವಾಗಿ ಪರಿಶೀಲಿಸಬಲ್ಲುದೇ, ಕಾದು ನೋಡಬೇಕು.

ಪ್ರಧಾನ ಮಂತ್ರಿ ಕಚೇರಿಯ ಪಟ್ಟು ಮತ್ತು ಚಮಚಾಗಳಿಗೆ ಉತ್ಕೃಷ್ಟತೆಯ ಪಟ್ಟ

ಈ ವಾರ ಪ್ರಕಟವಾಗಿರುವ ಎರಡು ಸುದ್ದಿಗಳು ಈ ಪ್ರಶ್ನೆಯನ್ನು ಗಂಭೀರವಾಗಿ ಎತ್ತಿವೆ. ಇನ್ನೂ ಅಸ್ತಿತ್ವಕ್ಕೇ ಬಾರದ, ಗಾಳಿಯಲ್ಲೇ ಇರುವ ಉನ್ನತ ಶಿಕ್ಷಣದ ಸಂಸ್ಥೆ ಎನಿಸಿರುವದಕ್ಕೆ ಉತ್ಕೃಷ್ಟತೆಯ ಪಟ್ಟ ಕಟ್ಟಿದ್ದು ಯೋಚನೆ ಮಾಡಬಲ್ಲ ಎಲ್ಲರ ಹುಬ್ಬೇರಿಸಿತ್ತು. ಆದರೂ ಮಾನವ ಸಂಪನ್ಮೂಲ ಮಂತ್ರಿಗಳು ಬಹಳಷ್ಟು ಹೆಣಗಾಡಿ ಅದನ್ನು ಸಮರ್ಥಿಸಿಕೊಂಡರು.

ಆದರೆ ವಾಸ್ತವವಾಗಿ ಈ ಬಗ್ಗೆ ಅವರ ಮಂತ್ರಾಲಯ ಮತ್ತು ಪ್ರಧಾನಮಂತ್ರಿಗಳ ಕಚೇರಿಯ ನಡುವೆ ಬಲವಾದ ಭಿನ್ನಾಭಿಪ್ರಾಯಗಳಿದ್ದವು. ಈ ಮಂತ್ರಾಲಯದ ಇನ್ನೆರಡು ವಿಭಾಗಗಳೂ ಇದು ಸರಿಯಲ್ಲ ಎಂದಿದ್ದವು. ಆದರೆ ಅಂತಿಮವಾಗಿ ಪ್ರಧಾನ ಮಂತ್ರಿಗಳ ಕಚೇರಿಯ ಮಾತೇ ನಡೆಯಿತು ಎಂದು ಈಗ ಬಯಲಾಗಿದೆ(ಇಂಡಿಯನ್ ಎಕ್ಸ್‌ಪ್ರೆಸ್, ಆಗಸ್ಟ್ 28).

ಈ ಒಳ್ಳೆ ದಿನಗಳ ಹಣಕಾಸು ಮಂತ್ರಾಲಯ ಕೂಡಾ ಆರು ತಿಂಗಳ ನಂತರ ಇದನ್ನು ವಿರೋಧಿಸಿತ್ತು ಮಾತ್ರವಲ್ಲ, ಎಚ್ಚರಿಸಿತ್ತು ಎಂಬುದನ್ನು ಅದೇ ಪತ್ರಿಕೆಯಲ್ಲಿ ಮರುದಿನ ಬಂದಿರುವ ಲೇಖನ ವಿವರವಾಗಿ ತಿಳಿಸಿದೆ. ಇವೆರಡೂ ಲೇಖನಗಳು ಈ ಪತ್ರಿಕೆ/ಲೇಖಕರು (ರಿತಿಕಾ ಚೋಪ್ರ) ಮಾಹಿತಿ ಹಕ್ಕು ಕಾಯ್ದೆಯ ಅಡಿಯಲ್ಲಿ ಪಡೆದ ಮಾಹಿತಿಗಳನ್ನು ಆಧರಿಸಿವೆಯಂತೆ.


ಇನ್ನೂ ಅಸ್ತಿತ್ವಕ್ಕೇ ಬರದ ಸಂಸ್ಥೆಯೊಂದಕ್ಕೆ ಉತ್ಕೃಷ್ಟತೆಯ ಸ್ಥಾನಮಾನ ನೀಡುವುದು ಯಾವುದೇ ರೀತಿಯಲ್ಲಿ ತರ್ಕಸಮ್ಮತವಲ್ಲ, ಇದಕ್ಕೆ ಇಟ್ಟಿರುವ ಮಾನದಂಡ ಅತ್ಯಂತ ವ್ಯಕ್ತಿನಿಷ್ಟ, ಇದು ಶಿಕ್ಷಣ ರಂಗದ ವಾತಾವರಣವನ್ನು ಕೆಡಿಸುತ್ತದೆ ಎಂದು ನಂತರ ಇದರ ಟೀಕಾಕಾರರೆಲ್ಲರೂ ಮುಂದಿಟ್ಟ ತರ್ಕವನ್ನು ಸ್ವತಃ ಹಣಕಾಸು ಮಂತ್ರಾಲಯವೇ ಮುಂದಿಟ್ಟಿತು ಎಂಬುದು ಗಮನಾರ್ಹ.

ಇವೆರಡು ಸಾಲದೆಂಬಂತೆ ಅದೇ ಪತ್ರಿಕೆಯಲ್ಲಿ ಆಗಸ್ಟ್ 30ರಂದು ಮತ್ತೊಂದು ಸುದ್ದಿ/ಲೇಖನ ಪ್ರಕಟವಾಗಿದೆ. ಅದರ ಪ್ರಕಾರ ನವಂಬರ್2015ರಲ್ಲಿ ಉತ್ಕೃಷ್ಟ ಶಿಕ್ಷಣ ಸಂಸ್ಥೆಗಳನ್ನು ಪ್ರೋತ್ಸಾಹಿಸುವ ಯೋಜನೆಯ ಬಗ್ಗೆ ಪ್ರಧಾನ ಮಂತ್ರಿಗಳ ಕಚೇರಿಯಲ್ಲಿ ಚರ್ಚೆ ನಡೆಸಿದಾಗ ಮಾನವ ಸಂಪನ್ಮೂಲ ಇಲಾಖೆಯ ಪರವಾಗಿ ಹಾಜರಿದ್ದ ಕಾರ್ಯದರ್ಶಿ ಹುದ್ದೆಯ ಅಧಿಕಾರಿಯೇ 2018ರಲ್ಲಿ ಜಿಯೋ ಇನ್‌ಸ್ಟ್ಯೂಟ್ ಬಗ್ಗೆ ಮಾತಾಡಲು ಅಂಬಾನಿಗಳ ರಿಲಯಂಸ್ ಫೌಂಡೇಶನ್ ಪರವಾಗಿ ಹಾಜರಾದರು!

ನಿಜ, ಈ ನಡುವೆ ಅವರು ನಿವೃತ್ತರಾಗಿದ್ದರು, ಸರಕಾರದ ನೌಕರರಾಗಿರಲಿಲ್ಲ, ನಿವೃತ್ತರಾಗಿ ಒಂದು ವರ್ಷ ಕಳೆದಿದ್ದರಿಂದ ಬೇರೆ ಯಾರದ್ದೇ ನೌಕರರಾಗಲು ಅಥವ ಅವರನ್ನು ಪ್ರತಿನಿಧಿಸಲು ನಿಯಮಗಳ ಪ್ರಕಾರವೂ 'ಅರ್ಹ'ರಾಗಿದ್ದರು! ಏನಿದ್ದರೂ ಚಮಚಾ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಇದಕ್ಕೆಲ್ಲ ಬೇರೆಯೇ ಅರ್ಥ ತಾನೇ?

ಐದು ವರ್ಷಗಳು ಪೂರ್ಣವಾಗುತ್ತಿದ್ದಂತೆ ಇತ್ತೀಚಿನ ದಿನಗಳಲ್ಲಿ ಎಲ್ಲ ವಿವಾದಗಳೂ ಅತ್ಯುನ್ನತ ಸ್ಥಾನದತ್ತವೇ ಬೊಟ್ಟು ಮಾಡುತ್ತಿವೆ ಎಂಬುದು ಗಮನಾರ್ಹ. ರಫೇಲ್ ನಂತರ ಈಗ ಜಿಯೋ ಸರದಿ!

1984ರ ಹತ್ಯಾಕಾಂಡಕ್ಕೆ ಕಾಂಗ್ರೆಸ್ ಸಾರ್ವಜನಿಕ ಕ್ಷಮೆ ಯಾಚಿಸಬೇಕು ಎಂದು ಬಿಜೆಪಿ ಪಟ್ಟು!
ಸಮಯ ನೌಕೆಯಲ್ಲಿ ಮುಂದಿನ ನಿಲ್ದಾಣ 2002?
ವ್ಯಂಗ್ಯಚಿತ್ರ: ಗೋಕುಲ್, ಡೆಕ್ಕನ್ ಕ್ರಾನಿಕಲ್



ಷೇರು ಮಾರುಕಟ್ಟೆಯ 'ಲವಲವಿಕೆ'ಯೂ, ಜನತೆಯ ಹಿತವೂ



ನವ-ಉದಾರಿ ಬಂಡವಾಳವಾದ ಮತ್ತು ಪ್ರಜಾಪ್ರಭುತ್ವದ ನಡುವೆ ಹೊಂದಾಣಿಕೆ ಮಾಡಿಕೊಳ್ಳಲಾಗದ ಒಂದು ವೈರುಧ್ಯವಿದೆ. ಈ ವೈರುಧ್ಯವು, ಬಂಡವಾಳಶಾಹಿಯ ಸ್ವಭಾವದಲ್ಲೇ ಅಂತರ್ಗತವಾಗಿರುವ ವರ್ಗ ವೈಷಮ್ಯವನ್ನು ವ್ಯಕ್ತಪಡಿಸುತ್ತದೆ. ಈ ಅಂಶ ಈಗ ಕೋಮುವಾದಿ ಸರ್ವಾಧಿಕಾರಶಾಹಿಗೆ ಸವಾಲು ಇಲ್ಲವೆಂದಾದಾಗ "ಮಾರುಕಟ್ಟೆ"ಯ ಲವಲವಿಕೆಯಲ್ಲಿ ಕಣ್ಣು ಕೋರೈಸುವಂತೆ ಮಿಂಚುತ್ತದೆ. ಬಂಡವಾಳಶಾಹಿಗೆ ಬಹಳ ಪ್ರಮುಖವಾದ ಸಂಗತಿ ಇದು.

ಪ್ರೊ. ಪ್ರಭಾತ್ ಪಟ್ನಾಯಕ್ ಅನು:ಕೆ.ಎಂ.ನಾಗರಾಜ್

ಒಂದು ಸಣ್ಣ ಸುದ್ದಿಯೂ ಬಂಡವಾಳಶಾಹಿಯ ಅಂತರಂಗವನ್ನು ಬಹಿರಂಗಪಡಿಸಬಲ್ಲದು. ಈಗ, ಭಾರತದ ಷೇರು ಮಾರುಕಟ್ಟೆ ಏರುಗತಿಯಲ್ಲಿರುವ ಸಂಗತಿ ಎಲ್ಲರಿಗೂ ಗೊತ್ತಿದೆ. ಕಳೆದ ಸೋಮವಾರ (20.08.2018), 30-ಷೇರು ಸಂವೇದಿ ಸೂಚ್ಯಂಕವು(ಸೆನ್ಸೆಕ್ಸ್) 38,278.75 ಅಂಕ ಮುಟ್ಟಿ ಹೊಸ ಎತ್ತರ ತಲುಪಿತ್ತು. ಅದೇ ದಿನ, ವಿಶಾಲ ತಳದ ನಿಫ್ಟಿ ಸೂಚ್ಯಂಕವು ಮೊದಲಬಾರಿಗೆ 11,500 ಅಂಕ ದಾಟಿತ್ತು. ಈ ಏರಿಕೆಯ ಹಿಂದಿರುವ ಕಾರಣಗಳ ಬಗ್ಗೆ ಹಣಕಾಸು ವಲಯದ ವೃತ್ತಿ ನಿರತ ವ್ಯಕ್ತಿಯೊಬ್ಬ ಕೊಟ್ಟ ವಿವರಣೆ ಆಗಸ್ಟ್ 21ರ ಹಿಂದೂ ಪತ್ರಿಕೆಯಲ್ಲಿ ಹೀಗಿತ್ತು: "ಈಗ ಕಾಣುವ ವ್ಯತ್ಯಾಸವೆಂದರೆ (ಕೆಲವು ತಿಂಗಳ ಹಿಂದಿನ ಪರಿಸ್ಥಿತಿಗೆ ಹೋಲಿಸಿದರೆ) ರಾಜಕೀಯದಲ್ಲಿ ಈಗ ಸ್ಥಿರತೆ ಇದೆ. ಅಂದರೆ, ವಿರೋಧ ಪಕ್ಷಗಳ ನಡುವೆ ಮೈತ್ರಿ ಏರ್ಪಡುವ ಸಾಧ್ಯತೆ ಕಡಿಮೆಯಾಗಿರುವುದು ಕಾಣುತ್ತಿದೆ". ಅರ್ಥಶಾಸ್ತ್ರದ ಒಳ ಹೊರಗುಗಳ ಪರಿಣಿತರಲ್ಲದ ಈ ವೃತ್ತಿ ನಿರತರು, ಅದರ ಬಗ್ಗೆ ಆಗಾಗ್ಗೆ ಬಿಗಿಯುವ ಭಾಷಣಗಳು ಅದೇ ಹಳಸಲು ನವ-ಉದಾರ ನೀತಿಗಳ ಹೊಗಳಿಕೆಯಿಂದ ಕೂಡಿರುತ್ತವೆ. ಆದರೆ, ಮಾರುಕಟ್ಟೆಯ ಬಗ್ಗೆ ತಿಳಿದುಕೊಳ್ಳುವುದು ಅವರಿಗೆ ಜೀವನೋಪಾಯದ ಅವಶ್ಯಕತೆ. ಹಾಗಾಗಿ, ಉಲ್ಲೇಖಿಸಿದ ಈ ವೃತ್ತಿ ನಿರತನ ಅಭಿಪ್ರಾಯಗಳಲ್ಲಿ ಸ್ವಲ್ಪ ಸತ್ಯ ಇರಲುಂಟು.

"ವಿರೋಧ ಪಕ್ಷಗಳ ಮೈತ್ರಿ" ಏರ್ಪಡುವುದೇ ಇಲ್ಲ ಎಂದು ಮಾರುಕಟ್ಟೆ ಹೇಳುತ್ತಿದೆ ಎನ್ನುವಂತಿಲ್ಲ. ಮಾರುಕಟ್ಟೆಯ ಏರಿಳಿತಗಳು, ಇವತ್ತು ಮಧ್ಯಾಹ್ನ ಏನಾಗುತ್ತದೆ ಅಥವಾ ನಾಳೆ ಏನಾಗುತ್ತದೆ ಎಂಬುದನ್ನು ಪ್ರತಿಫಲಿಸುತ್ತವೆಯೇ ಹೊರತು, ಮುಂದಿನ ತಿಂಗಳುಗಳ ಅಥವಾ ಬರುವ ವರ್ಷಗಳ ಆಗು ಹೋಗುಗಳನ್ನಲ್ಲ. "ವಿರೋಧ ಪಕ್ಷಗಳ ಮೈತ್ರಿ" ಕುದುರಿಸುವ ಪ್ರಯತ್ನದಲ್ಲಿ ತುಸು ಹಿನ್ನೆಡೆಯಾದರೂ ಅದು ಮಾರುಕಟ್ಟೆಗೆ 'ಚೈತನ್ಯ' ತುಂಬುತ್ತದೆ ಮತ್ತು ಅದು ಮಾರುಕಟ್ಟೆಯನ್ನು ಮೇಲೆ ತಳ್ಳುತ್ತದೆ. ಏಕೆಂದರೆ, ಇಂದು ಷೇರುಗಳನ್ನು ಕೊಂಡು ನಾಳೆ ಇನ್ನೂ ಹೆಚ್ಚಿನ ಬೆಲೆಗೆ ಇನ್ನೊಬ್ಬನಿಗೆ ಮಾರಬಹುದು ಎಂಬ ವಿಶ್ವಾಸದಲ್ಲಿ ಜನ ಕೊಳ್ಳುತ್ತಾರೆ. ನಾಳೆ ಅದನ್ನು ಕೊಳ್ಳುವ ಆ ಇನ್ನೊಬ್ಬ, ನಾಡಿದ್ದು ಮತ್ತೂ ಹೆಚ್ಚಿನ ಬೆಲೆಗೆ ಮತ್ತೊಬ್ಬನಿಗೆ ಮಾರಬಹುದು ಎಂಬ ವಿಶ್ವಾಸದಲ್ಲಿ ಕೊಳ್ಳುತ್ತಾನೆ. ಹಾಗಾಗಿ, ಇಲ್ಲಿರುವ ವಿಷಯ 2019ರ ಚುನಾವಣೆಯ ಫಲಿತಾಂಶದ ಭವಿಷ್ಯವಾಣಿಯ ಬಗ್ಗೆ ಅಲ್ಲ. "ವಿರೋಧ ಪಕ್ಷಗಳ ಮೈತ್ರಿ" ಕುದುರಿದರೆ ಅದು ಮಾರುಕಟ್ಟೆಯನ್ನು 'ನಿರುತ್ಸಾಹ'ಗೊಳಿಸುತ್ತದೆ ಎಂಬುದು ಇಲ್ಲಿರುವ ವಿಷಯ. ಇದನ್ನು ಬೇರೆ ರೀತಿಯಲ್ಲಿ ಹೇಳುವುದಾದರೆ, ಮಾರುಕಟ್ಟೆಗಳು ಮೋದಿ ಮತ್ತು ಬಿಜೆಪಿಯನ್ನು ಉಳಿದೆಲ್ಲರಿಗಿಂತ ಹೆಚ್ಚು ಇಷ್ಟಪಡುತ್ತವೆ.

ಮೋದಿ ಮತ್ತು ಬಿಜೆಪಿಯನ್ನು ಮಾರುಕಟ್ಟೆಗಳು ಏಕೆ ಇಷ್ಟಪಡುತ್ತವೆ? ಬೇರೆ ವಿಷಯಗಳು ಏನೇ ಇರಲಿ, ಮನಮೋಹನ್ ಸಿಂಗ್-ಚಿದಂಬರಂ, ಮೋದಿ-ಅಮಿತ್ ಶಾ ಜೋಡಿಗಿಂತ ಯಾವ ರೀತಿಯಲ್ಲೂ ಕಡಿಮೆ ಇಲ್ಲದ ಮಾರುಕಟ್ಟೆ-ಸ್ನೇಹಿ ಜೋಡಿಯೇ. ಹಾಗಿದ್ದರೂ ಸಹ, ಮಾರುಕಟ್ಟೆಗಳು ಮೋದಿ-ಅಮಿತ್ ಶಾ ಜೋಡಿಯ ಬಗ್ಗೆ ಪಕ್ಷಪಾತ ಅಥವಾ ವಿಶೇಷ ಒಲವು ತೋರುತ್ತವೆ, ಏಕೆ? ಏಕೆಂದರೆ, ಕಾಂಗ್ರೆಸ್ ಒಂದು ಗೊಡ್ಡು ಸಂಪ್ರದಾಯದ ಉದಾರ ಬಂಡವಾಳವಾದಿ (ಬೂರ್ಷ್ವಾ ಲಿಬರಲ್) ಪಕ್ಷ. ನವ-ಉದಾರವಾದದೊಂದಿಗಿನ ದಾಂಪತ್ಯಕ್ಕೆ ಕಾಂಗ್ರೆಸ್ ಬದ್ಧವಾಗಿದೆಯಾದರೂ, ಅದು ತನ್ನ ಹಿಂಡನ್ನು ಒಟ್ಟಿಗೆ ಹಿಡಿದಿಟ್ಟುಕೊಳ್ಳುವ ಸಲುವಾಗಿ, ಹಿಂಡಿನಲ್ಲಿರುವ ಎಲ್ಲರ ಜೊತೆಯಲ್ಲೂ ಅವರವರ ಹಿತಾಸಕ್ತಿಗಳೊಂದಿಗೆ ಎಲ್ಲ ರೀತಿಯ ರಾಜಿ ಮಾಡಿಕೊಳ್ಳುತ್ತದೆ. ಆದರೆ, ಮೋದಿ-ಅಮಿತ್ ಶಾ ಆಳ್ವಿಕೆಯಲ್ಲಿ ಜನಸಾಮಾನ್ಯರ ಬಗ್ಗೆ ಕನಿಕರ, ದಯೆ, ದಾಕ್ಷಿಣ್ಯಗಳಿಲ್ಲ ಅಷ್ಟೇ ಅಲ್ಲ, ಅವರ ಸರ್ಕಾರ ಅಷ್ಟೇ ನಿರ್ದಯವಾಗಿ ನವ-ಉದಾರವಾದ ನೀತಿಗಳಿಗೆ ಬದ್ಧವಾಗಿದೆ. ಈ ಎರಡೂ ಗುಣಗಳು ಮಾರುಕಟ್ಟೆಗಳಿಗೆ ಆಪ್ಯಾಯಮಾನವಾಗುತ್ತವೆ. ಅಂದರೆ, ಸರ್ಕಾರವು ಯಾವ ಅಳುಕು ಅಂಜಿಕೆಗಳಿಲ್ಲದೆ ಕಾರ್ಪೊರೇಟ್‌ಗಳ ಪರ ನಿಲ್ಲುವುದು ಮತ್ತು ದೊಡ್ಡ ಕಾರ್ಪೊರೇಟ್‌ಗಳ ವಿರುದ್ಧದ ಹೋರಾಟಗಳು ಸೇರಿದಂತೆ ಎಲ್ಲ ರೀತಿಯ ಭಿನ್ನಮತ/ವಿರೋಧಾಭಿಪ್ರಾಯಗಳನ್ನು ನಿರ್ದಯವಾಗಿ ದಮನಿಸುವುದು-ಇವುಗಳನ್ನು ಬಯಸುತ್ತವೆ ಮಾರುಕಟ್ಟೆಗಳು.

ಮಾರುಕಟ್ಟೆಯ ಬಗ್ಗೆ ಸಂಕ್ಷಿಪ್ತವಾಗಿ ಹೇಳುವುದಾದರೆ, ಮೂಲಭೂತವಾಗಿ ಅದು ಪ್ರಜಾಪ್ರಭುತ್ವದ ಬದ್ಧದ್ವೇಷಿಯಾಗಿದೆ. ಅದು ಸರ್ವಾಧಿಕಾರವನ್ನು ಇಷ್ಟಪಡುತ್ತದೆ. ಕೋಮುವಾದಿ-ಸರ್ವಾಧಿಕಾರವನ್ನು ಇನ್ನೂ ಹೆಚ್ಚು ಇಷ್ಟಪಡುತ್ತದೆ. ಏಕೆಂದರೆ, ಕೋಮುವಾದಿ-ಸರ್ವಾಧಿಕಾರವು, ಜನಸಮೂಹದ ಭಾವನೆಗಳನ್ನು ಪ್ರಭಾವಶಾಲಿಯಾಗಿ ಕೆರಳಿಸುವ ಸಿದ್ಧಾಂತವನ್ನು ತಲೆಯಲ್ಲಿ ತುಂಬಿಕೊಂಡಿರುತ್ತದೆ. ಆ ಸಿದ್ಧಾಂತವು ಏಕ ಕಾಲದಲ್ಲಿ ಛಿದ್ರಕಾರಿಯೂ ಹಾಗೂ ಪ್ರಗತಿ (ವಾಮ ಪಂಥ) ವಿರೋಧಿಯೂ ಆಗಿರುತ್ತದೆ. ದಿನ ನಿತ್ಯದ ಜೀವನದಲ್ಲಿ ತಮ್ಮ ಕಡು ಕಷ್ಟಗಳ ಬಗ್ಗೆ ಜನರ ಗಮನ ಹರಿಯಲು ಬಿಡದೆ ಅವರನ್ನು ಭಾವನಾತ್ಮಕ ವಿಷಯಗಳಲ್ಲಿ ಮುಳುಗಿಸುತ್ತದೆ, ಕೋಮುವಾದಿ-ಸರ್ವಾಧಿಕಾರ.

ದೇಶದ ಎಲ್ಲ ಬೂರ್ಷ್ವಾ ಪಕ್ಷಗಳೂ ನವ-ಉದಾರವಾದದ ಸಮರ್ಥಕರೇ ಆಗಿದ್ದರೂ, ದೇಶಿಯ ಮತ್ತು ವಿದೇಶೀಯ ಕಾರ್ಪೊರೇಟ್‌ಗಳಿಗೆ ಹಿಂದುತ್ವ ಪಡೆಗಳೇ (ಬಿಜೆಪಿ) ಬಲು ಅಚ್ಚು ಮೆಚ್ಚು. ಏಕೆಂದರೆ, ದೇಶದಲ್ಲಿ ಅಘೋಷಿತ ತುರ್ತುಪರಿಸ್ಥಿತಿ ಜಾರಿಯಲ್ಲಿದೆ ಎನ್ನುವ ರೀತಿಯಲ್ಲಿ ಅವರು ಆಡಳಿತ ನಡೆಸುತ್ತಿದ್ದಾರೆ. ಮಾತ್ರವಲ್ಲ, ಹಿಂದುತ್ವ ರಾಷ್ಟ್ರವಾದದ ಪ್ರತಿಪಾದನೆಯೊಂದಿಗೆ ಅವರ ಆಡಳಿತವು ಗುರುತಿಸಿಕೊಂಡಿರುವುದರಿಂದ ಸಾಕಷ್ಟು ಜನ ಬೆಂಬಲವೂ ಅದಕ್ಕಿದೆ ಎಂಬ ಕಾರಣದಿಂದ.

ಈ ಆಡಳಿತವು ತನ್ನ ವಿರೋಧಿಗಳನ್ನು ಬಗ್ಗುಬಡಿಯುತ್ತದೆ. ಡೊಗ್ಗು ಸಲಾಮು ಹೊಡೆಯುವ ಮಾಧ್ಯಮಗಳು ಕೊಡುತ್ತಿರುವ ಬೆಂಬಲದ ಪ್ರಚಾರ ಬಳಸಿಕೊಂಡು, ತನ್ನ ವಿರೋಧಿಗಳನ್ನು "ರಾಷ್ಟ್ರ-ವಿರೋಧಿ" ಎಂಬ ಹಣೆ ಪಟ್ಟಿ ಹಚ್ಚಿ ಅವರ ಧೈರ್ಯ ಕುಂದಿಸುವ ಪ್ರಯತ್ನ ಮಾಡುತ್ತದೆ. ಈ ಪ್ರಚಾರವನ್ನು ಕೆಲವರು ನಿಜವೆಂದು ನಂಬುತ್ತಾರೆ. ಈ ಬೆಳವಣಿಗೆಯಿಂದ ತಮಗೆಷ್ಟು ಅನುಕೂಲವಾಗುತ್ತಿದೆ ಎಂಬುದನ್ನು ಮಾರುಕಟ್ಟೆಯ ಪಾತ್ರಧಾರಿಗಳು/ಭಾಗಿದಾರರು ಸಹಜವಾಗಿ ಅರ್ಥಮಾಡಿಕೊಳ್ಳುತ್ತಾರೆ. ಹಾಗಾಗಿ, ಬಿಜೆಪಿ-ವಿರೋಧಿ ಪಾಳಯದಲ್ಲಿ ಸ್ವಲ್ಪ ಹಿನ್ನೆಡೆ ಕಂಡೊಡನೆಯೇ ಷೇರು ಮಾರುಕಟ್ಟೆ ಸೂಚ್ಯಂಕ ಮೇಲೆ ಹೋಗುತ್ತದೆ.

ತಮ್ಮ ಕಾರ್ಪೊರೇಟ್-ಪರ ನಿಲುವುಗಳನ್ನು ಮೋದಿ-ಅಮಿತ್ ಶಾ ಅದೆಷ್ಟು ಎತ್ತರಕ್ಕೆ ಕೊಂಡೊಯ್ದಿದ್ದಾರೆ ಎಂದರೆ, ಮೋದಿ ಅದನ್ನು ಗರ್ವದಿಂದ ಹೇಳಿಕೊಳ್ಳುತ್ತಾರೆ. ಹಿರಿಯ ಬಂಡವಾಳಿಗರೊಂದಿಗೆ ಬಿಜೆಪಿ ತೋರುತ್ತಿರುವ ಬಹಿರಂಗ ಪಕ್ಷಪಾತ ಮತ್ತು ಅದಕ್ಕೆ ಸಮನಾಗಿ ಕಾರ್ಪೊರೇಟ್‌ಗಳು ಬಿಜೆಪಿಗೆ ವ್ಯಕ್ತಪಡಿಸುವ ಪ್ರೀತಿ, ಇವು ಹೊಸ ವಿದ್ಯಮಾನಗಳಲ್ಲ. ಇವರ ಪ್ರೇಮ ಪ್ರಕರಣ ಹಿಂದೆಯೂ (ವಾಜಪೇಯಿ ಅಧಿಕಾರಾವಧಿಯಲ್ಲಿ) ಇತ್ತು. ಆದರೆ, 2004ರ ಚುನಾವಣೆಯಲ್ಲಿ, ವಾಜಪೇಯಿ-ಆಡ್ವಾನಿ ಜೋಡಿ ಹೇಳುತ್ತಿದ್ದ "ಭಾರತ ಪ್ರಕಾಶಮಾನವಾಗಿದೆ" ಮಾತುಗಳನ್ನು ಮತದಾರರು ನಂಬಲಿಲ್ಲ. ವಾಜಪೇಯಿಯವರ ಎನ್‌ಡಿಎ ಅಧಿಕಾರ ಕಳೆದುಕೊಂಡದ್ದು ಎಲ್ಲರನ್ನೂ ಆಶ್ಚರ್ಯಚಕಿತರಾಗುವಂತೆ ಮಾಡಿತ್ತು. ಷೇರು ಮಾರುಕಟ್ಟೆಯೂ ಕುಸಿತ ಕಂಡಿತ್ತು. ಅಷ್ಟೇ ಅಲ್ಲ. ಅದರ ಜೊತೆಯಲ್ಲಿ, ಇಂತಹ ಚುನಾವಣೆಗಳು ಭಾರತದಲ್ಲಿ ಪದೇ ಪದೇ ನಡೆಯಬೇಕು ಏಕೆ ಎಂಬ ಪ್ರಶ್ನೆ ಕಾರ್ಪೊರೇಟ್ ವಲಯಗಳಲ್ಲಿ ಎದ್ದಿತ್ತು!

ಆ ಸಂದರ್ಭದಲ್ಲಿ, ಅಮೇರಿಕಾದ 'ವಾಲ್‌ಸ್ಟ್ರೀಟ್ ಜರ್ನಲ್' ಪತ್ರಿಕೆಯಲ್ಲಿ ಪ್ರಕಟವಾದ ಲೇಖನದಲ್ಲಿ ಒಂದು ವಿಲಕ್ಷಣದ ಐಡಿಯಾ ಸೂಚಿಸಲಾಗಿತ್ತು. ದೇಶದ ಆಳ್ವಿಕೆಯನ್ನು ಯಾರು ನಿರ್ವಹಿಸಬೇಕು ಎಂಬ ತೀರ್ಮಾನವನ್ನು ಆ ದೇಶದ ಜನರಷ್ಟೇ ಮಾಡುವುದಲ್ಲ; ಎಲ್ಲ ಪಣಧಾರಿಗಳೂ ಸೇರಿ ಅದನ್ನು ತೀರ್ಮಾನಿಸಬೇಕು. ಅಂದರೆ, ಜನರಷ್ಟೇ ಅಲ್ಲ, ದೇಶದ ಅನೇಕ ಯೋಜನೆಗಳಲ್ಲಿ ಬಂಡವಾಳ ಹೂಡಿರುವ ವಿದೇಶಿ ಹೂಡಿಕೆದಾರರು ಮತ್ತು ಬಹುರಾಷ್ಟ್ರೀಯ ಕಂಪೆನಿಗಳು ಸಹ ಈ ತೀರ್ಮಾನದಲ್ಲಿ ಭಾಗವಹಿಸಬೇಕು.

ವಿಚಾರಗಳು ತಲೆ ಕೆಳಗಾಗುವ ಪರಿಸ್ಥಿತಿಗೆ ಇದೊಂದು ಅಸಾಧಾರಣ ಉದಾಹರಣೆಯಷ್ಟೆ. ಸಾಮಾಜಿಕ ಸಂಬಂಧಗಳು ತಲೆ ಕೆಳಗಾದಂತೆ ಕಾಣುವ ಪರಿಸ್ಥಿತಿಯನ್ನು, ಮಾರ್ಕ್ಸ್, ಮನಸಿನ ಕಲ್ಪನೆಗಳ "ಮೂರ್ತೀಕರಣ" ಎಂದು ಕರೆದಿದ್ದರು. ಪ್ರಜಾಪ್ರಭುತ್ವದ ಒಂದು ಆದರ್ಶವೆಂದರೆ, ಎಂತಹ ಸಾಮಾಜಿಕ ಏರ್ಪಾಡಿನಲ್ಲಿ ತಾವು ಬದುಕಬೇಕು ಎಂಬುದನ್ನು ಜನ ತೀರ್ಮಾನಿಸಬೇಕು ಎಂಬುದು. ಖಾಸಗಿ ಆಸ್ತಿಯು ಇಂದಿನ ಯುಗದ ಒಂದು ಸಾಮಾಜಿಕ ಏರ್ಪಾಡು. ಖಾಸಗಿ ಆಸ್ತಿಯ ಅಪರಾವತಾರದಂತಿರುವ, ನಮ್ಮ ಕಾಲದಲ್ಲಿ ಅವತರಿಸಿ ಜಾಗತಿಕವಾಗಿ ಹರಿದಾಡುತ್ತಿರುವ ಹಣಕಾಸು ಬಂಡವಾಳವೂ ಈ ಸಾಮಾಜಿಕ ಏರ್ಪಾಡಿನಲ್ಲಿ ಸೇರಿದೆ. ಆದ್ದರಿಂದ, ಈ ಹಣಕಾಸು ಬಂಡವಾಳದ ಇರುವಿಕೆ ಮತ್ತು ಅದರ ಕಾರ್ಯಾಚರಣೆಗಳಿಗೆ, ಪ್ರಜಾಪ್ರಭುತ್ವದಲ್ಲಿ, ಆದರ್ಶಪ್ರಾಯವಾಗಿ, ಜನರ ಅನುಮೋದನೆ ಪಡೆಯಲೇಬೇಕು. ಪ್ರಜಾಪ್ರಭುತ್ವದಲ್ಲಿ, ಪರಮಾಧಿಕಾರವು ಜನರ ಕೈಯಲ್ಲಿರುತ್ತದೆ ಎಂಬುದು ಮೊದಲನೆಯ ಮತ್ತು ಅತಿ ಮುಖ್ಯವಾದ ಅಂಶ. ಹಾಗಾಗಿ, ಸಾಮಾಜಿಕ ಏರ್ಪಾಡುಗಳು ತಮ್ಮ ಔಚಿತ್ಯವನ್ನು, ಅದೇನಾದರೂ ಇದ್ದರೆ, ಪರಮಾಧಿಕಾರ ಹೊಂದಿದ ಜನತೆಯ ಅನುಮತಿಯ ಮೂಲಕ ಪಡೆಯುತ್ತವೆ. ಆದರೆ, ಮತ ನೀಡುವ ಹಕ್ಕನ್ನು ಜನರ ಜೊತೆಯಲ್ಲಿ ಹಣಕಾಸು ಬಂಡವಾಳಕ್ಕೂ ಕೊಡಬೇಕು ಎಂಬ ಸೂಚನೆಯು, ಜನತೆ ಸೃಷ್ಟಿಸಿದ ಸಾಮಾಜಿಕ ಏರ್ಪಾಡನ್ನು ಸೃಷ್ಟಿಸಿದ ಜನತೆಗಿಂತ ಮೇಲಿಡುವ ಕೆಲಸವಾಗುತ್ತದೆ. ಮೂರ್ತೀಕರಣ ಸೂಚಿಸುವುದು ಇದನ್ನೇ.

ಹಣಕಾಸು ಬಂಡವಾಳದ ಈ ಮನೋಭಾವವು, ಅದು ಪ್ರಜಾಪ್ರಭುತ್ವದ ಬದ್ಧದ್ವೇಷಿ ಎಂಬುದನ್ನು ಬಯಲುಮಾಡಿದೆ. ಹಣಕಾಸು ಬಂಡವಾಳವು ಪ್ರಜಾಪ್ರಭುತ್ವವನ್ನು ಸಹಿಸಿಕೊಳ್ಳಲೇಬೇಕಾದ ಪರಿಸ್ಥಿತಿಯಲ್ಲಿ, ಚುನಾವಣೆಗಳಲ್ಲಿ ಅಪಾರ ಹಣ ಸುರಿದು ಪ್ರಜಾಪ್ರಭುತ್ವ ವ್ಯವಸ್ಥೆಯನ್ನೇ ಬುಡಮೇಲು ಮಾಡಲು ಪ್ರಯತ್ನಿಸುತ್ತದೆ. ಅದಕ್ಕಾಗಿ, ಕಾರ್ಪೊರೇಟ್‌ಗಳ ಹಿಡಿತದಲ್ಲಿರುವ, ಯಾವುದಕ್ಕೂ ಹೇಸದ ಮತ್ತು ಅತಿರೇಕದ ಮಾಧ್ಯಮಗಳನ್ನು ಛೂ ಬಿಡುತ್ತದೆ. ರಾಜಕೀಯವನ್ನು ಒಂದು ಉದ್ಯಮದ ಮಟ್ಟಕ್ಕೆ ಇಳಿಸಿರುವಲ್ಲಿ ಅದರ ಕೈವಾಡವಿದೆ. ದನ ಎಮ್ಮೆಗಳನ್ನು ಕೊಳ್ಳುವಂತೆ ರಾಜಕಾರಣಿಗಳನ್ನು ಕೊಳ್ಳುತ್ತದೆ. ರಾಜಕೀಯ ಪಕ್ಷಗಳಿಗೆ ಗುಟ್ಟಾಗಿಯೂ ಮತ್ತು ಬಹಿರಂಗವಾಗಿಯೂ ಹಣದ ಹೊಳೆ ಹರಿಸುತ್ತದೆ. ಇಷ್ಟೆಲ್ಲಾ ಪ್ರಯತ್ನಗಳ ನಂತರವೂ, ಅಕಸ್ಮಾತ್ತಾಗಿ, ತನಗೆ ಒಪ್ಪಿಗೆಯಾಗದ ಆರ್ಥಿಕ ಅಜೆಂಡಾಕ್ಕೆ ಬದ್ಧವಾಗಿರುವ ಒಂದು ಸರ್ಕಾರ ಚುನಾವಣೆಯಲ್ಲಿ ಗೆದ್ದರೆ, ಹೂಡಿಕೆಯಾದ ಬಂಡವಾಳ ಹಾರಿಹೋಗುವಂತೆ ಮಾಡುವುದರಿಂದ ಹಿಡಿದು ಸೂಪರ್ ಪವರ್ ದೇಶಗಳು ನಿರ್ಬಂಧ ಹೇರುವುದರ ವರೆಗೆ ನಾನಾ ಕುತಂತ್ರಗಳನ್ನು ಬಳಸಿ ಅಂತಹ ಸರ್ಕಾರವು ಅದರ ಪರ್ಯಾಯ ಅಜೆಂಡಾವನ್ನು ಕೈಬಿಟ್ಟು ತನ್ನೊಂದಿಗೆ ರಾಜಿಮಾಡಿಕೊಳ್ಳುವಂತೆ ಪಳಗಿಸುತ್ತದೆ.

ಹಣಕಾಸು ಬಂಡವಾಳದ ದೃಷ್ಟಿಯಲ್ಲಿ, ತನ್ನ ಸಮೀಪ ಬಂಧುಗಳು ನಡೆಸುವ ಸರ್ಕಾರ ಅಧಿಕಾರದಲ್ಲಿದ್ದರೆ, ಅದಕ್ಕೆ ಪರಮಾನಂದ. ಮಾತಿನಲ್ಲೇ ಹೊಟ್ಟೆ ತುಂಬಿಸುವಷ್ಟು ಅದ್ಭುತವಾಗಿ ಮಾತನಾಡಿ, ಕೋಮು ಭಾವನೆಗಳನ್ನು ಕೆರಳಿಸುವ ಮೂಲಕ ಅನುದಿನದ ಸಮಸ್ಯೆಗಳಿಂದ ಜನರ ಗಮನವನ್ನು ದಿಕ್ಕು ತಪ್ಪಿಸಿ ಖಾಯಮ್ಮಾಗಿ ಅಧಿಕಾರ ವಶಮಾಡಿಕೊಳ್ಳುವ ಛಾತಿ ಇರುವವರು ಅಧಿಕಾರದಲ್ಲಿದ್ದರೆ, ಸ್ವರ್ಗಕ್ಕೆ ಮೂರೇ ಗೇಣು, ಹಣಕಾಸು ಬಂಡವಾಳಕ್ಕೆ. ಅದೃಷ್ಟಹೀನ ಅಲ್ಪಸಂಖ್ಯಾತರನ್ನು ದ್ವೇಷಿಸುವಂತೆ ಪ್ರಚೋದಿಸಿ ಅವರಿಗೆ ಕಿರುಕುಳಕೊಡುವ ಒಂದು ತೋರಿಕೆಯ ಪ್ರಜಾಪ್ರಭುತ್ವದಲ್ಲಿ ತನ್ನ ಯಜಮಾನಿಕೆಯನ್ನು ಒಪ್ಪಿಕೊಂಡರೆ, ಹಣಕಾಸು ಬಂಡವಾಳ ಹಾಯಾಗಿರುತ್ತದೆ.

ಹಣಕಾಸು ಬಂಡವಾಳವು ಜನತೆಯ ಹಿತಕ್ಕೆ ಎದುರುಬದರಾಗಿ ನಿಂತಿರುವ ಪರಿಸ್ಥಿತಿ ಆರ್ಥಿಕ ವಲಯಕ್ಕಷ್ಟೇ ಸೀಮಿತಗೊಂಡಿಲ್ಲ. ಹಣಕಾಸು ಬಂಡವಾಳದ ಆಧಿಪತ್ಯವು ಅನೇಕ ರೀತಿಯಲ್ಲಿ ಪ್ರಕಟಗೊಳ್ಳುತ್ತದೆ. ಸಣ್ಣ ಪುಟ್ಟ ಉತ್ಪಾದಕರು ಮತ್ತು ರೈತ ಕೃಷಿಯ ಮೇಲೆ ನಿರ್ದಯವಾಗಿ ದಾಳಿ ಮಾಡಿ ಅವರನ್ನು ಹಾಳುಗೆಡವಿ, ಅನಾಗರಿಕವಾಗಿ ಬಂಡವಾಳ ಶೇಖರಣೆಮಾಡಿಕೊಂಡಿದೆ. ಅದರಿಂದಾಗಿ, ಶ್ರಮಿಕ ಮೀಸಲು ಪಡೆ ಉಬ್ಬಿತು. ಹಣಕಾಸು ಬಂಡವಾಳದ ಆಧಿಪತ್ಯದಲ್ಲಿ ಸರ್ಕಾರವು ಸಾಮಾಜಿಕ ಮತ್ತು ಕಲ್ಯಾಣ ಕಾರ್ಯಕ್ರಮಗಳಿಗೆ ಮಾಡುತ್ತಿದ್ದ ವೆಚ್ಚಗಳನ್ನು ಕಡಿತಗೊಳಿಸಲಾಗಿದೆ. ಅದರಿಂದಾಗಿ, ನಗರ ಕಾರ್ಮಿಕರ, ಕೃಷಿ ಕೂಲಿಗಾರರ, ರೈತರ, ಮೀನುಗಾರರ, ಕುಶಲಕರ್ಮಿಗಳ, ಸಣ್ಣ ಪುಟ್ಟ ವ್ಯಾಪಾರಿಗಳ ಮತ್ತು ಇತರರ ಜೀವನ ನಿರ್ವಹಣೆ ದುರ್ಭರವಾಗಿದೆ. ಈ ಸಂಘರ್ಷವು ಅವಶ್ಯವಾಗಿ ಆರ್ಥಿಕ ವಲಯದಿಂದಾಚೆಗೂ ಸರಿದು ಇಡೀ ಸಮಾಜ ವ್ಯವಸ್ಥೆಯನ್ನು ಆವರಿಸುತ್ತದೆ.

ಜನತೆಗಿರುವ ಅಭಿಪ್ರಾಯ ವ್ಯಕ್ತಪಡಿಸುವ ಬಲವನ್ನು ಮೊಟಕುಗೊಳಿಸಬೇಕೆಂದು ಹಣಕಾಸು ಬಂಡವಾಳ ಬಯಸುತ್ತದೆ. ಪ್ರಜಾಪ್ರಭುತ್ವವನ್ನು ಎಲ್ಲ ರೀತಿಯಲ್ಲೂ ನಿತ್ರಾಣಗೊಳಿಸಿದ್ದರೂ ಸಹ, ಅದು ಜನತೆಗೆ ಒಂದಿಷ್ಟು ಬಲ, ಅಧಿಕಾರ ಒದಗಿಸಿರುವುದರಿಂದ, ಹಣಕಾಸು ಬಂಡವಾಳವು ಪ್ರಜಾಪ್ರಭುತ್ವವನ್ನೇ ಮೊಟಕುಗೊಳಿಸುವಂತೆ (ಅಥವಾ, ಸಾಧ್ಯವಾದರೆ, ಸಂಪೂರ್ಣವಾಗಿ ಇಲ್ಲದಂತೆ ಮಾಡಿದರೆ ಇನ್ನೂ ಉತ್ತಮ) ಬಯಸುತ್ತದೆ. ಅವರ ಈ ಬಯಕೆ ಸರಳವೂ ನಿಚ್ಚಳವೂ ಆಗಿದೆ.

ಈ ಸಮಸ್ಯೆಯನ್ನು ನವ-ಉದಾರ ಬಂಡವಾಳವಾದದಲ್ಲಿ (ಹಣಕಾಸು ಬಂಡವಾಳದ ಆಧಿಪತ್ಯವೇ ಇದರ ಪ್ರಧಾನ ಲಕ್ಷಣ) ಮತ್ತು ಪ್ರಜಾಪ್ರಭುತ್ವದಲ್ಲಿ ತಮಗೆ ನಂಬಿಕೆ ಇದೆ ಎಂದು ಘೋಷಿಸುವ ಉದಾರವಾದಿಗಳು ಅರ್ಥಮಾಡಿಕೊಂಡಿಲ್ಲ. ಅದೇನಾದರೂ ಇರಲಿ, ನವ-ಉದಾರಿ ಬಂಡವಾಳವಾದ ಮತ್ತು ಪ್ರಜಾಪ್ರಭುತ್ವದ ನಡುವೆ ಹೊಂದಾಣಿಕೆ ಮಾಡಿಕೊಳ್ಳಲಾಗದ ಒಂದು ವೈರುಧ್ಯವಿದೆ. ಈ ವೈರುಧ್ಯವು, ಬಂಡವಾಳಶಾಹಿಯ ಸ್ವಭಾವದಲ್ಲೇ ಅಂತರ್ಗತವಾಗಿರುವ ವರ್ಗ ವೈಷಮ್ಯವನ್ನು ವ್ಯಕ್ತಪಡಿಸುತ್ತದೆ. ಈ ಅಂಶ ಬಹಳ ವೇಗವಾಗಿ ಪ್ರತಿಫಲಿಸುವುದನ್ನು ಮಾರುಕಟ್ಟೆಯ ಲವಲವಿಕೆಯಲ್ಲಿ ಕಾಣಬಹುದು, ಯಾವಾಗ ಅಂದರೆ, ಕೋಮುವಾದಿ ಸರ್ವಾಧಿಕಾರಕ್ಕೆ ಸವಾಲು ಇಲ್ಲವೆಂದಾದಾಗ. ಬಂಡವಾಳಶಾಹಿಗೆ ಬಹಳ ಪ್ರಮುಖವಾದ ಅಂಶ ಇದು.

ಕೇರಳ ಮಹಾಪ್ರವಾಹ-ಪ್ರಾಣಹಾನಿ 483-ಒಟ್ಟು ನಷ್ಟ ವಾರ್ಷಿಕ ಯೋಜನಾ ವೆಚ್ಚಕ್ಕಿಂತಲೂ ಹೆಚ್ಚು

ಆಗಸ್ಟ್ 30ರಂದು ಕೇರಳ ವಿಧಾನಸಭೆಯ ಒಂದು ವಿಶೇಷ ಅಧಿವೇಶನ ನಡೆಯಿತು. ಈ ಮೊದಲೇ ಮುಖ್ಯಮಂತ್ರಿಗಳು ಪ್ರಕಟಿಸಿದ್ದಂತೆ ಇತ್ತೀಚಿನ ಮಹಾಪ್ರವಾಹ, ಪರಿಹಾರ ಮತ್ತು ಮರುವಸತಿ ಕ್ರಮಗಳನ್ನು ಚರ್ಚಿಸಲೆಂದೇ ಈ ವಿಶೇಷ ಅಧಿವೇಶನವನ್ನು ಕರೆಯಲಾಗಿತ್ತು.

ನೆರೆ-ಸಂಬಂಧಿತ ಘಟನೆಗಳಲ್ಲಿ ಒಟ್ಟು 483 ಮಂದಿ ಪ್ರಾಣ ಕಳಕೊಂಡಿದ್ದಾರೆ, 14 ಮಂದಿ ಇನ್ನೂ ಪತ್ತೆಯಾಗಿಲ್ಲ. ಒಂದು ಹಂತದಲ್ಲಿ 3.91ಲಕ್ಷ ಕುಟುಂಬಗಳ 14.5 ಲಕ್ಷ ಜನಗಳನ್ನು ಹತ್ತಿರದ ಪರಿಹಾರ ಶಿಬಿರಗಳಿಗೆ ತುರ್ತಾಗಿ ಸಾಗಿಸಬೇಕಾಗಿ ಬಂದಿತ್ತು. ಮರುವಸತಿ ಪ್ರಕ್ರಿಯೆ ಆರಂಭವಾದ ನಂತರ ಈಗ 305 ಶಿಬಿರಗಳಲ್ಲಿ 59,296 ಮಂದಿ ಇದ್ದಾರೆ ಎಂದು ಮುಖ್ಯ ಮಂತ್ರಿಗಳು ವಿಧಾನಸಭೆಗೆ ತಿಳಿಸಿದರು.

ಈಗ ಮುಂದೆ ಹೋಗಲು ನಿಧಿ ಹೊಂದಿಸುವುದು ಅತ್ಯಂತ ನಿರ್ಣಾಯಕ ಅಂಶವಾಗಿದೆ ಎಂದ ಮುಖ್ಯಮಂತ್ರಿಗಳು ಸಂಕಟ ಪರಿಹಾರ ನಿಧಿಗೆ ಒಂದು ತಿಂಗಳ ವೇತನವನ್ನು ನೀಡಬೇಕೆಂಬ ಕೋರಿಕೆಗೆ ಅಪಾರ ಸ್ಪಂದನ ದೊರೆತಿದೆ ಎಂದರು.

ನೆರೆಯಿಂದ ಆಗಿರುವ ಒಟ್ಟು ಹಾನಿ 2017-18ರ ರಾಜ್ಯ ಯೋಜನಾ ವೆಚ್ಚಕ್ಕಿಂತಲೂ ಹೆಚ್ಚು ಎಂದು ಅಂದಾಜು ಮಾಡಲಾಗಿದೆ. ಅದು 26,500 ಕೋಟಿ ರೂ. ಆಗಿತ್ತು. 57,000 ಹೆಕ್ಟೇರ್‌ನಲ್ಲಿ ಬೆಳೆ ನಾಶವಾಗಿದೆ.

ಇದಕ್ಕೆ ಮೊದಲು ಸಂದರ್ಶನವೊಂದರಲ್ಲಿ ಮಾತಾಡುತ್ತ ಮುಖ್ಯಮಂತ್ರಿಗಳು ಮರುವಸತಿಗೆ ಸರಕಾರ ಕೈಗೊಂಡಿರುವ ಕ್ರಮಗಳ ಬಗ್ಗೆ ತಿಳಿಸಿದರು. ಹಾನಿಗೊಳಗಾದ ಕುಟುಂಬಗಳಿಗೆ ತಕ್ಷಣದ ಪರಿಹಾರವಾಗಿ 10, 000ರೂ. ನೀಡಲಾಗುತ್ತದೆ. ಇದಕ್ಕೆ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಒಟ್ಟು 242.73 ಕೋಟಿ ರೂ. ಕೊಡಲಾಗಿದೆ. ಇದರಿಂದ 3,91,494 ಕುಟುಂಬಗಳಿಗೆ ಪ್ರಯೋಜನವಾಗುತ್ತದೆ ಎಂದು ಅವರು ಹೇಳಿದರು.

ಒಂದು ಬೃಹತ್ ಶುಚಿತ್ವ ಕೆಲಸ ಭರದಿಂದ ಸಾಗಿದೆ. ಸರಕಾರೀ ಏಜೆಂಸಿಗಳು, ಪಂಚಾಯತು ಮುಂತಾದ ಸ್ಥಳೀಯ ಸಂಸ್ಥೆಗಳು, ಕುಟುಂಬಶ್ರೀ ಕಾರ್ಯಕರ್ತರು ಮತ್ತು ಸಾಮೂಹಿಕ ಸಂಘಟನೆಗಳ ಸದಸ್ಯರು ಈ ಬೃಹತ್ ಕಾರ್ಯಾಚರಣೆಯ ಮುಂಚೂಣಿಯಲ್ಲಿದ್ದಾರೆ.

ಮನೆಗಳನ್ನು, ರಸ್ತೆಗಳನ್ನು ಶುಚಿಗೊಳಿಸಿದ ನಂತರ ತಮ್ಮ ಮನೆಗಳಿಗೆ ಹಿಂದಿರುಗುವ ಪ್ರತಿ ಕುಟುಂಬಕ್ಕೆ 5 ಕೆಜಿ ಅಕ್ಕಿ ಇರುವ ಕಿಟ್ ಕೊಡಲಾಗುವುದು. ಕುಟುಂಬದ ಮಹಿಳಾ ಮುಖ್ಯಸ್ಥರಿಗೆ ಬಡ್ಡಿರಹಿತ ಸಾಲ ಒದಗಿಸಲಾಗುವುದು. ಇದರ ಮೇಲಿನ ಇಲಕ್ಷ ರೂ.ವರೆಗಿನ ಬಡ್ಡಿಯನ್ನು ಸರಕಾರ ವಹಿಸಿಕೊಳ್ಳುತ್ತದೆ. ನೆರೆಪೀಡಿತ ಪ್ರದೇಶಗಳಲ್ಲಿ ಬ್ಯಾಂಕ್ ಸಾಲಗಳ ಮರುಪಾವತಿಗೆ ಸಾಲಾವಧಿ ವಿಸ್ತರಣೆ ಕೊಡಲಾಗುತ್ತದೆ.

ಕೆಲವು ಅತ್ಯಂತ ಪೀಡಿತ ಪ್ರದೇಶಗಳಲ್ಲಿ ಬಿಟ್ಟರೆ ಉಳಿದೆಡೆಗಳಲ್ಲಿ ಶಾಲೆಗಳನ್ನು ಮತ್ತೆ ತೆರೆಯಲಾಗಿದೆ. ಪುಸ್ತಕಗಳು, ಯೂನಿಫಾರ್ಮ್‌ಗಳನ್ನು ಕಳಕೊಂಡವರಿಗೆ ಹೊಸದಾಗಿ ನೀಡಲಾಗುತ್ತದೆ. ಸತ್ತ ಪ್ರಾಣಿಗಳನ್ನು ಹೂಳುವ ಕೆಲಸ ಸುಮಾರಾಗಿ ಮುಗಿದಿದೆ. 25.6ಲಕ್ಷ ವಿದ್ಯುತ್ ಸಂಪರ್ಕಗಳು ಕಡಿದಿದ್ದವು, ಅವುಗಳಲ್ಲಿ 25.04 ಸಂಪರ್ಕಗಳನ್ನು ಮತ್ತೆ ಜೋಡಿಸಲಾಗಿದೆ. ಅಗತ್ಯವಿದ್ದಲ್ಲಿ ಕುಡಿಯುವ ನೀರನ್ನು ಒದಗಿಸಲಾಗುತ್ತಿದೆ. ನೆರೆಯಿಂದಾಗಿ ಕಳೆದ ಹೋದ ದಸ್ತಾವೇಜುಗಳನ್ನು ,ಸರ್ಟಿಫಿಕೆಟ್‌ಗಳನ್ನು ದಾಖಲೆಗಳಿಂದ ಪಡೆಯಲು ಸಾಫ್ಟ್‌ವೇರ್ ಒಂದನ್ನು ಅಭಿವೃದ್ಧಿ ಪಡಿಸಲಾಗುತ್ತಿದೆ, ಸಪ್ಟಂಬರ್‌ನಿಂದ ಇವನ್ನು ನೀಡಲಾಗುವುದು ಎಂದು ಮುಖ್ಯಮಂತ್ರಿಗಳು ಹೇಳಿದರು.

ಪ್ರಸಕ್ತ ಸಂಕಟಗಳನ್ನು ನಿವಾರಿಸಿಕೊಳ್ಳಲು ಸರಕಾರದ ಯೋಜನೆಗಳೇನು ಎಂದು ಕೇಳಿದಾಗ, ರಾಜ್ಯ ಸಂಪುಟ ಮರುವಸತಿ ಮತ್ತು ರಾಜ್ಯದ ಪುನರ್ರಚನೆಗೆ ಒಂದು ಸಮಗ್ರ ಯೋಜನೆಯನ್ನು ಕೇಂದ್ರ ಸರಕಾರಕ್ಕೆ ಸಲ್ಲಿಸಲು ನಿರ್ಧರಿಸಿದೆ ಎಂದು ಮುಖ್ಯಮಂತ್ರಿಗಳು ಹೇಳಿದರು.

ಪುನರ್ರಚನೆಗೆ ದೊಡ್ಡ ಪ್ರಮಾಣದಲ್ಲಿ ಸಂಪನ್ಮೂಲಗಳನ್ನು ಕ್ರೋಡೀಕರಿಸಬೇಕಾಗಿದೆ. ರಾಜ್ಯದ ಸಾಲ ಪಡೆಯುವ ಮಿತಿಯನ್ನು ಜಿಡಿಪಿಯ 3% ದಿಂದ 4.5%ಕ್ಕೆ ಏರಿಸಿದರೆ ಹೆಚ್ಚುವರಿ 10,000 ಕೋಟಿ ರೂ. ಗಳಷ್ಟು ಸಾಲಗಳನ್ನು ಮಾರುಕಟ್ಟೆಯಿಂದ ಎತ್ತಲು ಅನುವಾಗುತ್ತದೆ. ಭಾರತೀಯ ಆರ್ಥಿಕ ಮೇಲ್ವಿಚಾರಣಾ ಕೇಂದ್ರ(ಸಿಎಂಐಇ) ಕೇರಳದ ಪನರ್ರಚನೆ ಕೇವಲ ಕೇರಳದ ವ್ಯವಹಾರವಲ್ಲ, ಇಡೀ ದೇಶದ ವ್ಯವಹಾರ ಎಂದಿದೆ ಎನ್ನುತ್ತ ಮುಖ್ಯಮಂತ್ರಿಗಳು ಈ ಪ್ರಯತ್ನ ಇಡೀ ದೇಶದ ಮೇಲೂ ಪ್ರಭಾವ ಬೀರುತ್ತದೆ ಎಂದರು. ಕೇರಳ ಹೊರಗಿನಿಂದ ಹಣಪಾವತಿಯ ಒಂದು ಅತಿ ದೊಡ್ಡ ಮೂಲವಾಗಿದೆ. ದೇಶದ ಇತರೆಡೆಗಳ ಸುಮಾರು 40ಲಕ್ಷ ವಲಸೆ ಕಾರ್ಮಿಕರು ಇಲ್ಲಿ ಉದ್ಯೋಗ ಪಡೆದಿದ್ದಾರೆ. ಕೇರಳವನ್ನು ಮತ್ತೆ ಕಟ್ಟುವ ಕ್ರಿಯೆ ಇಡೀ ದೇಶಕ್ಕೂ ಹೆಚ್ಚಿನ ಉದ್ಯೋಗಗಳನ್ನು ನಿರ್ಮಿಸುತ್ತದೆ ಎಂಬ ಸಂಗತಿಯತ್ತ ಮುಖ್ಯಮಂತ್ರಿಗಳು ಗಮನ ಸೆಳೆದರು.

ಬೃಹತ್ ಶುಚಿತ್ವ ಕಾರ್ಯಾಚರಣೆ

ನೆರೆಯ ನಂತರ ಸಾಂಕ್ರಾಮಿಕ ಹರಡದಂತೆ ತಡೆಯಲು ಸಿಪಿಐ(ಎಂ) ಕಾರ್ಯಕರ್ತರು, ಸಾಮೂಹಿಕ ಸಂಘಟನೆಗಳ ಸದಸ್ಯರು ಈಗಾಗಲೇ ಸಾಮೂಹಿಕ ಶುಚಿತ್ವ ಕ್ರಿಯೆಗಳಲ್ಲಿ ತೊಡಗಿದ್ದಾರೆ.

ಅಲಪುಳ ಜಿಲ್ಲೆಯ ಕುಟ್ಟನಾಡು ಪ್ರದೇಶದಲ್ಲಿ 70,000 ಸ್ವಯಂಸೇವಕರು ಪ್ರತಿಯೊಂದು ರಸ್ತೆಯನ್ನು ಶುಚಿಗೊಳಿಸುವ ಪಣ ತೊಟ್ಟಿದ್ದಾರೆ. ರಾಜ್ಯದ 30,000 ಕೇಂದ್ರಗಳಲ್ಲಿ ಸುಮಾರು 4ಲಕ್ಷ ಮಂದಿ ಇದರಲ್ಲಿ ಭಾಗವಹಿಸಿದ್ದಾರೆ. ಅವರು ಮನೆಗಳು ಮತ್ತು ಸಾರ್ವಜನಿಕ ಸ್ಥಳಗಳಿಂದ ಅಪಾರ ಪ್ರಮಾಣದ ಪ್ಲಾಸ್ಟಿಕ್ ತ್ಯಾಜ್ಯಗಳನ್ನು ಸಂಗ್ರಹಿಸಿದ್ದಾರೆ. ಇವುಗಳಲ್ಲಿ ಬಹಳಷ್ಟು ತ್ಯಾಜ್ಯನಿರ್ವಹಣೆಗೆಂದು ಸಂಗ್ರಹಿಸಿಟ್ಟಿದ್ದ ದಾಸ್ತಾನುಗಳು.

ಸಿಪಿಐ(ಎಂ)ನ ಪ್ರಮುಖ ಮುಖಂಡರುಗಳೂ ಈ ಶುಚಿತ್ವ ಕಾರ್ಯಾಚರಣೆಯಲ್ಲಿ ಕೈಜೋಡಿಸಿದ್ದಾರೆ.ರಾಜ್ಯ ಸಿಪಿಐ(ಎಂ) ಕಾರ್ಯದರ್ಶಿ ಕೊಡಿಯೇರಿ ಬಾಲಕೃಷ್ಣನ್ ಈ ಬೃಹತ್ ಕಾರ್ಯಾಚರಣೆಯನ್ನು ಉದ್ಘಾಟಿಸಿದರು. ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರಾದ ಎಸ್. ರಾಮಚಂದ್ರನ್‌ಪಿಳ್ಳೆ ಕುಟ್ಟನಾಡು ಪ್ರದೇಶದಲ್ಲಿ ಕೈಜೋಡಿಸಿದರು. ಕೇಂದ್ರ ಸಮಿತಿ ಸದಸ್ಯರುಗಳಾದ ವೈಕೊಂ ವಿಶ್ವಂ, ಪಿ.ಕೆ.ಶ್ರೀಮತಿ, ಹಣಕಾಸು ಮಂತ್ರಿಗಳೂ ಆದ ಥಾಮಸ್ ಐಸಾಕ್, ಇತರ ಮಂತ್ರಿಗಳು,ಶಾಸಕರು ಇದರಲ್ಲಿ ಭಾಗವಹಿಸುತ್ತಿದ್ದಾರೆ(ಪುಟ 6ನೋಡಿ)



ಕೊಲ್ಕತದಲ್ಲಿ ಬೃಹತ್ ಪ್ರತಿಭಟನೆ

ಆಗಸ್ಟ್ 28ರಂದು ದೇಶದ ಐದು ನಗರಗಳಲ್ಲಿ ಮಹಾರಾಷ್ಟ್ರ ಪೊಳಿಸರು ಮಾನವ ಹಕಕುಗಳ ಹೋರಾಟಗಾರರ ಮನೆಗಳ ಮೇಲ ದಾಳಿ ಮಾಡಿ ಬಂಧಿಸಿದ್ದನ್ನು ಖಂಡಿಸಿ ಕೊಲ್ಕತಾದಲ್ಲಿ ಆಗಸ್ಟ್ 30ರಂದು 17 ಎಡಪಕ್ಷಗಳು ಒಂದು ಬೃಹತ್ ಪ್ರತಿಭಟನಾ ರ್‍ಯಾಲಿಯನ್ನು ನಡೆಸಿದರು. ಇದರಲ್ಲಿ ಎಡರಂಗದ ಅಧ್ಯಕ್ಷ ಬಿಮನ್ ಬಸು ಮತ್ತು ರಾಜ್ಯ ಸಿಪಿಐ(ಎಂ) ಕಾರ್ಯದರ್ಶಿ ಸೂರ್ಯಕಾಂತ್ ಮಿಶ್ರ ಹಾಜರಿದ್ದರು.

ಬಿಹಾರದಲ್ಲಿ ಮಾನವ ಸರಪಳಿ : ಬಿಹಾರದ ಎಡಪಕ್ಷಗಳ ಕರೆಯ ಮೇರೆಗೆ ಆಗಸ್ಟ್ 28ರಂದು ರಾಜ್ಯದ ಹಲವೆಡೆಗಳಲ್ಲಿ ಮಾನವ ಸರಪಳಿ ಕಾರ್ಯಕ್ಕರಮಯಶಸ್ವಿಯಾಗಿ ನಡೆದಿದೆ. ರಾಜ್ಯದ ಬಾಲಿಕಾಗ್ರಹಗಳಲ್ಲಿನ ಅಕ್ರಮಗಳ ಬಗ್ಗೆ ಸರಿಯಾದ ತನಿಖೆ ನಡೆಸುವಲ್ಲಿ ರಾಜ್ಯದ ಮುಖ್ಯಮಂತ್ರಿ ನಿತೀಶ್ ಕುಮಾರ್ ಮತ್ತು ಉಪಮುಖ್ಯಮಂತ್ರಿ ಸುಶೀಲ್‌ಕುಮಾರ್ ಮೋದಿ ವಿಫಲರಾಗಿದ್ದು ಅವರ ರಾಜೀನಾಮೆಯನ್ನು ಆಗ್ರಹಿಸಿ ಈ ಕಾರ್ಯಾಚರಣೆ ನಡೆದಿದೆ. ಇತರ ಪ್ರತಿಪಕ್ಷಗಳೂ ಈ ಬೇಡಿಕೆಯನ್ನು ಬೆಂಬಲಿಸಿವೆ.





"ಕೇರಳಕ್ಕೆ ಬಿಜೆಪಿ ಮಂತ್ರಿಗಳ ಮತ್ತು ಎಂಪಿಗಳ ಕೊಡುಗೆ, ನೀವು ಇದನ್ನು ಪಡೆದಿಲ್ಲ ಎಂದು ಹೇಳಬೇಡಿ"

ಇದು ಮೇಲಿನ ಚಿತ್ರದೊಂದಿಗೆ ಒಂದು ಮಲೆಯಾಳಂ ಫೇಸ್‌ಬುಕ್ ಪೋಸ್ಟ್.

ಇದು ಕೇಂದ್ರ ಪ್ರವಾಸೋದ್ಯಮ ರಾಜ್ಯಮಂತ್ರಿ ಅಲ್ಫೋನ್ಸ್ ಕಣ್ಣಂತನಂ, ಬಿಜೆಪಿ ಎಂಪಿ ವಿ.ಮುರಳೀಧರನ್ ಮತ್ತಿತರರು 25 ಕೋಟಿ ರೂ.ಗಳ ಚೆಕ್‌ನ್ನು ಮುಖ್ಯಮಂತ್ರಿ ಪಿಣರಾಯಿ ವಿಜಯನ್‌ರವರಿಗೆ ಕೊಡುವ ಚಿತ್ರ. ಇದು 10ಸಾವಿರ ಶೇರ್ ಪಡೆದಿದೆ.

ಈ 25 ಕೋಟಿರೂ. ಬಿಜೆಪಿ ಮುಖಂಡರ ದಾನವೇ? ಖಂಡಿತಾ ಅಲ್ಲ. ಸಾರ್ವಜನಿಕ ವಲಯದ ಪೆಟ್ರೋಲಿಯಂ ಕಂಪನಿಗಳ ದಾನ. ಕೇಂದ್ರ ಮಂತ್ರಿಗಳು ಅವರ ಪರವಾಗಿ ಕೊಟ್ಟಿದ್ದರಷ್ಟೇ. ಇದನ್ನು ಹಿಂದುಸ್ತಾನ್ ಪೆಟ್ರೋಲಿಯಂ ಕಂಪನಿ ಮತ್ತು ಸ್ವತಃ ಮರಳೀಧರನ್ ಟ್ವೀಟ್ ಮಾಡಿದ್ದಾರೆ ಎಂದು ಆಲ್ಟ್‌ನ್ಯೂಸ್ ವೆಬ್‌ಪತ್ರಿಕೆ ಬಯಲಿಗೆಳೆದಿದೆ.

ಕೇರಳದ ಬಿಜೆಪಿ ಮುಖಂಡರು ಯುಎಇ ಸರಕಾರ ಕೇರಳಕ್ಕೆ ನೆರೆ ಪರಿಹಾರಕ್ಕೆ 700 ಕೋಟಿ ರೂ.ವಂತಿಗೆ ನೀಡುವ ಬಗ್ಗೆ ಹೇಳೇ ಇಲ್ಲ ಎಂದು ನಗೆಪಾಟಲಾದ್ದನ್ನೂ ಇಲ್ಲಿ ನೆನಪಿಸಿಕೊಳ್ಳಬಹುದು.



ತ್ರಿಪುರಾದಲ್ಲಿ ನೆರೆ ಪರಿಹಾರ ತಂಡಗಳ ಮೇಲೂ ಹಲ್ಲೆಗಳು

-ಸಿಪಿಐ(ಎಂ) ಪೊಲಿಟ್‌ಬ್ಯುರೊ ಖಂಡನೆ

ತ್ರಿಪುರಾದಲ್ಲಿ ಬಿಜೆಪಿ ಸರಕಾರ ಅಧಿಕಾರಕ್ಕೆ ಬಂದಂದಿನಿಂದ ಉಂಟಾಗಿರುವ ಪರಿಸ್ಥಿತಿಯಲ್ಲಿ ಮಾನವೀಯ ಪರಿಹಾರಕ್ಕೆ ಹಣ ಸಂಗ್ರಹವೂ ದಾಳಿಗೊಳಗಾಗುತ್ತಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯರೊ ಬಲವಾಗಿ ಖಂಡಿಸಿದೆ.

ತ್ರಿಪುರಾ ರಾಜ್ಯ ಸಮಿತಿ ನೆರೆಪೀಡಿತ ಕೇರಳದಲ್ಲಿ ಪರಿಹಾರ ಕೆಲಸಗಳಿಗಾಗಿ ಜನಗಳಿಂದ ನಿಧಿ ಸಂಗ್ರಹದಲ್ಲಿ ತೊಡಗಿದೆ. ಇದಕ್ಕೆ ಸಾರ್ವಜನಿಕರಿಂದ ಉತ್ತಮ ಸ್ಪಂದನ ದೊರೆತಿದೆ.

ಆದರೆ ಆಗಸ್ಟ್ 27ರಂದು ಅಗರ್ತಲಾದ ಮಹಾರಾಜ್‌ಗಂಜ್ ಬರ್ಘಾರ್, ಖೊವಾಯ್ ಪಟ್ಟಣ ಮತ್ತು ಬೆಲೊನಿಯ ಪಟ್ಟಣದಲ್ಲಿ ಬಿಜೆಪಿ ಮಂದಿ ಸಿಪಿಐ(ಎಂ) ಮುಖಂಡರನ್ನು ಮತ್ತು ಕಾರ್ಯಕರ್ತರನ್ನು ನಿಧಿ ಸಂಗ್ರಹ ಮಾಡಬಾರದು ಎಂದು ದೈಹಿಕವಾಗಿ ತಡೆದರು. ಪೊಲೀಸರ ಸಮ್ಮುಖವೇ ಬಿಜೆಪಿ ಮಂದಿ ಪರಿಹಾರ ನಿಧಿ ಸಂಗ್ರಹಕ್ಕೆ ನೇತೃತ್ವ ನೀಡುತ್ತಿದ್ದ ಶಾಸಕರಾದ ಬಾದಲ್ ಚೌಧುರಿ ಮತ್ತು ಸುಧನ್ ದಾಸ್ ಮತ್ತು ಮಾಜಿ ಶಾಸಕ ಬಾಸುದೇಬ್ ಮಜುಂದಾರ್ ಮತ್ತಿತರ ಮುಖಂಡರನ್ನು ತಡೆದರು.

ಖೊವಾಯ್ ಪಟ್ಟಣದಲ್ಲಿ ನಿಧಿ ಸಂಗ್ರಹ ತಂಡ ನೇತೃತ್ವವನ್ನು ಕಾರ್ಯದರ್ಶಿ ಪದ್ಮ ದೇಬ್‌ಬರ್ಮ ಮತ್ತು ಶಾಸಕ ನಿರ್ಮಲ್ ಬಿಸ್ವಾಸ್ ವಹಿಸಿದ್ದರು. ಅವರನ್ನು ನಿಧಿ ಸಂಗ್ರಹಿಸದಂತೆ ತಡೆದುದು ಮಾತ್ರವಲ್ಲ, ಅವರ ಮೇಲೆ ದೈಹಿಕ ಹಲ್ಲೆಯನ್ನೂ ನಡೆಸಲಾಯಿತು.

ಇವು ಪ್ರಜಾಪ್ರಭುತ್ವ-ವಿರೋಧಿ ಮತ್ತು ಸಮಾಜ-ವಿರೋಧಿ ಚಟುವಟಿಕೆಗಳು ಎಂದು ಬಲವಾಗಿ ಖಂಡಿಸಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ರಾಜ್ಯ ಸರಕಾರ ತಕ್ಷಣವೇ ಪ್ರತಿಪಕ್ಷಗಳು ತಮ್ಮ ಸಾಮಾನ್ಯ ಚಟುವಟಿಕೆಗಳನ್ನು ನಡೆಸಲು ಸಾಧ್ಯವಾಗುವಂತೆ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಆಗ್ರಹಿಸಿದೆ.

ಬಿಹಾರದ ಹಿರಿಯ ರೈತ ಮುಖಂಡ ಕೃಷ್ಣ ಕಾಂತ್ ಸಿಂಗ್ ನಿಧನ

ಬಿಹಾರದ ಹಿರಿಯ ರೈತ ಹೋರಾಟಗಾರ ಕೃಷ್ಣ ಕಾಂತ್‌ಸಿಂಗ್ ಆಗಸ್ಟ್ 28ರಂದು ಪಾಟ್ನಾದಲ್ಲಿ ನಿಧನರಾಗಿದ್ದಾರೆ. ಅವರು ಬಿಹಾರ ರಾಜ್ಯ ಕಿಸಾನ್ ಸಭಾದ ಅಧ್ಯಕ್ಷರೂ, ಕೇಂದ್ರೀಯ ಕಿಸಾನ್ ಮಂಡಳಿಯ ಸದಸ್ಯರೂ ಆಗಿದ್ದರು. 70ರ ದಶಕದಿಂದ 90ರ ದಶಕದ ವರೆಗೆ ಬಿಹಾರದ ಚಂಪಾರಣ್, ಖಗರಿಯ, ಮತ್ತು ಸುತ್ತಲಿನ ಜಿಲ್ಲೆಗಳಲ್ಲಿ ಭೂಹೋರಾಟಗಳನ್ನುಮತ್ತು ಚಳುವಳಿಗಳನ್ನು ಕಟ್ಟುವಲ್ಲಿ ಇವರ ಪಾತ್ರ ಬಹು ದೊಡ್ಡದು ಎಂದು ಅಖಿಲ ಭಾರತ ಕಿಸನ್ ಸಭಾ ಶ್ರದ್ಧಾಂಜಲಿ ಅರ್ಪಿಸುತ್ತ ನೆನಪಿಸಿಕೊಂಡಿದೆ.

ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾಗಿಯೂ ಇವರು ರಾಜ್ಯದ ರೈತಾಪಿ ಜನಗಳ ಹಿತರಕ್ಷಣೆಗೆ ತಮ್ಮ ಜೀವನದುದ್ದಕ್ಕೂ ಬದ್ಧರಾಗಿದ್ದವರು ಎಂದು ಎಐಕೆಎಸ್ ಹೇಳಿದೆ.

ಔಷಧಿಗಳ ಬೆಲೆ ಎಟುಕವಷ್ಟಿರಬೇಕು ಮತ್ತು ಎಲ್ಲೆಡೆ ದೊರಕಬೇಕು

ಮೂಲಭೂತ ಸೌಕರ್ಯಗಳನ್ನು ಸುಧಾರಣೆ ಮಾಡಿ ಎಲ್ಲರಿಗೂ ಅಗ್ಗದ ದರದಲ್ಲಿ ರೋಗ ಪತ್ತೆ ಸೇವೆಗಳು ಮತ್ತು ಔಷಧಿಗಳು ಲಭ್ಯವಾಗುವಂತಾಗಿ ಬಿಟ್ಟರೆ ಸಾರ್ವಜನಿಕ ಕ್ಷೇತ್ರದ ಮೂಲಕವೇ ಅಗ್ಗದ ದರದ ಆರೋಗ್ಯ ಸೇವೆಯನ್ನು ನೀಡಬಹುದು ಮತ್ತು ಜನರ ಆರೋಗ್ಯ ಮತ್ತು ಯೋಗಕ್ಷೇಮಗಳನ್ನು ಖಾತರಿಗೊಳಿಸಬಹುದು. ಆದರೆ ಹಾಲೀ ಸರ್ಕಾರವು ಬೇಡಿಕೆ ಆಧಾರಿತ ಹಣಕಾಸು ಒದಗಿಸುವ ವ್ಯವಸ್ಥೆಯ (ವಿಮೆ) ಮೇಲೆ ಒತ್ತುಕೊಡುವ ಮೂಲಕ ತನ್ನ ಪಾತ್ರವನ್ನು ಆರೋಗ್ಯ ಸೇವೆಯನ್ನು ದಕ್ಕುವಂತೆ ಮಾಡುವುದಕ್ಕೆ ಮಾತ್ರ ಸೀಮಿತಗೊಳಿಸಿಕೊಳ್ಳುತ್ತಿದೆ ಮತ್ತು ಆರೋಗ್ಯ ಸೇವೆಯನ್ನು ಒದಗಿಸುವ ಜವಾಬ್ದಾರಿಯನ್ನು ಖಾಸಗಿ ಕ್ಷೇತ್ರಕ್ಕೆ ಬಿಟ್ಟುಕೊಡುತ್ತಿದೆ.

ಭಾರತದಲ್ಲಿನ ಆರೋಗ್ಯ ವ್ಯವಸ್ಥೆಯು ಹೆಚ್ಚೆಚ್ಚು ಖಾಸಗೀಕರಣಗೊಳ್ಳುತ್ತಿದೆ. ಇದರಿಂದಾಗಿ ಒಟ್ಟಾರೆ ಆರೋಗ್ಯ ವೆಚ್ಚದ ಬಾಬತ್ತಿನಲ್ಲಿ ಸ್ವಂತ ಜೇಬಿನಿಂದ ಮಾಡುವ ವೆಚ್ಚ (ಔಟ್ ಆಫ್ ಪಾಕೆಟ್–ಒಒಪಿ) ಹೆಚ್ಚಾಗುತ್ತಿದೆ. ಈ ಕಾರಣದಿಂದ ಬಡವರಿಗೆ ಮತ್ತು ಇತರ ಅತಂತ್ರ ವರ್ಗಗಳಿಗೆ ಆರೋಗ್ಯ ರಕ್ಷಣೆಯ ವ್ಯವಸ್ಥೆ ಎಟುಕದಾಗಿದೆ. ಒಂದೋ ಅವರು ಆ ಏರುತ್ತಿರುವ ವೆಚ್ಚಗಳನ್ನು ಭರಿಸಲಾಗುತ್ತಿಲ್ಲ ಅಥವಾ ಅನಿವಾರ್ಯವಾಗಿ ಭರಿಸಲಸಾಧ್ಯವಾದ ವೆಚ್ಚಗಳನ್ನು ಮಾಡಿ ಮತ್ತಷ್ಟು ಬಡತನಕ್ಕೆ ದೂಡಲ್ಪಡುತ್ತಿದ್ದಾರೆ. ಆರೋಗ್ಯ ಸಂಬಂಧೀ ವೆಚ್ಚಗಳಲ್ಲಿ ಔಷಧಿ ಮತ್ತಿತರ ರೋಗ ನಿವಾರಣಾ ವೆಚ್ಚಗಳ ಪಾಲು ಹೆಚ್ಚುತ್ತಿರುವುದರಿಂದಲೇ ಕುಟುಂಬಗಳು ಮಾಡುವ ವೆಚ್ಚದಲ್ಲಿ ಆರೋಗ್ಯ ಸಂಬಂಧೀ ವೆಚ್ಚಗಳ ಪಾಲು ಸಹ ಹೆಚ್ಚಾಗುತ್ತಿದೆ. ಒಟ್ಟಾರೆ ಆರೋಗ್ಯ ಸಂಬಂಧೀ ವೆಚ್ಚಗಳಲ್ಲಿ ಶೇ.40 ಭಾಗ ವೆಚ್ಚವು ಮತ್ತು ಸ್ವಂತ ಜೇಬಿನಿಂದ ಮಾಡುವ ವೆಚ್ಚದಲ್ಲಿ (ಒಒಪಿ)ಅರ್ಧಕ್ಕಿಂತ ಹೆಚ್ಚು ಭಾಗದಷ್ಟು ವೆಚ್ಚಗಳು ಔಷಧಿ ಮತ್ತು ರೋಗ ಪರಿಹಾರ ವೆಚ್ಚಗಳೇ ಆಗಿವೆ. ಈ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರವು 2013ರಲ್ಲಿ ಜಾರಿ ಮಾಡಿದ ಔಷಧಿ ಬೆಲೆ ನಿಯಂತ್ರಣ ಆದೇಶ ಮತ್ತು ಜನೌಷಧಿ ಕೇಂದ್ರಗಳನ್ನು ಹೆಚ್ಚಿಸುವ ಮೂಲಕ ಜನರಿಕ್ ಔಷಧಿಯನ್ನು ವಿಸ್ತರಿಸುವ ಕ್ರಮಗಳು ಸ್ವಾಗತಾರ್ಹವಾಗಿವೆ. ಆದರೆ ಇವು ಎಷ್ಟು ಪರಿಣಾಮಕಾರಿಯಾಗಿವೆ ಎಂಬುದು ಮಾತ್ರ ಚರ್ಚಾರ್ಹ ವಿಷಯವಾಗಿದೆ.

ಅವಶ್ಯಕ ಔಷಧಿಗಳ ಬೆಲೆ ನಿಯಂತ್ರಣದ ವಿಷಯದ ಬಗ್ಗೆ ಕೇಂದ್ರದಲ್ಲಿ ಆಳ್ವಿಕೆ ಮಾಡಿರುವ ಈ ಹಿಂದಿನ ಸರ್ಕಾರಗಳೂ ಕಾಳಜಿ ವ್ಯಕ್ತಪಡಿಸಿದ್ದವು. ಆದರೆ ವಿವಿಧ ಸರ್ಕಾರಗಳು ವಿವಿಧ ಸಂದರ್ಭಗಳಲ್ಲಿ ಕೊಟ್ಟ ಭರವಸೆಗಳನ್ನೇ ಪದೇಪದೇ ಪುನರುಚ್ಚಾರ ಮಾಡುವುದನ್ನು ಬಿಟ್ಟರೆ ಬಡವರಿಗೆ ಅಗ್ಗದ ದರದಲ್ಲಿ ಔಷಧಿಗಳು ದೊರಕುವಂತೆ ಮಾಡುವ ಯಾವುದೇ ಶಾಸನಾತ್ಮಕ ಕ್ರಮಗಳನ್ನು ತೆಗೆದುಕೊಳ್ಳಲಿಲ್ಲ. ಈವರೆಗೆ ರಾಜ್ಯ ಸರ್ಕಾರಗಳೇ ಕೆಲವು ನಿರ್ದಿಷ್ಟ ಕ್ರಮಗಳನ್ನು ತೆಗೆದುಕೊಂಡಿರುವುದು ಮತ್ತು ಕೇಂದ್ರ ಸರ್ಕಾರವು ನ್ಯಾಷನಲ್ ಹೆಲ್ತ್ ಮಿಷನ್ (ರಾಷ್ಟ್ರೀಯ ಆರೋಗ್ಯ ಮಿಷನ್)ನ ಮೂಲಕ ಉಚಿತ ಔಷಧಿ ಮತ್ತು ರೋಗಪತ್ತೆ (ಡಯಾಗ್ನಸ್ಟಿಕ್ ಸರ್ವೀಸ್) ಸೇವೆಗಳನ್ನು ಒದಗಿಸುವ ಮೂಲಕ ಅಲ್ಪಸ್ವಲ್ಪ ಉತ್ತೇಜನವನ್ನು ನೀಡಿರುವುದನ್ನು ಬಿಟ್ಟರೆ ಹೆಚ್ಚೇನೂ ಆಗಿಲ್ಲ. ಈ ನಿಟ್ಟಿನಲ್ಲಿ ಅನುಸರಿಸಲಾಗುತ್ತಿರುವ ನೀತಿಯ ಪ್ರಧಾನ ಒತ್ತಿರುವುದು "ಬೆಲೆ ನಿಯಂತ್ರಣ"ದ ಬಗ್ಗೆ ಮಾತ್ರ. ಆದರೆ ಈವರೆಗೆ ಈ ಬೆಲೆ ನಿಯಂತ್ರಣ ನೀತಿಯು ಅನ್ವಯವಾಗುತ್ತಿರುವುದು ಒಟ್ಟಾರೆ ಔಷದ ಮಾರುಕಟ್ಟೆಯ ಕಾಲುಭಾಗಕ್ಕಿಂತಲೂ ಕಡಿಮೆ ಪ್ರಮಾಣದ ಔಷಧಿಗಳಿಗೆ ಮಾತ್ರ. ಅಷ್ಟು ಮಾತ್ರವಲ್ಲ. ಈವರೆಗಿನ ಔಷಧಿ ಬೆಲೆ ನಿಯಂತ್ರಣ ನೀತಿಯ ಅನುಭವಗಳು ಅಷ್ಟೇನೂ ಪರಿಣಾಮಕಾರಿಯಾಗಿಲ್ಲ. ಉದಾಹರಣೆಗೆ 2017ರ ನವಂಬರ್‌ನಲ್ಲಿ ಔಷಧಿ ಬೆಲೆ ನಿಯಂತ್ರಣ ಪ್ರಾಧಿಕಾರವು ಲಾಸಿಕ್ಸ್ ಎಂಬ ಹೆಸರಿನಲ್ಲಿ ಮಾರಾಟವಾಗುತ್ತಿದ್ದ ಮಕ್ಕಳ ಮೂತ್ರವಿಸರ್ಜನೆಯನ್ನು ನಿಯಂತ್ರಿಸುವ (ಡೈಯೂರಿಟಿಕ್) ಫ್ಯೂರೋಸಿಮೈಡ್ ಔಷಧಿಯ ಬೆಲೆಯನ್ನು ತಲಾ 29 ಪೈಸೆಗೆ ನಿಗದಿಮಾಡಿತು. ಹೀಗಾಗಿ ಆ ಔಷಧಿಯ ಬೆಲೆಯು 100–110 ರೂಗಳಿಂದ 10 ರೂ.ಗಳಿಗೆ ಇಳಿಸಲ್ಪಟ್ಟಿತು. ಆದರೆ ಇದನ್ನು ಉತ್ಪಾದಿಸುತ್ತಿದ್ದ ಉದ್ಯಮಿಗಳು ಪ್ರತೀಕಾರ ದೃಷ್ಟಿಯಿಂದ ಆ ಔಷಧಿಯ ಸರಬರಾಜನ್ನೆ ಕಡಿತ ಮಾಡಿಬಿಟ್ಟರು.



ಭಾರತದ ಸ್ಥಳೀಯ ಔಷಧಿ ಮಾರುಕಟ್ಟೆಯ ರಚನೆಯೇ ಔಷಧಿ ಬೆಲೆ ನಿಯಂತ್ರಣಕ್ಕೆ ತೊಡಕನ್ನುಂಟುಮಾಡುವಂತಿದೆ. ಏಕೆಂದರೆ ಒಟ್ಟಾರೆ ಔಷಧಿ ವ್ಯಾಪಾರದ ಶೇ.40ರಷ್ಟು ಮಾರುಕಟ್ಟೆಯನ್ನು ಕೇವಲ 10 ಕಂಪನಿಗಳು ನಿಯಂತ್ರಿಸುತ್ತವೆ. ಇಂಥಾ ವ್ಯವಸ್ಥೆಯಲ್ಲಿ ಸರ್ಕಾರದ ಔಷಧಿ ಬೆಲೆ ನಿಯಂತ್ರಣ ಆದೇಶದಂತ ಕ್ರಮಗಳು ಬೆಲೆ ನಿಯಂತ್ರಣವನ್ನು ಸಾಧಿಸುವುದಕ್ಕಿಂತ ಬೆಲೆಯನ್ನು ಹಿಡಿತದಲ್ಲಿಟ್ಟುಕೊಂಡಿರುವವರ ಆಸಕ್ತಿಯನ್ನು ಕಾಯುವ ಸಾಧ್ಯತೆ ಹೆಚ್ಚಿರುತ್ತದೆ. ಒಂದು ಔಷಧದ ಬೆಲೆಯ ಮೇಲೆ ಆ ಬ್ರಾಂಡಿನ ಔಷಧ ಮಾರುಕಟ್ಟೆಯಲ್ಲಿ ಶೇ.1ಕ್ಕಿಂತ ಹೆಚ್ಚಿನ ಮಾರುಕಟ್ಟೆ ಪಾಲನ್ನು ಹೊಂದಿರುವ ಬ್ರಾಂಡುಗಳ ಮಾರಾಟ ದರದ ಒಟ್ಟು ಸರಾಸರಿ ಬೆಲೆಯನ್ನು ಮೀರದಂತೆ ನಿರ್ಬಂಧ ಹೇರಲಾಗುತ್ತದೆ. ಆದರೆ ಆ ಔಷಧವನ್ನು ಉತ್ಪಾದಿಸುವ ಎಲ್ಲಾ ಕಂಪನಿಗಳೂ ತಮ್ಮೊಡನೆ ಒಪ್ಪಂದ ಮಾಡಿಕೊಂಡು ಔಷಧದ ದರವನ್ನು ಒಮ್ಮೆಗೆ ಹೆಚ್ಚಿಸಿದರೆ ಸರಾಸರಿ ದರವೂ ಹೆಚ್ಚುವ ಮೂಲಕ ದರ ನಿಯಂತ್ರಣಕ್ಕೆ ಅರ್ಥವೇ ಇಲ್ಲದಂತಾಗುತ್ತದೆ. ಉದಾಹರಣೆಗೆ ಟೈಪ್–2 ಡಯಾಬಿಟೀಸ್‌ಗಾಗಿ ಬಳಸುವ ಮೆಟಫಾರ್ಮಿನ್ ಔಷಧದ ದರವು 1995ರ ಔಷಧಿ ನಿಯಂತ್ರಣ ಆದೇಶದನ್ವಯ ನಿಗದಿಯಾದ ದರಕಿಂತ ಮೂರು ಪಟ್ಟು ಹೆಚ್ಚು ದರದಲ್ಲಿ ಮಾರುಕಟ್ಟೆಯಲ್ಲಿ ಮಾರಾಟವಾಗುತ್ತಿತ್ತು. ಆದರೆ ಅದರ ಮಾರುಕಟ್ಟೆ ದರವನ್ನು ಘೋಷಿಸಿದ್ದು ಮಾತ್ರ ಅದರ ಉತ್ಪಾದಕರೇ ಆಗಿದ್ದರು.

ಮತ್ತೊಂದು ಕಡೆ ಜೆನರಿಕ್ ಔಷದಿಗಳ ಸರಬರಾಜಿನಲ್ಲಿರುವ ಬಹಳಷ್ಟು ಕುಂದುಕೊರತೆಗಳು ಅದರ ಮಾರಾಟದ ಮೇಲೆ ಪರಿಣಾಮ ಬೀರುತ್ತವೆ. ಮಾಧ್ಯಮಗಳಲ್ಲಿ ಬರುತ್ತಿರುವ ವರದಿಯನ್ನು ಗಮನಿಸುವುದಾದರೆ ಸರಬರಾಜಿನ ದೋಷಗಳಿಂದಾಗಿ ಈಗಾಗಲೇ ಅಸ್ಥಿತ್ವದಲ್ಲಿರುವ ಜೆನೆರಿಕ್ ಔಷದಿಗಳ ಮಳಿಗೆಳ ನಿರ್ವಹಣೆ ಅತ್ಯಂತ ಅಸ್ತವ್ಯಸ್ತವಾಗಿವೆ. ಎಷ್ಟು ಔಷಧಿಗಳು ಬೇಕೆಂಬ ಮುಂದಂಜಾನಲ್ಲಿರುವ ಕೊರತೆ, ಪುರಾತನ ಕೊಳ್ಳಾಟದ ವ್ಯವಸ್ಥೆ, ಸಣ್ಣ ಮಾರುಕಟ್ಟೆ ಇವೇ ಇನ್ನಿತ್ಯಾದಿಗಳು ಜನರಿಕ್ ಔಷಧಗಳ ಮಾರಾಟ ವ್ಯವಸ್ಥೆಯಲ್ಲಿ ಹಲವು ತೊಡ 'ಕುಗಳನ್ನುಂಟುಮಾಡುತ್ತವೆ; ಹಾಗೆಯೇ ಜನರಿಕ್ ಔಷಧಿಗಳ ಗುಣಮಟ್ಟದ ಬಗ್ಗೆ ಸ್ಪಷ್ಟತೆ ಇಲ್ಲದಿರುವುದು ಬೇಡಿಕೆಯ ಮೇಲೆಯೇ ಪರಿಣಾಮ ಬೀರುತ್ತದೆ. ಮತ್ತೊಂದು ಕಡೆ ಔಷಧಿ ದರ ನಿಯಂತ್ರಣದ ಬಹುಪಾಲು ಚಟುವಟಿಕೆಗಳು ರಾಜ್ಯ ಸರ್ಕಾರದಡಿ ಇರುವುದರಿಂದ ಅದರ ಅನುಷ್ಠಾನದಲ್ಲಿ ಸಮಾನ ಮತ್ತು ನಿರಂತರವಾದ ಮಾನದಂಡಗಳಿಲ್ಲ. ಇದಲ್ಲದೆ ಮಾರುಕಟ್ಟೆಯಲ್ಲಿ ಇರುವ ನಕಲಿ ಔಷದಗಳ ಪ್ರಮಾಣದ ಬಗ್ಗೆ ಗೊಂದಲ ಮತ್ತು ಗಾಬರಿ ಹುಟ್ಟಿಸುವಂತ ವರದಿಗಳಿವೆ. ಔಷಧ ಉತ್ಪಾದಕರ ಪ್ರಕಾರ ಮಾರುಕಟ್ಟೆಯಲ್ಲಿರುವ ಶೇ.20ರಷ್ಟು ಔಷಧಿಗಳು ಕಳಪೆ ಗುಣಮ್ಮಟ್ಟದವು ಅಥವಾ ನಕಲಿ ಔಷಧಗಳು. ಸರ್ಕಾರದ ಪ್ರಕಾರ ಭಾರತದ ಒಟ್ಟಾರೆ ಔಷಧ ಮಾರುಕಟ್ಟೆಯಲ್ಲಿರುವ ಔಷಧಿಗಳಲ್ಲಿ ಶೇ.10ರಷ್ಟು ಔಷಧಿಗಳು ನಕಲಿಯಾಗಿವೆ. ಅಷ್ಟು ಮಾತ್ರವಲ್ಲದೆ ಕಡಿಮೆ ದರದ ಔಷಧಗಳು ಕಳಪೆಯಾಗಿರುತ್ತವೆ ಎಂಬ ಜನರ ಗ್ರಹಿಕೆಯನ್ನು ನಿವಾರಿಸುವುದು ಸಹ ಅಷ್ಟು ಸುಲಭವಲ್ಲ.

ಭಾರತದ ಸಾರ್ವತ್ರಿಕ ಆರೋಗ್ಯ ಸೇವಾ ನೀತಿ ಚೌಕಟ್ಟು ಸಮಾನತೆ, ಲಭ್ಯತೆ ಮತ್ತು ಎಟುಕುವ ದರದ ಮಾನದಂಡಗಳನ್ನು ಆಧರಿಸಿದೆ; ಹಾಗೂ ಈ ನೀತಿಗಳನ್ನು ಅನುಷ್ಠಾನಕ್ಕೆ ತರುವಾಗ ಕೆಲವು ಬೆಲೆಯನ್ನು ತೆರಲೇ ಬೇಕಾಗುತ್ತದೆ. ಉದಾಹರಣೆಗೆ ಹಾಲಿ ಕೇಂದ್ರ ಸರ್ಕಾರ ಪ್ರಸ್ತಾಪಿಸಿರುವ ವಿಮೆ ಆಧಾರಿತ ಹಣಕಾಸು ಪೂರಣದ ಅಧಾರದಲ್ಲಿ ರೂಪಿತವಾಗಿರುವ ಸಾರ್ವತ್ರಿಕ ಆರೋಗ್ಯ ಸೇವಾ ಯೋಜನೆಯನ್ನು ಗಮನಿಸೋಣ. ಒಂದು ಕಡೆ ಈ ಯೋಜನೆಯು ಬಡವರಿಗೆ ಆರೋಗ್ಯ ಸೇವೆಯು ಲಭ್ಯವಾಗುವಂತೆ ಮಾಡಿದರೂ ಎಟುಕುವ ದರದ ಖಾತರಿಗೆ ಯಾವುದೇ ಕ್ರಮಗಳಿಲ್ಲ. ಇದಕ್ಕೆ ತಕ್ಕ ಹಾಗೆ ಸಾರ್ವಜನಿಕ ಆರೋಗ್ಯ ಸೇವಾ ವ್ಯವಸ್ಥೆಯನ್ನು ಬಲಿಷ್ಠಗೊಳಿಸುವ ಮೂಲಕ ಆರೊಗ್ಯ ಸೇವೆಯ ಸರಬರಾಜನ್ನು ಖಾತರಿಗೊಳಿಸದಿರುವುದರಿಂದ ಈ ಯೋಜನೆಯು ಈಗಾಗಲೇ ಆರೋಗ್ಯ ಸೇವಾ ಕ್ಷೇತ್ರದಲ್ಲಿ ಅಧಿಪತ್ಯ ಸಾಧಿಸಿರುವ ಖಾಸಗಿ ಕ್ಷೇತ್ರಕ್ಕೆ ಅನುಕೂಲಕಾರಿಯಾಗಬಹುದು. ಇಂಥಾ ಸಂದರ್ಭದಲ್ಲಿ ಬೆಲೆ ನಿಯಂತ್ರಣವನ್ನು ಕಟ್ಟುನಿಟ್ಟಾಗಿ ಜಾರಿ ಮಾಡುವ, ಸರಬರಾಜು ವ್ಯವಸ್ಥೆಯನ್ನು ಸುಧಾರಿಸುವ, ಮತ್ತು ಔಷಧಿ ಮಾರುಕಟ್ಟೆಯನ್ನು ಸರಿಯಾಗಿ ಗ್ರಹಿಸುವ ಮೂಲಕ ಮಾತ್ರ "ಬೆಲೆ ನಿಯಂತ್ರಣವು" ಅವಶ್ಯಕ ಔಷಧಿಗಳ ಬೆಲೆಯನ್ನು ನಿಯಂತ್ರಿಸಬಹುದು. ಹಾಗಿಲ್ಲದೆ ಹೋದರೆ ಬೆಲೆ ನಿಯಂತ್ರಣ ಕ್ರಮದಿಂದಾಗಿ ಬೆಲೆ ಕಡಿಮೆಯಾದರೂ ಔಷಧಿಗಳೇ ಲಭ್ಯವಾಗದೆ ಹೋಗಬಹುದು. ಈ ಎರಡೂ ಅಂಶಗಳ ನಡುವೆ ಸಮತೋಲನವನ್ನು ಕೇವಲ ಆರ್ಥಿಕ ಕ್ರಮಗಳಿಂದ ಮಾತ್ರ ಸಾಧಿಸಲು ಸಾಧ್ಯವಿಲ್ಲ. ಅದಕ್ಕೆ ರಾಜಕೀಯ ಇಚ್ಛಾಶಕ್ತಿಯೂ ಬೇಕಾಗುತ್ತದೆ. ಈಗಾಗಲೇ ಸಾಬೀತಾಗಿರುವಂತೆ ಮೂಲಭೂತ ಸೌಕರ್ಯಗಳನ್ನು ಸುಧಾರಣೆ ಮಾಡಿ ಎಲ್ಲರಿಗೂ ಅಗ್ಗದ ದರದಲ್ಲಿ ರೋಗ ಪತ್ತೆ ಸೇವೆಗಳು ಮತ್ತು ಔಷಧಿಗಳು ಲಭ್ಯವಾಗುವಂತಾಗಿ ಬಿಟ್ಟರೆ ಸಾರ್ವಜನಿಕ ಕ್ಷೇತ್ರದ ಮೂಲಕವೇ ಅಗ್ಗದ ದರದ ಆರೋಗ್ಯ ಸೇವೆಯನ್ನು ನೀಡಬಹುದು ಮತ್ತು ಜನರ ಆರೋಗ್ಯ ಮತ್ತು ಯೋಗಕ್ಷೇಮಗಳನ್ನು ಖಾತರಿಗೊಳಿಸಬಹುದು. ಆದರೆ ಹಾಲೀ ಸರ್ಕಾರವು ಬೇಡಿಕೆ ಆಧಾರಿತ ಹಣಕಾಸು ಒದಗಿಸುವ ವ್ಯವಸ್ಥೆಯ (ವಿಮೆ) ಮೇಲೆ ಒತ್ತುಕೊಡುವ ಮೂಲಕ ತನ್ನ ಪಾತ್ರವನ್ನು ಆರೋಗ್ಯ ಸೇವೆಯನ್ನು ದಕ್ಕುವಂತೆ ಮಾಡುವುದಕ್ಕೆ ಮಾತ್ರ ಸೀಮಿತಗೊಳಿಸಿಕೊಳ್ಳುತ್ತಿದೆ ಮತ್ತು ಆರೋಗ್ಯ ಸೇವೆಯನ್ನು ಒದಗಿಸುವ ಜವಾಬ್ದಾರಿಯನ್ನು ಖಾಸಗಿ ಕ್ಷೇತ್ರಕ್ಕೆ ಬಿಟ್ಟುಕೊಡುತ್ತಿದೆ.

ಕೃಪೆ: Economic and Political WeeklyAug 25, 2018. Vol. 53. No.34

ಅನು: ಶಿವಸುಂದರ್

ಅಗಣಿತ ವೈವಿಧ್ಯಕ್ಕೆ ಸಂವಿಧಾನದಿಂದ ಗೌರವ..... ಪುಟ 16 ರಿಂದ

ನೀತಿಯಾಗಿತ್ತು. ಅವೆಲ್ಲವೂ ಒಂದು ಸರ್ವಸಮ್ಮತ ರಾಜಕೀಯ ನೀತಿಯಾಗಿದ್ದು ಸಂವಿಧಾನದಲ್ಲೇ ಎಂದು ನ್ಯಾ. ದಾಸ್ ಸ್ಪಷ್ಟ ಪಡಿಸಿದರು.

ಭಾರತದ ಭವಿಷ್ಯ ಕಟ್ಟುವವರು ಯುವಜನ ವಿದ್ಯಾರ್ಥಿಗಳು. ಅವರಿಗೆ ನಮ್ಮ ಪ್ರಪಂಚದಲ್ಲೇ ಮಹತ್ವದ್ದು ಎಂದು ಒಪ್ಪಿಕೊಂಡ ಭಾರತದ ಸಂವಿಧಾನವನ್ನು ಅಭಿಯಾನ ಮಾಡಿ ತಿಳಿಸೋಣ. ಈ ನಿಟ್ಟಿನಲ್ಲಿ ಸಹಯಾನ ಮತ್ತು ಸಮುದಾಯ ಪ್ರಯತ್ನಕ್ಕೆ ನಾವೆಲ್ಲ ಜೊತೆಯಾಗೋಣ. ನಿರ್ದೇಶಕ ತತ್ವ ದಲ್ಲಿ ಹೇಳಿದ ಮನೆ, ನಿವೇಶನ, ಉದ್ಯೋಗ ಆಶಯ ಈಡೇರಿಸಬೇಕಿದೆ. ಸ್ವತಂತ್ರ ಭಾರತಕ್ಕೆ ಗಣರಾಜ್ಯ ದ ಸ್ವರೂಪ ತಂದುಕೊಟ್ಟ ಸಂವಿಧಾನ ಭಾರತ ನಿರ್ಮಾಣದ ಭದ್ರ ತಳಪಾಯ. ಈ ತಳಪಾಯ ಕಳೆದುಕೊಂಡರೆ ಅರಾಜಕತೆ ಉಂಟಾಗಲಿದೆ, ಈ ಅರಾಜಕತೆಯ ಮೊದಲ ಬಲಿಪಶು ಕಾನೂನು ಮತ್ತು ನ್ಯಾಯ ವ್ಯವಸ್ಥೆ. ಅದ್ದರಿಂದ ಸಂವಿಧಾನದ ರಕ್ಷಣೆ ನಮ್ಮೆಲ್ಲರ ತುರ್ತು ಅಗತ್ಯ ಎಂದು ನ್ಯಾ. ದಾಸ್ ಕರೆ ನೀಡಿದರು.

ಈ ಸಂದರ್ಭದಲ್ಲಿ ಬೆಂಗಳೂರು ಸೆಂಟ್ರಲ್ ವಿ.ವಿ.ಉಪ ಕುಲಪತಿ ಜಾಪೆಟ್. ಬೆಂಗಳೂರು ವಕೀಲರ ಸಂಘದ ಅಧ್ಯಕ್ಷ ಎ ಪಿ.ರಂಗನಾಥ್ ಮಾತನಾಡಿ ರಾಜ್ಯವ್ಯಾಪಿ 'ಸಂವಿಧಾನ ಓದು' ಅಭಿಯಾನಕ್ಕೆ ತಮ್ಮ ಸಂಸ್ಥೆಗಳ ಬೆಂಬಲ ವ್ಯಕ್ತಪಡಿಸಿದರು. ಸಹಯಾನದ ಡಾ. ವಿಠ್ಠಲ ಭಂಡಾರಿ ಪ್ರಾಸ್ತಾವಿಕವಾಗಿ ಮಾತನಾಡುವುದಲ್ಲದೆ, ಕಾರ್ಯಕ್ರಮದ ನಿರೂಪಣೆ ನಿರ್ವಹಿಸಿದರು. ಸಮುದಾಯ ಕರ್ನಾಟಕದ ಪ್ರಧಾನ ಕಾರ್ಯದರ್ಶಿ ದೇವೇಂದ್ರ ಗೌಡ ಸ್ವಾಗತಿಸಿದರು. ಸಮುದಾಯ ಕರ್ನಾಟಕದ ಉಪಾಧ್ಯಕ್ಷ ಸುರೇಂದ್ರ ರಾವ್ ವಂದನಾರ್ಪಣೆ ಮಾಡಿದರು. ಪಿಚ್ಚಳ್ಳಿ ಶ್ರೀನಿವಾಸ್ ಅವರು ಡಾ. ಅಂಬೇಡ್ಕರ್ ಮತ್ತು ಸಂವಿಧಾನದ ಬಗೆಗಿನ ಅಪರೂಪದ ಹಾಡುಗಳನ್ನು ಕಾರ್ಯಕ್ರಮದ ಮೊದಲಿಗೆ ಹಾಗೂ ಕೊನೆಗೆ ಹಾಡಿ ಇನ್ನಷ್ಟು ಅರ್ಥಪೂರ್ಣವಾಗಿಸಿದರು.

JANASHAKTHI KANNADA VARA PATRIKE SEP 3-9, 2018 Price: Rs. 10/- Date of Publication: 31 AUGUST 2018 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283

'ಸಂವಿಧಾನ ಓದು' ಅಭಿಯಾನದ ಸಂಭ್ರಮದ ಉದ್ಘಾಟನೆ

ಅಗಣಿತ ವೈವಿಧ್ಯಕ್ಕೆ ಸಂವಿಧಾನದಿಂದ ಗೌರವ ಪ್ರಾಪ್ತಿ: ಬಿಳಿಮಲೆ

ಯಶವಂತ ಮದ್ದೂರು

ಭಾರತದ ಸಮಸ್ತ ಅಗಣಿತ ವೈವಿಧ್ಯಕ್ಕೆ ಗೌರವ ಘನತೆ ತಂದು ಕೊಟ್ಟದ್ದು ಹಾಗೂ ರಕ್ಷಣೆ ಸಿಕ್ಕಿದ್ದು ಸಂವಿಧಾನದಿಂದ ಮಾತ್ರ ಎಂದು ನವದೆಹಲಿ ಜೆಎನ್ ಯು ಪ್ರಾಧ್ಯಾಪಕ ಪ್ರೊ. ಪುರುಷೋತ್ತಮ ಬಿಳಿಮಲೆ ಪ್ರತಿಪಾದಿಸಿದರು. ಅವರು ಬೆಂಗಳೂರಿನ ಸೆನೆಟ್ ಹಾಲ್ ನಲ್ಲಿ ಸಮುದಾಯ, ಸಹಯಾನ ಹಾಗೂ ಬೆಂಗಳೂರು ಸೆಂಟ್ರಲ್ ವಿ.ವಿ. ಜಂಟಿಯಾಗಿ ಸಂಘಟಿಸಿದ್ದ ಸಂವಿಧಾನ ಓದು ಅಭಿಯಾನದ ಉದ್ಘಾಟನೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡುತ್ತಿದ್ದರು. ಜಗತ್ತಿನಲ್ಲಿ ಬಳಕೆಯಲ್ಲಿರುವ ಭಾಷೆಗಳಿಗಿಂತ ನಾಲ್ಕು ಪಟ್ಟು ಹೆಚ್ಚು ಭಾಷೆಗಳು ಬಳಕೆಯಲ್ಲಿರುವ ಭಾರತವು ಧರ್ಮ, ಜನಾಂಗ, ಆಚರಣೆ, ಸಾಹಿತ್ಯ ಮುಂತಾದ ಅನೇಕ ವಿಷಯದಲ್ಲಿ ಅಪಾರ ವೈವಿಧ್ಯತೆಯನ್ನು ಹೊಂದಿದೆ. ಇಂತಹ ಎಲ್ಲಾ ವಿಭಿನ್ನತೆಗಳನ್ನು ರಕ್ಷಿಸಿ ಗೌರವಿಸುವ ಮಹಾನ್ ಉದ್ದೇಶವನ್ನು ಸಂವಿಧಾನ ಸಾಧಿಸಿದೆ. ಹಲವಾರು ಶಾಸ್ತ್ರ, ಪುರಾಣ, ಧಾರ್ಮಿಕ ಆಚರಣೆಗಳ ಆಧಾರಿತ ನ್ಯಾಯ ವ್ಯವಸ್ಥೆಯನ್ನು ಬದಲಿಸಿ, ಸರ್ವರಿಗೂ ಸಮಾನ ಹಕ್ಕು, ಅವಕಾಶವನ್ನು ನಮ್ಮ ಸಂವಿಧಾನ ಒದಗಿಸುವ ಮೂಲಕ ಭಾರತೀಯರನ್ನು ಪೌರರನ್ನಾಗಿ ಪರಿವರ್ತಿಸಿದೆ. ಸ್ವಾತಂತ್ರ್ಯ ಸಮಾನತೆ, ಸಾಮಾಜಿಕ ನ್ಯಾಯ ಬಹುತ್ವ ಬಹುಜನಾಂಗೀಯತೆ, ಬಹುಭಾಷಿಯತೆ ಬಹು ಸಾಹಿತ್ಯ ಇವೆಲ್ಲವನ್ನೂ ರಕ್ಷಿಸುವ, ಇಂತಹ ಮಹಾನ್ ಗ್ರಂಥವಾದ ಸಂವಿಧಾನ ವಿರೋಧಿಸುವವರು ಭಾರತ ವಿರೋಧಿಗಳು. ಎಂದು ವಿಶ್ಲೇಷಿಸಿದರು. ಸಂಸತ್ತು ಭವನದ ಸಮೀಪದಲ್ಲೇ ಸಂವಿಧಾನ ಸುಟ್ಟರೂ ಪ್ರಕರಣ ದಾಖಲಿಸಲು ಹತ್ತು ದಿನ ಬೇಕಾಯಿತು. ಆದರೆ ಜೆ.ಎನ್.ಯು ನಲ್ಲಿ ಏನು ನಡೆದರೂ, ಸಾವಿರಗಟ್ಟಲೆ ಪೋಲೀಸರು ಸುತ್ತುವರಿಯುತ್ತಾರೆ. ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಭಾರತದ ಅಗಣಿತ ವೈವಿಧ್ಯದ ಬಗ್ಗೆ ಪ್ರೊ. ಬಿಳಿಮಲೆ ಹಲವು ವಿವರಗಳನ್ನು ನೀಡಿದರು. 2011 ರ ಜನಗಣತಿ ಯಲ್ಲಿ 19569 ಭಾಷೆಗಳನ್ನು ಮಾತೃಭಾಷೆ ಗಳೆಂದು ದಾಖಲಿಸಿದ್ದಾರೆ. 4500 ಸಮುದಾಯಗಳು, 29 ರಾಜ್ಯಗಳು, ಸಾವಿರಾರು ಧರ್ಮಾಚರಣೆಗಳು, ಸಾವಿರಾರು ಬಗೆಯ ಸಾಹಿತ್ಯಗಳು ಇವೆ. ಸಂಸ್ಕೃತ ಕೂಡ ವೈವಿಧ್ಯವಾಗಿದೆ. ವ್ಯಾಸ ರಚಿತ ಎನ್ನಲಾಗುವ ಮಹಾಭಾರತಗಳ ಸಂಖ್ಯೆ 1123 ರಷ್ಟಿದೆ ಎಂದರು.



ನ್ಯಾಯಮೂರ್ತಿ ಹೆಚ್ ಎನ್ ನಾಗಮೋಹನದಾಸ್ ರವರ ಕೃತಿ ಸಂವಿಧಾನ ಓದು ಬಿಡುಗಡೆ ಮಾಡಿದ ಮಾಜಿ ಸಭಾಪತಿ ಬಿ.ಎಲ್.ಶಂಕರ್ ರವರು ಪುಸ್ತಕ ಪರಿಚಯ ಮಾಡುತ್ತಾ ಸಂವಿಧಾನದ ಆಶಯಗಳು, ಮೂಲತತ್ವಗಳ ಪರಿಚಯ ಇಂದಿನ ಯುವಜನರಿಗೆ ಅತಿ ಅಗತ್ಯವಾಗಿ ಮಾಡಬೇಕಾಗಿದೆ. ಸಂವಿಧಾನ ಮಾತ್ರವೇ ಭಾರತಕ್ಕೆ ಇರುವ ಏಕೈಕ ಗ್ರಂಥ. ಮಿಕ್ಕೆಲ್ಲವೂ ಖಾಸಗಿ ಬದುಕಿನ ಗ್ರಂಥಗಳು. ನಮ್ಮ ದೈನಂದಿನ ಎಲ್ಲ ಸಾರ್ವಜನಿಕ ಚಟುವಟಿಕೆಗಳ ದಿಕ್ಸೂಚಿ. ಸಂವಿಧಾನದ ಅರಿವು ಪ್ರತಿಯೊಬ್ಬರಿಗೂ ತಲುಪುವಂತೆ ಮುತುವರ್ಜಿ ಬೇಕಾಗಿದೆ. ಇತ್ತೀಚೆಗೆ ಸಂವಿಧಾನ ಆಶಯಗಳಿಗೆ ವಿರುದ್ಧವಾದ ಬೆಳವಣಿಗೆಗಳು ಹೆಚ್ಚುತ್ತಿರುವುದು ಆತಂಕಕಾರಿ ಎಂದು ಕಳವಳ ವ್ಯಕ್ತಪಡಿಸಿದರು. ಸಾಮಾಜಿಕ ಕಾರ್ಯಕರ್ತರೂ ವಕೀಲರೂ ಆದ ಅಖಿಲ ವಿದ್ಯಾಸಂದ್ರ ಅವರೂ ಪುಸ್ತಕದ ಬಗ್ಗೆ ಮಾತನಾಡಿದರು. ಅವರಿಬ್ಬರೂ ಈ ಪುಸ್ತಕ ನಿಜವಾಗಿಯೂ ಒಬ್ಬ ಹೈಸ್ಕೂಲ್ ವಿದ್ಯಾರ್ಥಿಗೂ, ಜನಸಾಮಾನ್ಯರೂ ಆಸಕ್ತಿಯಿಂದ ಓದಬಹುದಾದ ಪುಸ್ತಕ. ಪುಸ್ತಕದ ಭಾಷೆ, ಶೈಲಿ ಸರಳ ಮಾತ್ರವಲ್ಲ, ಕುತೂಹಲಕಾರಿಯಾಗಿದ್ದು ಓದಿಸಿಕೊಂಡು ಹೋಗುತ್ತದೆ ಎಂದು ಉದ್ಗರಿಸಿದರು.



ಈಗಿರುವ ಸಂವಿಧಾನ ಕಳಕೊಂಡರೆ ಅರಾಜಕತೆ ಬರುತ್ತದೆ. ಭಾರತದ ಎಲ್ಲಾ ಧರ್ಮ ಜಾತಿ ಜನಾಂಗದವರ ಸಂರಕ್ಷಣೆ ಮಾಡುವುದೇ ಸಂವಿಧಾನ. ಭಾರತದ ಇದೂವರೆಗಿನ ಪ್ರಗತಿಗೆ ಕಾರಣ 1949 ರಲ್ಲಿ ಅಂಗೀಕರಿಸಿದ ಸಂವಿಧಾನ. ಈಗ ಗಂಡಾಂತರ ಪರಿಸ್ಥಿತಿಯಲ್ಲಿದ್ದೇವೆ. ಎಲ್ಲಾ ಕಾಯ್ದೆಗಳ ತಾಯಿ ಸಂವಿಧಾನ. ಇದನ್ನು ಅರ್ಥ ಮಾಡಿಕೊಂಡು ಅದರ ಮೂಲತತ್ವ ಮೈಗೂಡಿಕೊಳ್ಳುವುದು ಇಂದಿನ ತುರ್ತು, ಎಂದರು ಮುಖ್ಯ ಅತಿಥಿಯಾಗಿ ಮಾತಾನಾಡಿದ ಕೃತಿ ಲೇಖಕ ನ್ಯಾಯಮೂರ್ತಿ ಹೆಚ್ .ಎನ್ .ನಾಗಮೋಹನ್ ದಾಸ್. ಮುಂದುವರೆದು, ಭಾರತದ ಸಂವಿಧಾನ ಕತೆ ಕಾದಂಬರಿ ಕವಿತೆಯಲ್ಲ. ಇದೊಂದು ರಾಜಕೀಯ ಕಾರ್ಯಕ್ರಮ. ಹಿಂದುಳಿದ ಮೂಡನಂಬಿಕೆಯ ಅಜ್ಞಾನದ ಅಶಿಕ್ಷಿತ ಸಮಾಜವನ್ನು ಬದಲಾಯಿಸಿಕೊಂಡು ಹೋಗುವುದೇ ಸಂವಿಧಾನ, ಎಂದರು. ಸಮಾನತೆ, ಬಂಧುತ್ವದ ಆಶಯಗಳನ್ನು ಬುದ್ಧ, ಬಸವ, ಭಕ್ತಿ ಪಂಥ ಮುಂತಾದ ಮಹಾವ್ಯಕ್ತಿಗಳು ಚಳುವಳಿಗಳು ಜನಜನಿತಗೊಳಿಸಿದ್ದರೂ, ಅದು ನೈತಿಕ ಅಥವಾ ಸಾಮಾಜಿಕ


ಪುಟ 15 ಕ್ಕೆ

ಸೆನೆಟ್ ಹಾಲ್ ತುಂಬಿ ತುಳುಕಿತು

ಯಾವುದೇ ಕಾರ್ಯಕ್ರಮಕ್ಕಾದರೂ ಸೆನೆಟ್ ಹಾಲ್ ತುಂಬುವುದೇ ಅಪರೂಪ. 'ಸಂವಿಧಾನ ಓದು' ಉದ್ಘಾಟನೆ ಕಾರ್ಯಕ್ರಮ ಆರಂಭದಲ್ಲೇ ವಿದ್ಯಾರ್ಥಿಗಳು, ಶಿಕ್ಷಕರು, ವಕೀಲರು, ಸಾಮಾಜಿಕ ಕಾರ್ಯಕರ್ತರು ಮತ್ತು ಇತರ ಆಸಕ್ತರಿಂದ ಹಾಲ್ ತುಂಬಿತ್ತು. ಆದರೂ ಇನ್ನಷ್ಟು ಜನ ಬರುತ್ತಲೇ ಇದ್ದು, ಇನ್ನೂರರಷ್ಟು ಕುರ್ಚಿಗಳನ್ನು ತರಿಸಿ ವೇದಿಕೆಯ ಅಕ್ಕ ಪಕ್ಕ ಹಿಂದೆ–ಮುಂದೆ ಎಲ್ಲ ಕಡೆ ಹಾಕಬೇಕಾಯಿತು. ಸುಮಾರು 500ಕ್ಕೂ ಹೆಚ್ಚು ಜನ ಭಾಗವಹಿಸಿದ್ದರು. ಈ ತುಂಬಿದ ಸಭೆ ಪುಸ್ತಕ ಬಿಡುಗಡೆಯಾದ ನಂತರ ಸಂವಿಧಾನದ ಪೀಠಿಕೆಯನ್ನು ಪ್ರೊ. ಬಿಳಿಮಲೆ ಓದಿಸುವ ಮೂಲಕ ಸಂವಿಧಾನ ಎತ್ತಿ ಹಿಡಿಯುವ ಪ್ರತಿಜ್ಞೆಯನ್ನು ಕೈಗೊಂಡರು.

300 'ಸಂವಿಧಾನ ಓದು' ಕಾರ್ಯಾಗಾರಗಳ ಅಭೂತಪೂರ್ವ ಅಭಿಯಾನಕ್ಕೆ ನಾಂದಿ

ಮಧ್ಯಾಹ್ನ ಊಟದ ನಂತರ ಸೆನೆಟ್ ಹಾಲಿನಲ್ಲೇ 'ಸಂವಿಧಾನ ಓದು' ಕಾರ್ಯಾಗಾರ ನಡೆಯಿತು. ನ್ಯಾ. ನಾಗಮೋಹನ್ ದಾಸ್ ಪವರ್–ಪಾಯಿಂಟ್ ಪ್ರೆಸೆಟೇಶನ್ ಸಹಾಯದಿಂದ ಪುಸ್ತಕದ ಸಾರಾಂಶವನ್ನು ಪ್ರಸ್ತುತ ಪಡಿಸಿದರು. ಆ ಮೇಲೆ ವಿವರವಾದ ಪ್ರಶ್ನೋತ್ತರವೂ ನಡೆಯಿತು. ಈ ಕಾರ್ಯಾಗಾರದ ಉದ್ದೇಶ 'ಸಂವಿಧಾನ ಓದು' ಅಭಿಯಾನದಲ್ಲಿ ರಾಜ್ಯದ ನೂರಾರು ಕಡೆ ತಳಮಟ್ಟದಲ್ಲಿ ಸುಮಾರು 50–100 ವಿದ್ಯಾರ್ಥಿಗಳ ತಂಡಕ್ಕೆ 'ಸಂವಿಧಾನ ಓದು' ಕಾರ್ಯಾಗಾರ ನಡೆಸುವ ಆಸಕ್ತಿ ಮತ್ತು ಹಿನ್ನೆಲೆ ಹೊಂದಿರುವ ಸಂಪನ್ಮೂಲ ವ್ಯಕ್ತಿಗಳ ತರಬೇತಿಗೆ ಆಗಿತ್ತು. ಸುಮಾರು ನೂರರಷ್ಟು ಶಿಕ್ಷಕರು, ವಕೀಲರು, ಸಾಮಾಜಿಕ ಕಾರ್ಯಕರ್ತರು ಮತ್ತು ಇತರ ಆಸಕ್ತರು ಮೊದಲೇ ನೊಂದಣಿ ಮಾಡಿಸಿದ್ದರು. ಅವರೆಲ್ಲ ಬಂದಿದ್ದಲ್ಲದೆ, ಬೆಳಿಗ್ಗೆ ಅಭಿಯಾನದ ಉದ್ಘಾಟನೆಗೆ ಬಂದಿದ್ದ ಹಲವರು ಹಠ ಹಿಡಿದು ಕಾರ್ಯಾಗಾರದಲ್ಲಿ ಭಾಗವಹಿಸಿದರು. ಒಟ್ಟು ಸುಮಾರು 300 ಜನ ಭಾಗವಹಿಸಿದ್ದರು. ಭಾಗವಹಿಸಿದ್ದ ಎಲ್ಲರೂ ಸರಾಸರಿ ಒಂದೇ ತಳಮಟ್ಟದ ಕಾರ್ಯಾಗಾರ ನಡೆಸುತ್ತಾರೆ ಎಂದಿಟ್ಟುಕೊಂಡರೂ ರಾಜ್ಯದಾದ್ಯಂತ ಸುಮಾರು 300 ಕಾರ್ಯಾಗಾರಗಳ ಅಭೂತಪೂರ್ವ ಅಭಿಯಾನದ ಶುಭಾರಂಭಕ್ಕೆ ಈ ಕಾರ್ಯಾಗಾರ ನಾಂದಿ ಹಾಡಿತು ಎನ್ನಬಹುದು.



'ಸಂವಿಧಾನ ಓದು' ಅಭಿಯಾನ – ಏನಿದು?

(ಸಂಘಟಕರ ಪತ್ರಿಕಾ ಹೇಳಿಕೆಯಿಂದ ಆಯ್ದ ಭಾಗ)

ಜಾತಿ, ಧರ್ಮ, ಭಾಷೆ, ವರ್ಗ, ಲಿಂಗ ಎಂಬ ಭೇದ ಎಣಿಸದೆ ದೇಶದ ನಾಗರಿಕರೆಲ್ಲರಿಗೂ ಸಮಾನತೆಯನ್ನು ಸಾರಿದ ಭಾರತದ ಸಂವಿಧಾನ ಕುರಿತು ಯುವಜನರಿಗೆ ಮತ್ತು ವಿದ್ಯಾರ್ಥಿಗಳಿಗೆ ಅರಿವು ಮೂಡಿಸುವ ಸಲುವಾಗಿ ರಾಜ್ಯವ್ಯಾಪಿ "ಸಂವಿಧಾನ ಓದು" ಅಭಿಯಾನವನ್ನು ಹಮ್ಮಿಕೊಳ್ಳಲಾಗಿದೆ. ನಮ್ಮ ಸಂವಿಧಾನದ ಆಶಯಗಳನ್ನು ಜನಸಾಮಾನ್ಯರಿಗೆ ಅದರಲ್ಲಿಯೂ ಭಾರತದ ಭವಿಷ್ಯವನ್ನು ನಿರ್ಮಾಣ ಮಾಡುವ ಶಿಕ್ಷಕ ವೃಂದ ಮತ್ತು ವಿದ್ಯಾರ್ಥಿಗಳಿಗೆ ಸರಳವಾಗಿ ತಿಳಿಸಬಲ್ಲ ಮಾರ್ಗವಾಗಲು ನ್ಯಾ. ನಾಗಮೋಹನ ದಾಸ್‌ರವರು ಕೃತಿಯೊಂದನ್ನು ರಚಿಸಿದ್ದಾರೆ. ಈ ಕೃತಿಯ ಮೂಲಕ ನಮ್ಮ ಸಂವಿಧಾನ ಹುಟ್ಟಿದ ಬಗೆ, ಮತ್ತು ವಿಶ್ವದ ಇತರ ಸಂವಿಧಾನಗಳು ಹೇಗೆ ರಚನೆಯಾದವು ಮತ್ತು ನಮ್ಮ ಸಂವಿಧಾನವನ್ನು ನಮ್ಮ ಬದುಕಿನ ಕ್ರಮವಾಗಿ ಹೇಗೆ ರೂಢಿಸಿಕೊಳ್ಳಬೇಕೆನ್ನುವ ಆಲೋಚನೆಯನ್ನು ವಿದ್ಯಾರ್ಥಿಗಳಲ್ಲಿ ಮೂಡಿಸಬಹುದಾಗಿದೆ.

ಇತ್ತೀಚಿನ ದಿನಗಳಲ್ಲಿ ಸಂವಿಧಾನದ ಆಶಯಗಳ ಮೇಲೆಯೇ ಗದಾಪ್ರಹಾರ ನಡೆಯುತ್ತಿರುವುದು ಆತಂಕಕಾರಿ ವಿಷಯವಾಗಿದೆ. ದಲಿತರು, ದಮನಿತರು, ಮಹಿಳೆಯರ ವಿಷಯದಲ್ಲಿ ಸಂವಿಧಾನದ ಆಶಯಗಳು ಇನ್ನೂ ಪೂರ್ಣವಾಗಿ ಕೈಗೂಡದ ಕನಸಿನ ಗಂಟಾಗಿದೆ. ಆದರೂ ಸ್ವತಂತ್ರ ಭಾರತದ ಏಳು ದಶಕಗಳ ಸಾಧನೆಗಳು ಗಮನಾರ್ಹವಾಗಿದ್ದು, ಅದು ಸಾಧ್ಯವಾಗಿರುವುದು ಸಂವಿಧಾನದ ಆಶಯಗಳು ಭಾಗಶಃವಾಗಿಯಾದರೂ ಜಾರಿಯಾಗಿರುವುದರಿಂದ. ಪೂರ್ಣಜಾರಿಯ ಅಭಾವದ ಬಗ್ಗೆ ಇರುವ ಅತೃಪ್ತಿಗಳನ್ನು ಬಳಸಿ, ಹುಸಿ ಸಂಸ್ಕೃತಿಯ ಪ್ರಚಾರದ ಮೂಲಕ ಸಂವಿಧಾನದ ಮೂಲ ಆಶಯಗಳ ಮೇಲೆ ದಾಳಿ ಮಾಡುತ್ತಾ, ನಮ್ಮ ಯುವಪೀಳಿಗೆಯನ್ನು ದಿಕ್ಕುಗೆಡಿಸುವ ಪ್ರಯತ್ನ ನಡೆಯುತ್ತಿದೆ. ಈ ಸಂದರ್ಭದಲ್ಲಿ ಯುವಜನತೆಗೆ ಅರ್ಥವಾಗುವಂತೆ ಮತ್ತು ಜೀವನ ಕ್ರಮವಾಗಿ ಸಂವಿಧಾನವನ್ನು ಅಳವಡಿಸಿಕೊಳ್ಳುವಂತೆ ಪ್ರೇರೇಪಿಸುವ ಅಗತ್ಯವಿದೆ. ನಮ್ಮನ್ನು ಕಾಪಾಡಬೇಕಾದ ಸಂವಿಧಾನವನ್ನು ನಾವು ಕಾಪಿಟ್ಟುಕೊಳ್ಳಬೇಕಾದ ಗಳಿಗೆಯಿದು.

ಈ ಪುಸ್ತಕವನ್ನು ಆಕರವಾಗಿಟ್ಟುಕೊಂಡು ರಾಜ್ಯದಾದ್ಯಂತ ಒಂದು ಅಭಿಯಾನವನ್ನು ನಡೆಸುವ ಆಶಯ ನಮ್ಮದು. ಈ ಆಶಯದ ಭಾಗವಾಗಿ ರಾಜ್ಯದ ವಿವಿಧ ಭಾಗಗಳಿಂದ ಆಯ್ದ 100–120 ಜನರು ಒಟ್ಟಿಗೇ ಸೇರಿ ಈ ಸಂವಿಧಾನದ ಕುರಿತ ಪುಸ್ತಕದ ಮೂಲಕ ಸಂವಿಧಾನವನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುವುದು. ಮತ್ತು ಮುಂದೆ ಕೆಳಹಂತದಲ್ಲಿಯೂ ಹೀಗೆ ಚರ್ಚೆ, ಮಾತುಕತೆ, ಸಂಕಿರಣ ಸಂವಾದಗಳ ಮೂಲಕ ರಾಜ್ಯದಾದ್ಯಂತ ಸಂವಿಧಾನದ ಅಭಿಯಾನ ನಡೆಸುವುದು, ನಮ್ಮ ಉದ್ದೇಶ.

ವಾರದಲ್ಲಿ 8000 ದಾಖಲೆ ಮಾರಾಟ !

ಸಹಯಾನ, ಸಮುದಾಯ ಸೇರಿ ಹೊರತಂದ ನ್ಯಾ. ನಾಗಮೋಹನ ದಾಸ್ ಅವರ "ಸಂವಿಧಾನ ಓದು" ಕೃತಿ ಬಿಡುಗಡೆಯಾದ ಎರಡು ಮೂರು ಗಂಟೆಯಲ್ಲಿ 2000 ಪ್ರತಿ ಮಾರಾಟವಾಗಿ ದಾಖಲೆ ನಿರ್ಮಿಸಿತು. ಸಂಜೆ ಸಮಾರಂಭ ಮುಗಿದಾಗ ನೂರಾರು ಜನಕ್ಕೆ ಪುಸ್ತಕ ಸಿಕ್ಕದೆ ನಿರಾಸೆಯಾಯಿತು. ಅಭಿಯಾನ ಆರಂಭವಾಗಿ ಒಂದು ವಾರದ ಒಳಗೆ 8000 ಪ್ರತಿಗಳು ಮಾರಾಟವಾಗಿದೆ. ಈ ದಾಖಲೆ ಮಾರಾಟ ಸಂವಿಧಾನದ ಬಗ್ಗೆ ಜನರಿಗೆ ಇರುವ ಅರಿವಿನ ದಾಹವನ್ನು ತೋರಿಸುತ್ತದೆ.

JANASHAKTHIKANNADAVARAPATRIKE: Printed, Published by **G.V.SRIRAMAREDDY**, EMS Bhavana, No.37/A, 8th Cross, Mahalakshmi Layout, BANGALORE-560086 Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**